MADAM SPEAKER.—The house will now stand adjourned and meet at 3-00 P.M.

The House adjourned at Eighteen Minutes past Two of the clock and reassembled at Four Minutes past Three of the clock.

[MADAM SPEAKER in the Chair]

ADJOURNMENT MOTION

re : Strike of by the Teachers

Sri H. D. DEVE GOWDA.—I move. "That the Assembly do now adjourn"

MADAM SPEAKER.—Motion moved ;

"That the Assembly do now adjourn"

†ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣೀಯವರೇ, ರಾಜ್ಯದ ಶಿಕ್ಷಕರ ಪ್ರತಿಭಟನೆ ಏನು ಇದೆ. ಈ ಪ್ರತಿಭಟನೆ ಬಹುಶಃ ಕಳೆದ 3 ವರ್ಷಗಳಿಂದ ಅವರು ಸರ್ಕಾರಕ್ಕೆ ಸಲ್ಲಿಸಿರತಕ್ಕ ನ್ಯಾಯವಾದ ಬೇಡಿಕೆಗಳು ಏನು ಇವೆ, ಆ ಬೇಡಿಕೆಗಳನ್ನು ಸರ್ಕಾರದವರು ಪರಿಶೀಲಿಸಿ ಮುಂಜಾಗ್ರತೆಯಾಗಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದರೆ, ಬಹುಶಃ ಇವತ್ತು ಶಿಕ್ಷಕರು ಬೀದಿಗೆ ಇಳಿದು ಪ್ರತಿಭಟನೆಯನ್ನು ಸಲ್ಲಿಸತಕ್ಕಂಥ ಪರಿಸ್ಥಿತಿ ಬರುತ್ತಾ ಇರಲಿಲ್ಲ ಎನ್ನತಕ್ಕಂಥದ್ದು ನನ್ನ ಭಾವನೆ. ಸುಮಾರು 7 ಸಾವಿರ ಶಿಕ್ಷಕರು ಇವತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ವ್ಯಾಲ್ಯುಯೇಷನ್ ಮಾಡತಕ್ಕಂಥ ಸಂದರ್ಭದಲ್ಲಿ ಅವರಿಗೆ ಕೊಡತಕ್ಕಂಥ ದಿನಭತ್ಯ ಏನು ಇದೆ ಮತ್ತು ಪ್ರಶ್ನೆ ಪತ್ರಿಕೆಗಳಿಗೆ ಸರ್ಕಾರದವರು ಕೊಡುತ್ತಾ ಇರತಕ್ಕಂಥ ಮೌಲ್ಯವೇನು ಇದೆ, ಅದು ಸುಮಾರು 30 ವರ್ಷಗಳ ಹಿಂದೆ ನಿಗದಿ ಮಾಡಿದಂಥದ್ದು ಎಂದು ಹೇಳಿದರೆ ತಪ್ಪಿಲ್ಲ. ಬಹುಶಃ ಕಳೆದ 3 ವರ್ಷಗಳಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು ಅಂಥ ಹೇಳಿದ್ದಾರೆ, ಇದರ ಬಗ್ಗೆ ಹಲವಾರು ಬೇಡಿಕೆಗಳನ್ನು ಸಹ ಕೊಟ್ಟಿದ್ದಾರೆ. 3 ವರ್ಷಗಳಿಂದ ಸರ್ಕಾರ ಇದರ ದಿಶೆಯಲ್ಲಿ ಯಾವುದೇ ಒಂದು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳದೇ ಹೋದುದರ ತತ್ಪರಿಣಾಮವಾಗಿ ಶಿಕ್ಷಕರು ಇಂಥ ಒಂದು ಶಾಂತಿಯುತವಾದಂಥ ಮೆರವಣಿಗೆಯನ್ನು ತೆಗೆದುಕೊಂಡು ಬಂದರು. ತೆಗೆದುಕೊಂಡು ಬಂದು ಸರ್ಕಾರದವರ ಕಣ್ಣು ತೆರಿಸಲಿಕ್ಕೆ ಪ್ರಯತ್ನ ಮಾಡಿದರು. ಇಂಥ ಸಂದರ್ಭದಲ್ಲಿ ನಾವು ಸರ್ಕಾರಕ್ಕೆ ಒಂದು ಮಾತನ್ನು ಹೇಳದೇ ವಿಧಿಯಿಲ್ಲ.

ಅಧ್ಯಕ್ಷರು.—ರೂಲ್ಸ್ ಪ್ರಕಾರ 15 ನಿಮಿಷದೊಳಗಾಗಿ ಮಾತನಾಡಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—15-4-1974ರಂದು ಬೆಂಗಳೂರು ನಗರಕ್ಕೆ ಬಂದಂಥ ಉಪಾಧ್ಯಾಯರುಗಳು ಏನು ಒಂದು ಪ್ರತಿಭಟನೆ ಮಾಡಬೇಕೆಂದು ಪ್ರಾರಂಭ ಮಾಡಿದ್ದಾರೆ. ಇವತ್ತಿಗೆ ಬಹುಶಃ 7—8 ದಿವಸಗಳಾಯಿತು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಎಲ್ಲಾ ಶಿಕ್ಷಕರಿಗೆ ಅವರು ತಂದಿರತಕ್ಕ ಹಣವೆಲ್ಲಾ ಖಾಲಿ ಆಗಿರಬಹುದು. ಬಹುಶಃ ಎಷ್ಟೋ ಜನ ಅವರ ಜೇಬು ಖಾಲಿಯಾಗಿ ಉಪವಾಸ ಮಾಡುತ್ತಿದ್ದಾರೆ. ಅದನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಅನೇಕ ಜನ ಶಿಕ್ಷಕರು 50–100 ರೂಪಾಯಿಗಳನ್ನು ಇಟ್ಟುಕೊಂಡು ಬಂದಿದ್ದರು, ಅದು ಎಲ್ಲಾ ಖರ್ಚು ಆಗಿರುವುದರಿಂದ ಬಹುತೇಕ ಮಂದಿ ಕಡ್ಡಾಯ ಉಪವಾಸ ಮಾಡುತ್ತಿದ್ದಾರೆ, ಒಂದು ಕಡೆ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮಾನ್ ಮಳ್ಳೂರು ಆನಂದರಾಯರು ಉಪವಾಸ ಮಾಡುತ್ತಿದ್ದಾರೆ ಮತ್ತೊಂದು ಕಡೆ ಎಲ್ಲಾ ಶಿಕ್ಷಕ ವರ್ಗದವರ ಜೇಬಿನಲ್ಲಿರತಕ್ಕ ಕಾಸು ಖಾಲಿಯಾಗಿ ಅವರೂ ಉಪವಾಸ ಮಾಡುತ್ತಿದ್ದಾರೆಂದರೆ ತಪ್ಪಾಗಲಿಕ್ಕೆ ಇಲ್ಲ. ಪರಿಸ್ಥಿತಿ ಅಲ್ಲಿಗೆ ಹೋಗಿದೆ. ಇದಕ್ಕೆ ಎಡೆಕೊಡಬಾರದು ಎಂಬುದೇ, ಸರ್ಕಾರದ ಮೇಲೆ ನನ್ನ ಆರೋಪ. ವಿದ್ಯಾ ಮಂತ್ರಿಗಳು ಅವರನ್ನು ಭೇಟಿ ಮಾಡಿದಾಗ, ಎಲ್ಲಾ ನಿರ್ಣಯಗಳನ್ನು

ಅವರೇ ತೆಗೆದುಕೊಳ್ಳಬಹುದಿತ್ತು. ಎಲ್ಲಾ ನಿರ್ಣಯಗಳನ್ನೂ ಮುಖ್ಯ ಮಂತ್ರಿಗಳು ಬರುವವರೆಗೆ ತಡೆಹಿಡಿಯತಕ್ಕ ಪರಿಸ್ಥಿತಿ ಇದ್ದಿಲ್ಲ. ದುರ್ದೈವದ ಪರಿಸ್ಥಿತಿ ಎಂದರೆ ಪರಿಸ್ಥಿತಿ ದಹನವಾಗಿ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈ ಸಭೆಗೆ ಬರಬೇಕಾಗಿತ್ತು. ಏತಕ್ಕೆಂದರೆ ಇದರಲ್ಲಿ ಬರಳ ಪ್ರಾಮುಖ್ಯವಾದ ಹಲವಾರು ವಿಷಯಗಳು ಇವೆ, ವಿದ್ಯಾಸಚಿವರು ಉತ್ತರ ಹೇಳುವುದಕ್ಕೆ ಸಮರ್ಥರಾಗಿದ್ದರೆ ಅಡ್ಡಿಯಿಲ್ಲ. ತಮ್ಮನ್ನು ಶಿಕ್ಷಕ ವರ್ಗದವರು ಬಂದು ಭೇಟಿ ಮಾಡಿದ ಸಂದರ್ಭದಲ್ಲಿ ನಿಮ್ಮ ಮನೆ ಮುಂದೆ ಕೂತು ಮುಷ್ಕರ ಮಾಡಿ, ತಮ್ಮ ಮುಂದೆ ಎಲ್ಲಾ ಮನವಿಗಳನ್ನು ಇಟ್ಟಂಥ ಸಂದರ್ಭದಲ್ಲಿ, ತಾವು ಅವರಿಗೆ ಭರವಸೆ ಕೊಡತಕ್ಕಂಥ ಒಂದು ಸಂದರ್ಭ ಬಂದಾಗ ತಾವು ಹೇಳಿದಿರಿ, ಕೆಲವು ವಿಷಯಗಳನ್ನು ಮುಖ್ಯಮಂತ್ರಿಗಳು ಬಂದಮೇಲೆ ಚರ್ಚೆಯಾಗಬೇಕು, ಕ್ಯಾಬಿನೆಟ್‌ಗೆ ಹೋಗಬೇಕು ಎಂದು ಹೇಳಿದಿರಿ ಎಂದು ನನಗೆ ಬಂದಿರುವ ವರ್ತಮಾನದಿಂದ ಗೊತ್ತಾಗಿದೆ.

ಆದರೆ ನಾನು ಇಷ್ಟು ಮಾತ್ರ ಹೇಳಲಿಕ್ಕೆ ಇಚ್ಛಿಸುತ್ತೇನೆ. ಈ ಒಂದು ವಿಷಯ ಇಷ್ಟು ದಿವಸ ಮುಂದಕ್ಕೆ ಹೋಗುವುದಕ್ಕೆ ಏತಕ್ಕೆ ಅವಕಾಶ ಕೊಡಬೇಕಾಗಿತ್ತು? ಇದು ನನ್ನ ಪ್ರಥಮ ಆರೋಪ. ಶಿಕ್ಷಕರು ನ್ಯಾಯವಾದ ಬೇಡಿಕೆಗಳನ್ನು ತಮ್ಮ ಮುಂದೆ ಇಟ್ಟಿದ್ದಾಗ್ಯೂ ಕೂಡ ಸರ್ಕಾರದವರು ಆತುರಾತುರವಾಗಿ ನನಗೆ ಗೊತ್ತಿರುವ ರೀತ್ಯಾ ಸುಮಾರು 500 ಜನ ಗ್ರಾಜುಯೇಟ್ ಕ್ಲರ್ಕ್ಸ್‌ಗಳನ್ನು ಪರೀಕ್ಷಕರನ್ನಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೀರಿ. ನಿಮ್ಮ ಮೇಲಿನ ಈ ಒಂದು ಆರೋಪ ಇದೆ ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ಏತಕ್ಕೆಂದರೆ ಈವೊತ್ತು ಕೆಲವು ಬೇಡಿಕೆಗಳನ್ನು ನೀವು ಸ್ಥಳದಲ್ಲೇ ನಿರ್ಣಯ ಮಾಡಬಹುದು ಎಂದು ಹೇಳಿದರೆ ತಪ್ಪಾಗಲಾರದು. ಆದರೆ ತಾವು ಹೇಳಬಹುದು, ಹಣಕಾಸಿನ ಪರಿಸ್ಥಿತಿಯಿಂದ ವಿಳಂಬವಾಗಬಹುದು ಎಂದು. ಆದರೆ ಕೆಲವು ಬೇಡಿಕೆಗಳನ್ನು ಸ್ಥಳದಲ್ಲೇ ತೀರ್ಮಾನ ಮಾಡುವ ಬಗ್ಗೆ ಮಾನ್ಯ ಸಚಿವರಿಗೆ ಸಾಕಷ್ಟು ಪರಿಜ್ಞಾನ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಬಗ್ಗೆ ಬರತಕ್ಕಂಥ ಶಿಕ್ಷಕರಿಗೆ 6 ರೂಪಾಯಿ ಭತ್ಯ ಕೊಡತಕ್ಕಂಥಾದ್ದು ಯಾವ್ಯಾವುದಕ್ಕೂ ಸಾಲದು. ಅವರು ಒಂದು ಹೋಟೆಲ್‌ನಲ್ಲಿ ಇಳಿದುಕೊಳ್ಳಬೇಕಾದರೆ ಎಷ್ಟು ಖರ್ಚಾಗಬಹುದು ಎನ್ನುವುದು ನಾವು ತಿಳಿದುಕೊಂಡರೆ ಅವರು ಕೇಳಿರತಕ್ಕಂಥಾದ್ದು 10 ರೂಪಾಯಿ ಬಹಳ ಕಡಿಮೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ನನಗೆ ಜ್ಞಾಪಕ ಇದ್ದಹಾಗೆ 75 ಪೈಸೇ ನಿಗದಿಯಾಗಿರತಕ್ಕಂಥಾದ್ದು 30 ವರ್ಷದ ಕೆಳಗಿನಿಂದಲೂ ಇದೆ. ಅಲ್ಲದೆ ಮಾನ್ಯ ವಿರೋಧಪಕ್ಷದ ನಾಯಕರ ಪಕ್ಷದ ಸರ್ಕಾರ ಇದ್ದಾಗಲೂ ಸಹ ಈ ಉಪಾಧ್ಯಾಯರುಗಳು ಈ ಬಗ್ಗೆ ಅಜಿಟೇಷನ್ ಮಾಡಿದ್ದುಂಟು. ಡೈಲಿ ಅಲೋಯೆನ್ಸ್ ಜಾಸ್ತಿ ಮಾಡಬೇಕೆಂದು ಆಜಿಟೇಷನ್ ಮಾಡಿದ್ದಾರೆ. ನಮ್ಮ ಸರ್ಕಾರ ಬಂದದ್ದು 1972ರ ಮಾರ್ಚಿಯಲ್ಲಿ. ಅಲ್ಲಿಂದೀಚೆಗೆ 1972–73ರಲ್ಲಿ ಏಪ್ರಿಲ್‌ನಲ್ಲಿ ಒಂದು ಪರೀಕ್ಷೆ ಮುಗಿದಿದೆ ಮತ್ತು 1973-74ರ ಏಪ್ರಿಲ್‌ನಲ್ಲಿ ಒಂದು ಪರೀಕ್ಷೆ ಮುಗಿದಿದೆ. ಪತ್ರಿಕೆಯಲ್ಲಿ ಬಂದಿರುವ ವರ್ತಮಾನದ ಪ್ರಕಾರ ಮಂತ್ರಿಗಳು ಈಗ ಇದನ್ನು ಪರಿಶೀಲನೆ ಮಾಡಿ 75 ಪೈಸೆಯಿಂದ ಒಂದು ರೂಪಾಯಿಗೆ ಮಾಡಿದ್ದಾರೆ ಎಂದು. ಆದುದರಿಂದ ಮಾನ್ಯ ವಿರೋಧಪಕ್ಷದ ನಾಯಕರು ಆ ಆರೋಪವನ್ನು ನಮ್ಮ ತಲೆಮೇಲೆ ಹಾಕಿದರೆ ತಪ್ಪಾಗಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ನಿಮ್ಮ ತಲೇಮೇಲೆ ಈ ತಪ್ಪನ್ನು ಹಾಕಬೇಕು ಎನ್ನುವ ಭಾವನೆ ನನಗೆ ಇಲ್ಲ. ಈವೊತ್ತಿನ ದಿವಸ ತಮಗೆ ಮನವಿ ಬಂದಿರತಕ್ಕಂಥಾದ್ದು ಡೈಲಿ ಅಲೋಯೆನ್ಸ್‌ನ್ನು ಒಂದು ದಿವಸಕ್ಕೆ 6 ರೂಪಾಯಿನಿಂದ 10 ರೂಪಾಯಿ ಮಾಡಬೇಕೆಂದು ಈ ವಿಚಾರ ತಮಗೂ ಗೊತ್ತಿದೆ. ಮತ್ತು ಈ ವೊತ್ತಿನ ದಿವಸ ಬೆಂಗಳೂರು ನಗರಕ್ಕೆ ಬಂದು ತಂಗಬೇಕಾದರೆ ಎಷ್ಟು ಖರ್ಚಾಗಬಹುದು ಎನ್ನುವುದು ತಮಗೂ ಗೊತ್ತಿದೆ. ಆದುದರಿಂದ ಅವರು ಕೇಳಿರತಕ್ಕಂಥಾ ಬೇಡಿಕೆ ಪರಿಶೀಲನೆ ಮಾಡುವುದಕ್ಕೆ ಯೋಗ್ಯವಾಗಿದೆ ಎಂದು ನಾನು ಹೇಳುತ್ತೇನೆ ಮತ್ತು ಅವರೂ ಸಹ ಒಪ್ಪಿಕೊಳ್ಳುತ್ತಾರೆ ಎಂದು ನನ್ನ ಭಾವನೆ. ಉಪಾಧ್ಯಾಯರು ಡೈಲಿ ಅಲೋಯನ್ಸ್‌ನ್ನು 10 ರೂಪಾಯಿ ಅಲ್ಲ 15 ರೂಪಾಯಿ ಕೇಳಬೇಕಾಗಿತ್ತು. ಇನ್ನು ಈ ವಿಷಯದಲ್ಲಿ ಹೆಚ್ಚು ಜಿಜ್ಞಾಸೆ ಮಾಡಿಕೊಳ್ಳುವುದು ಬೇಡ. ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರ ಹೇಳತಕ್ಕಂಥಾ ಕಾಲದಲ್ಲಿ ಸರ್ಕಾರದ ಹಣಕಾಸಿನ ಪರಿಸ್ಥಿತಿ ಕಷ್ಟಕರವಾಗಿದೆ ಎಂದು ಹೇಳಿದರೂ ಕೂಡ ಈ ಬೇಡಿಕೆಯನ್ನು ತಕ್ಷಣವೇ ನಿರ್ಣಯ ಮಾಡಿ ಒಪ್ಪಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಬಗ್ಗೆ ಇನ್ನು ವಾದ ವಿವಾದ ಬೇಡ. ಈವೊತ್ತು ಅವರು ಕೇಳಿರತಕ್ಕಂಥಾದ್ದು ನಿಜವಾಗಿಯೂ ಬಹಳ ಯೋಗ್ಯವಾದಂಥ ಬೇಡಿಕೆಯನ್ನು ನಿಮ್ಮ ಮುಂದೆ ಇಟ್ಟಿದ್ದಾರೆ. ಯಾವುದೇ ಕಾರಣ ಬಿಟ್ಟು ಮತ್ತೆ ಇದನ್ನು ಪರಿಶೀಲನೆ ಮಾಡಿ ಒಪ್ಪಿಕೊಳ್ಳಬೇಕು ಎಂದು ಈ

(ಶ್ರೀ ಹೆಚ್. ಡಿ ದೇವೇಗೌಡ)

ಸಂದರ್ಭದಲ್ಲಿ ತಮಗೆ ತಿಳಿಸಲಿಕ್ಕೆ ಇಚ್ಛಿಸುತ್ತೇನೆ. ಮತ್ತು ಅವರು ಇನ್ನೂ ಹಲವಾರು ಬೇಡಿಕೆಗಳನ್ನು ಇಟ್ಟಿದ್ದಾರೆ. ಆ ಬಗ್ಗೆ ಎಲ್ಲಾ ಬೇಡಿಕೆಗಳನ್ನು ಹೇಳುವುದಕ್ಕೆ ತಯಾರಾಗಿಲ್ಲ. ಅದರಲ್ಲಿ ಕೆಲವು ಬೇಡಿಕೆಗಳು ಮಾತ್ರ ಸ್ಥಳದಲ್ಲೇ ಪರಿಶೀಲನೆ ಮಾಡಿ ಒಪ್ಪಿಕೊಳ್ಳತಕ್ಕಂಥಾ ಬೇಡಿಕೆಯನ್ನು ಇಟ್ಟಿದ್ದಾರೆ ; ಎನ್ನುವುದನ್ನು ಹೇಳಬಯಸುತ್ತೇನೆ. ಉದಾಹರಣೆಗೆ ಟ್ರಾನ್ಸ್‌ಫರ್ ವಿಷಯ. ಈಗ ತಾವು ಮಾಸ್ ಟ್ರಾನ್ಸ್‌ಫರ್ ಮಾಡುವ ಬದಲು ತಾಲ್ಲೂಕಿನಿಂದ ತಾಲ್ಲೂಕಿಗೆ ಟ್ರಾನ್ಸ್‌ಫರ್ ಮಾಡುವುದು ಉಚಿತ. ಏತಕ್ಕೆಂದರೆ ನೀವು ಅವರನ್ನು ಮಾಸ್ ಟ್ರಾನ್ಸ್‌ಫರ್ ಮಾಡುವುದಾದರೆ ಎಷ್ಟೋ ಹಳ್ಳಿ ಕಡೆಗಳಲ್ಲಿ ಅವರಿಗೆ ಮನೆಗಳು ಇರುವುದಿಲ್ಲ. ಕ್ವಾರ್ಟರ್ಸ್‌ಗಳು ಇರುವುದಿಲ್ಲ. ಇಂಥಾ ಸ್ಥಿತಿ ಇರುವಾಗ ಅವರನ್ನು ತಾಲ್ಲೂಕಿನಿಂದ ತಾಲ್ಲೂಕಿಗೆ ಟ್ರಾನ್ಸ್‌ಫರ್ ಮಾಡುವ ಹಾಗೆ ಸರ್ಕಾರದವರು ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬಹುದು. ಇದು ಯೋಗ್ಯವಾದುದು. ನನ್ನ ವೈಯುಕ್ತಿಕ ಅಭಿಪ್ರಾಯ ಹೇಳುವುದಾದು ಅವರು ಆಯಾಯ ತಾಲ್ಲೂಕುಗಳಲ್ಲಿ ಇರುವುದು ಉಚಿತ. ಈವೊತ್ತಿನಿಂದ ಯಾರಾದರೂ ಕೂಡ ಡಿಪಾರ್ಟ್‌ಮೆಂಟಿನಲ್ಲಿ ಅಧಿಕಾರಿಗಳು ಕೆಲವರು ಕೆಟ್ಟವರು ಇದ್ದರೆ ಒಂದೆರಡು ಪರ್ಸೆಂಟ್ ಕೆಟ್ಟ ಅಧಿಕಾರಿಗಳು ಇರಬಹುದು. ಆ ರೀತಿ ಎಲ್ಲಾ ರಂಗದಲ್ಲೂ ಇದ್ದಾರೆ. ಈ ಒಂದು ರಂಗದಲ್ಲೇ ಅಲ್ಲ. ಆದುದರಿಂದ ನಾನು ಹೇಳುತ್ತೇನೆ—ಅವರಿಗೆ ಕ್ವಾರ್ಟರ್ಸ್ ಮತ್ತು ಫೆಸಿಲಿಟೀಸ್ ಮಾಡಿಕೊಡುವವರೆಗೆ ಅವರನ್ನು ಒಂದು ತಾಲ್ಲೂಕಿನಿಂದ ಹೊರಗೆ ಹಾಕತಕ್ಕಂಥಾದ್ದನ್ನು ರದ್ದು ಮಾಡಿ ಆಯಾಯ ತಾಲ್ಲೂಕಿನಲ್ಲೇ ಇರಿಸುವುದು ಸೂಕ್ತ ಎಂದು ಹೇಳಬಯಸುತ್ತೇನೆ. ಈ ಬೇಡಿಕೆಯನ್ನು ಸರ್ಕಾರ ಒಪ್ಪಿಕೊಂಡರೆ ಇದರಿಂದ ಯಾವ ತರಹವಾದ ಫೈನಾನ್ಸಿಯಲ್ ಇನ್‌ವಾಲ್ವ್‌ಮೆಂಟ್ಸ್ ಬರುವುದಿಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ರಿಟೈರ್‌ಮೆಂಟ್ ಏಜ್ ವಿಷಯ. ಈ ಬಗ್ಗೆ ಹಲವಾರು ಪ್ರವೀಣರು ಹೇಳಿದ್ದಾರೆ ಆದರೆ ಈ ವಿಷಯ ಹೈಕೋರ್ಟ್ ಮುಂದೆ ಇರ ವುದರಿಂದ ಇದರ ಬಗ್ಗೆ ನಾನು ಹೆಚ್ಚು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಸರ್ಕಾರದವರು ಈ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದಕ್ಕೆ ಯಾವ ಪ್ರವೀಣರು ತಮಗೆ ಸಲಹೆ ಕೊಟ್ಟರು ಎಂದು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಏತಕ್ಕೆಂದರೆ ಈವೊತ್ತು ತಮ್ಮ ಒಂದು ನಿರ್ಣಯ ತೆಗೆದುಕೊಂಡರೆ ಅಂದರೆ 58 ರಿಂದ 55ಕ್ಕೆ ಇಳಿಸಬೇಕೆಂದು ಏನು ಒಂದು ನಿರ್ಣಯ ತೆಗೆದುಕೊಂಡಿದ್ದೀರೋ ಮತ್ತು ಇದಕ್ಕೆ ನೀವು ಯಾವ ಒಂದು ಕಾರಣ ಕೊಟ್ಟಿದ್ದೀರೋ ನಿರುದ್ಯೋಗ ಸಮಸ್ಯೆ ಇದೆ ಎಂದು ಏನು ಹೇಳುತ್ತೀರೋ ಅದಕ್ಕೆ ನಾನು ಹೇಳುತ್ತೇನೆ ಈ ವೊತ್ತಿನ ದಿವಸ ಐ.ಎ.ಎಸ್. ಆಫೀಸರ್ಸ್ ಮತ್ತು ಐ.ಪಿ.ಎಸ್. ಆಫೀಸರ್ಸ್‌ಗಳು ನಮ್ಮ ರಾಜ್ಯಕ್ಕೆ ಮತ್ತು ನಮ್ಮ ರಾಷ್ಟ್ರಕ್ಕೆ ಅವರ ಸೇವೆ ಎಷ್ಟು ಅವಶ್ಯಕತೆ ಇದೆಯೋ ಅದೇ ರೀತಿ ಇವರ ಸೇವೆಯೂ ಅಷ್ಟೇ ಆವಶ್ಯಕತೆ ಇದೆ ಎಂದು ಹೇಳುತ್ತೇನೆ. ನೀವು ಇವರಿಗೆ 58 ರಿಂದ 55ಕ್ಕೆ ಇಳಿಸುವುದಾದರೆ ಹಾಗೆಯೇ ಯೂನಿಫಾರಂ ಆಗಿ ಎಲ್ಲಾ ಇಲಾಖೆಗಳಿಗೂ ಮಾಡಿದರೆ ಅದರ ವಿಷಯ ಬೇರೆ ಆಗುತ್ತದೆ. ಆದುದರಿಂದ ಈ ಒಂದು ನಿರ್ಣಯವನ್ನು ಅಂದರೆ ಏಜ್ ರಿಟೈರ್‌ಮೆಂಟ್ ವಿಷಯವನ್ನು ಹಿಂದಕ್ಕೆ ತೆಗೆದುಕೊಳ್ಳುವುದನ್ನು ರೀಕನ್ಸಿಡರ್ ಮಾಡಬೇಕೆಂದು ಈ ದಿಶೆಯಲ್ಲಿ ತಮಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಹೆಡ್‌ಮಾಸ್ಟರ್ ಪೇ ಸ್ಕೇಲು ವಿಷಯ. ಅವರಿಗೆ 300-700 ರೂಪಾಯಿ ಸ್ಕೇಲ್ ಕೊಡಬೇಕೆಂದು ಸುಮಾರು 2—2½ ವರ್ಷದಲ್ಲಿ ಒಂದು ನಿರ್ಣಯ ಮಾಡಿದಿರಿ. ತಮ್ಮ ವಿಧಾನ ಸೌಧದಲ್ಲಿ ಈ ಬಗ್ಗೆ ಒಂದು ಪೇ ಕಮಿಟಿ ಇದೆ. ನಿಮ್ಮ ವಿಧಾನಸೌಧದಲ್ಲೇ ಕೆಲಸ ಮಾಡತಕ್ಕಂಥ ಈ ಕಮಿಟಿ ತೀರ್ಮಾನ ಮಾಡಿದ್ದರೂ ಕೂಡ ಇದನ್ನು ಮುಂದೂಡತಕ್ಕದ್ದರ ಔಚಿತ್ಯ ಏನು ಎಂದು ಕೇಳಬೇಕಾಗುತ್ತದೆ. ಈ ವೊತ್ತಿನ ದಿವಸ ಎಸ್ ಎಸ್.ಎಲ್.ಸಿ. ಪಾಸ್ ಆಗಿರತಕ್ಕಂಥಾವನು, ಗ್ರಾಮ ಸೇವಕನಾಗಿ ಕೆಲಸ ಮಾಡಿ ಪ್ರಮೋಷನ್ ಪಡೆದು ಬಿ.ಡಿ.ಓ. ಆಗಿರತಕ್ಕಂಥಾವನಿಗೆ 300-700 ರೂಪಾಯಿ ಸ್ಕೇಲ್ ಕೊಡುತ್ತೀರಿ. ಆದರೆ ಈ ವೊತ್ತಿನ ದಿವಸ ಒಬ್ಬ ಮನುಷ್ಯ ಬಿ.ಎ ಬಿ.ಇಡಿ. ಪಾಸ್ ಮಾಡಿಕೊಂಡು ಹೈಸ್ಕೂಲು ಹೆಡ್‌ಮಾಸ್ಟರ್ ಆಗಿದ್ದರೆ ಅವನಿಗೆ ಈ ಸಂಬಳ ಕೊಡುವುದಕ್ಕೆ ಹಿಂದುಮುಂದು ನೋಡುವುದಕ್ಕೆ ಹೋಗಬಾರದು ಎಂದು ನನ್ನ ವೈಯುಕ್ತಿಕ ಅಭಿಪ್ರಾಯ. ಏತಕ್ಕೆಂದರೆ ಇಟ್ ಈಸ್ ಎ ಜಸ್ಟ್ ಡಿಮ್ಯಾಂಡ್. ಇಂತಹ ಬೇಡಿಕೆಗಳನ್ನು ಪರಿಶೀಲನೆ ಮಾಡತಕ್ಕಂಥಾದ್ದು ಯೋಗ್ಯ ಮತ್ತು ಇವರ ಬಗ್ಗೆ ಸರ್ಕಾರದವರು ಇಷ್ಟು ವಿಳಂಬ ಮಾಡಬಾರದಾಗಿತ್ತು ಎಂದು ನನ್ನ ವೈಯುಕ್ತಿಕ ಅಭಿಪ್ರಾಯ. ಮತ್ತು ಈ ವಿಷಯವನ್ನು ಸರ್ಕಾರದವರು ಮುಂದುವರಿಸಲಿಕ್ಕೆ ಅವಕಾಶ ಕೊಡಬಾರದು ಎಂದು ಹೇಳುತ್ತೇನೆ. ಒಂದು ವೇಳೆ ಈ ವಿಷಯವನ್ನು ಮುಂದುವರೆಸಿದರೆ ಪರಿಸ್ಥಿತಿ ಹದಗೆಡುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನೊಂದು ಮಾತನ್ನು ಹೇಳುತ್ತೇನೆ. ಅದು ಲಾಂಗ್ವೇ ಟೀಚರ್ಸ್ ವಿಷಯದ ಬಗ್ಗೆ. ಇವರ ಬಗ್ಗೆ ಸರ್ಕಾರದವರು ಏನು ಒಂದು ನಿರ್ಣಯ ಮಾಡಿದ್ದಾರೆ ಅದನ್ನು ಇನ್ನೂ ಜಾರಿಗೆ ತಂದಿಲ್ಲ. ಸುಮಾರು 661 ಜನಕ್ಕೆ ತಮ್ಮ ತೀರ್ಮಾನದ ಪ್ರಕಾರ ಅವರಿಗೆ ಏನು ಒಂದು ಸ್ಕೇಲ್ ಕೊಡಬೇಕಾಗಿತ್ತೋ ಅಂದರೆ 160-350ರ ಸ್ಕೇಲ್ ಏನು ಕೊಡಬೇಕಾಗಿತ್ತೋ ಅದು 161 ಜನಕ್ಕೆ ಮಾತ್ರ ಬೆನಿಫಿಟ್ ಆಗಿದೆ, ಬಾಕಿಯವರಿಗೆ ಸಿಕ್ಕಿಲ್ಲ. 10 ವರ್ಷ ಮೇಲ್ಪಟ್ಟು ಸರ್ವಿಸ್ ಆಗಿರುವವರಿಗೆ ಈ ಒಂದು ಬೆನಿಫಿಟ್ ಆಗಬೇಕು ಎಂದು ನಿರ್ಣಯ ತೆಗೆದುಕೊಂಡಿದ್ದಾಗ್ಯೂ ಕೂಡ ಆ ನಿರ್ಣಯದಂತೆ ಎಲ್ಲರಿಗೂ ಸಿಕ್ಕಿಲ್ಲ. ಏತಕ್ಕೆ ಎಲ್ಲರಿಗೂ ಸಿಕ್ಕಿಲ್ಲ ಎನ್ನುವುದನ್ನು ತಾವು ತಿಳಿಸಬೇಕು. ಏತಕ್ಕೆಂದರೆ ಸರ್ಕಾರದವರು ತಾವೇ ತೆಗೆದುಕೊಂಡತಕ್ಕಂಥ ನಿರ್ಣಯವನ್ನು ಇವೊತ್ತು ಜಾರಿಗೆ ಕೊಡದೆ ಇಷ್ಟೊಂದು ವಿಳಂಬ ನೀತಿ ಮಾಡಿದ್ದು ಏತಕ್ಕೆ ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಏನಾದರೂ ತೊಡಕು ಮಾಡಿದ್ದರೆ ಅದನ್ನು ತಿಳಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಇವತ್ತು ಗ್ರಾಜುಯೇಟ್ ಟೀಚರ್ಸ್‌ಗೆ ಬರತಕ್ಕಂಥ ವೇತನ ಏನು ಇವೆ, ಅವನ್ನು ಪಂಡಿತರಿಗೆ ಹೋಲಿಸಿಕೊಂಡಾಗ ಇವರಿಗೆ ಬಹಳ ಕಡಿಮೆ ಸ್ಕೇಲನ್ನು ಕೊಟ್ಟಿದ್ದಾರೆ. ಸುಮಾರು 10-15 ವರ್ಷದಿಂದ ಕೆಲಸ ಮಾಡತಕ್ಕ ಇವರಿಗೆ 130ರಿಂದ 290 ಸ್ಕೇಲನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಶ್ರೀಮಾನ್ ದೇವರಾಜ ಅರಸು ಅವರು ಇದ್ದಂಥ ಕಾಲದಲ್ಲಿ ಒಂದು ನಿರ್ಣಯವನ್ನು ಮಾಡಿದ್ದರು ಎಂದು ಕೇಳಿದ್ದೇನೆ. ಅನ್‌ಟ್ರೇನ್ಡ್ ಪಂಡಿತರಿಗೆ 130ರಿಂದ 290ರ ಸ್ಕೇಲನ್ನು ಕೊಟ್ಟು ಟ್ರೇನ್ಡ್ ಅವರಿಗೆ 160ರಿಂದ 350ರ ಸ್ಕೇಲನ್ನು ಕೊಟ್ಟಿದ್ದಾರೆ 10 ವರ್ಷ ಮೇಲ್ಪಟ್ಟು ಸರ್ವೀಸ್ ಮಾಡಿರತಕ್ಕವರಿಗೆ 160-350ರ ಸ್ಕೇಲನ್ನು ಕೊಟ್ಟಿದ್ದಾರೆ. ಆದರೆ 9 ವರ್ಷ 8 ವರ್ಷ ಸರ್ವೀಸ್ ಮಾಡಿರುವವರಿಗೆ ಈ ಒಂದು ಸೌಲಭ್ಯ ಮಾತ್ರ ಸಿಕ್ಕುತ್ತಾ ಇಲ್ಲ. ಒಂದುಕಡೆ ಗ್ರಾಜುಯೇಟ್ ಟೀಚರ್ಸ್‌ಗೆ ಡಿಪಾರ್ಟಮೆಂಟಿನ ಬಚಿನಿಂದ ಟ್ರೈನಿಂಗ್ ಕೊಟ್ಟು ಹೈಯರ್ ಸ್ಕೇಲನ್ನು ಪಡೆಯಲಿಕ್ಕೆ ಅವಕಾಶ ಇದೆ; ಆದರೆ ಇನ್ನೊಂದು ಕಡೆ ಇವರು ಏನು ತಪ್ಪು ಮಾಡಿದ್ದಾರೆ? ಪೇ ಕಮಿಷನ್‌ನಿಂದ ಅಂಥ ತಪ್ಪಿನಿಂದ ಇವರಿಗೆ ತೊಂದರೆಯಾಗಬಾರದು. ಇವರ ಒಂದು ಬೇಡಿಕೆಯನ್ನು ಈಡೇರಿಸತಕ್ಕ ಕಾಲದಲ್ಲಿ ಯಾವುದೇ ರೀತಿಯ ವಿಳಂಬದ ನೀತಿಯನ್ನು ಅನುಸರಿಸಬಾರದು; ಎನ್ನುವ ಮಾತನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಫಿಸಿಕಲ್ ಎಜುಕೇಷನ್ ಟೀಚರ್ಸ್ ಏನು ಇದ್ದಾರೆ ಅವರ ಬಗ್ಗೆಯೂ ಕೂಡ ಇವರುಗಳು ಒಂದು ಬೇಡಿಕೆಯನ್ನು ಇಟ್ಟಿದ್ದಾರೆ. ಬಹುಶಃ, ಈ ಬಗ್ಗೆ ಸರ್ಕಾರದವರು ಹೊರಡಿಸಿದಂಥ ಒಂದು ಆರ್ಡರ್ ಅನ್ನು ನೋಡಿದರೆ ಅದು ವಿಚಿತ್ರವಾಗಿದೆ ಎಂದು ನನಗನ್ನಿಸುತ್ತದೆ. ಇವರಿಗೆ 23-3-1971 ರಲ್ಲಿ 130-210 ಗ್ರೇಡ್ ಸಂಬಳದ ಸ್ಕೇಲ್ ನಿಶ್ಚಿತಯಾಗಿದೆ. ಅದಾದಮೇಲೆ, ಮತ್ತೊಂದು ನಿರ್ಣಯವಾಗಿದೆ, ಏನೆಂದರೆ. 1-1-1970ರ ತುಕೋಳ್ ಕಮಿಷನ್‌ನಲ್ಲಿ ಇವರಿಗೆ 100-220ರ ಸ್ಕೇಲ್ ಆಯಿತು. ಬಹುಶಃ 130 ರೂಪಾಯಿ ಗಳ ಬೇಸಿಕ್ ಪೇ ಇದ್ದವರಿಗೆ, 300 ರೂಪಾಯಿಗಳ ಸ್ಕೇಲನ್ನು ಕೊಡುವುದಾದರೆ, ಬಹುಶಃ ಇವರಿಗೆ ಯಾವ ಆಧಾರದ ಮೇಲೆ ಈ ಒಂದು ನಿರ್ಣಯ ಮಾಡಿದ್ದೀರಿ ಎನ್ನುವುದು ಅರ್ಥವಾಗುವುದಿಲ್ಲ. ಇದರ ಬಗ್ಗೆ ಅಕೌಂಟೆಂಟ್ ಜನರಲ್ ಅವರು ಒಂದು ಅಬ್ಜೆಕ್ಷನ್ ಅನ್ನು ರೈಸ್ ಮಾಡಿದ್ದಾರೆಂದು ನಾನು ಕೇಳಿದ್ದೇನೆ ಸರ್ಕಾರ ಈ ಒಂದು ತಪ್ಪನ್ನು ಸರಿಪಡಿಸಲಿಕ್ಕೆ, ಮತ್ತು ಅವರು ಇಟ್ಟಿರತಕ್ಕ ಹನ್ನೊಂದು ಬೇಡಿಕೆಗಳಲ್ಲಿ, ಈ ಒಂದು ಬೇಡಿಕೆಯ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳುವುದಕ್ಕೆ ಕಷ್ಟವಾಗುವುದಿಲ್ಲ.

ಇನ್ನು ಲೋಕಲ್ ಬಾಡೀಸ್ ಸ್ಕೂಲ್ ಏನು ಇವೆ, ಅವುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳತಕ್ಕ ಕಾಲದಲ್ಲಿ, ಇವರಿಗೆ ಇರತಕ್ಕ ತೊಂದರೆ ಏನು? ಏಕೆಂದರೆ, ಎಂಥಾ ಎಂಥಾದ್ದಕ್ಕೋ ಆರ್ಡಿನೆನ್ಸ್‌ಮಾಡುವಾಗ, ಒಬ್ಬ ವ್ಯಕ್ತಿಯನ್ನು ಅಧಿಕಾರದಿಂದ ತೆಗೆಯಲಿಕ್ಕೆ ಆರ್ಡಿನೆನ್ಸ್‌ಮಾಡಿರುವಾಗ ಇದರ ಬಗ್ಗೆ ಆರ್ಡಿನೆನ್ಸ್ ಮಾಡಲಿಕ್ಕೆ ಏನು ಕಷ್ಟವಾಗುತ್ತದೆ. ? ಅಷ್ಟು ಕಷ್ಟವಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಕೆಲವೊಂದು ಸ್ಕೂಲುಗಳನ್ನು ತೆಗೆದುಕೊಳ್ಳುತ್ತೀರಿ, ಕೆಲವೊಂದು ಸ್ಕೂಲುಗಳನ್ನು ಮಾತ್ರ ಲೋಕಲ್ ಬಾಡಿಯವರಿಗೆ ವಹಿಸಿಕೊಡುತ್ತಿದ್ದೀರಿ. ಇದರ ಬಗ್ಗೆ ಒಂದು ಪಾಲಿಸಿ ಡಿಸಿಷನ್ ಇರಬೇಕು. ಕೆಲವು ಸ್ಕೂಲುಗಳಲ್ಲಿ ಆಗಬಾರದಂಥ ಅನ್ಯಾಯ ನಡೆದುಕೊಂಡು ಹೋದರೂ ಹಾಗೆಯೇ ಬಿಡುತ್ತಿದ್ದೀರಿ. ಇಂಥ ಶಿಕ್ಷಕರ ಪ್ರಶ್ನೆ ಬಂದಾಗ, ಬಹುಶಃ ಸರ್ಕಾರದವರು ಒಂದು ಬಿಗಿಯಾದ ನೀತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಲೋಕಲ್ ಬಾಡೀಸ್ ಸ್ಕೂಲುಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳತಕ್ಕದ್ದು ಬಹಳ ಉಚಿತ. ಇದಕ್ಕೆ ಸರ್ಕಾರದ ವತಿಯಿಂದ ಉತ್ತರ ಕೊಡತಕ್ಕ ಕಾಲದಲ್ಲಿ ತಮ್ಮ ಅಭಿಪ್ರಾಯವನ್ನು ನಾವು ನಿರೀಕ್ಷೆ ಮಾಡುತ್ತೇವೆ.

(ಶ್ರೀ ಎಚ್. ಡಿ. ದೇವೇಗೌಡ)

ಮತ್ತೊಂದು ವಿಷಯ, ಶಿಕ್ಷಕರ ಸೀನಿಯಾರಿಟಿ ಲಿಸ್ಟನ್ನು ಮಾಡುವುದರ ಬಗ್ಗೆ, ಇದು ಬಹಳ ದಿವಸದಿಂದ ಹಾಗೆಯೇ ಉಳಿದಿವೆ. ಮೊನ್ನೆ ಹಣಕಾಸಿನ ಸಚಿವರು ಮಾತನಾಡುತ್ತಾ, ಸುಮಾರು 17-18 ಇಲಾಖೆಗಳಲ್ಲಿ ಈ ಸೀನಿಯಾರಿಟಿ ಲಿಸ್ಟ್ ಇನ್ನೂ ಫೈನಲೈಜ್ ಆಗಿಲ್ಲ ಎಂದು ಹೇಳಿದರು. ಇದಕ್ಕೆ ತಾವು ಏನಾದರೂ ಒಂದು ಇತಿಶ್ರೀ ಹಾಡಬೇಕಾಗುತ್ತದೆ. ಆದ್ದರಿಂದ ತಾವು ಇದರ ಬಗ್ಗೆ ಒಂದು ಕಾಲ ಮಿಗದಿ ಮಾಡಿ, ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ, ಈ ನೇಮಕಗಳ ಅವಶ್ಯಕತೆ ಇಲ್ಲ. ಈ ಒಂದು ಪದ್ಧತಿ ಸರಿಯಾದುದು ಅಲ್ಲ. ಇದನ್ನು ತೆಗೆದುಹಾಕಿ, ಯಾರು ಯಾರು ಕೆಲಸ ಮಾಡುತ್ತಿದ್ದಾರೆ, ಅವರನ್ನು ರೆಗ್ಯುಲರೈಸ್ ಮಾಡಬೇಕು, ಇದರ ಬಗ್ಗೆ ತಾವು ಉತ್ತರ ಕೊಡತಕ್ಕ ಕಾಲದಲ್ಲಿ ಒಂದು ಆಶ್ವಾಸನೆಯನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಜೂನಿಯರ್ ಕಾಲೇಜುಗಳಲ್ಲಿ ತಾವು ನೇಮಕಾತಿಗಳನ್ನು ಮಾಡಿರುವ ಬಗ್ಗೆಯೂ ಕೂಡ, ಅವರ ಒಂದು ಸೀನಿಯಾರಿಟಿ ಲಿಸ್ಟ್ ಇನ್ನೂ ಫೈನಲೈಸ್ ಆಗಿಲ್ಲ. ಇವರ ಬಗ್ಗೆ ತಾವು ಒಂದು ಹೊಸ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ಮಾಡಿಕೊಂಡಿದ್ದೀರಿ ಎಂದು ತಿಳಿದಿದ್ದೇನೆ. 50 ಪರ್ಸೆಂಟ್ ಡೈರೆಕ್ಟ್ ರೆಕ್ರೂಟ್‌ಮೆಂಟ್, 50 ಪರ್ಸೆಂಟ್ ಪ್ರಮೋಷನ್ ಇಂದ ನೇಮಕ ಮಾಡಬೇಕು ಎಂದು. ಈ ಒಂದು ಕೆಟಗರಿ ಏನು ಇದೆ, ಇದಕ್ಕೆ ಕೆಲಸ ಮಾಡುತ್ತಾ ಇರತಕ್ಕವರು ಅಪ್ಲೈ ಮಾಡಬೇಕು ಎನ್ನುವ ಡಿಮ್ಯಾಂಡ್ ಇದೆ. ದಯಮಾಡಿ ಇದರ ಬಗ್ಗೆಯೂ ಸರ್ಕಾರದವರು ಸಹಾನುಭೂತಿಯಿಂದ ಕನ್ಸಿಡರ್ ಮಾಡಬೇಕು ಎನ್ನುವ ಮಾತನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಟೆಕ್ಸ್ಟ್ ಬುಕ್ಸ್‌ಗಳಲ್ಲಿ ಇರತಕ್ಕ ದೋಷಗಳನ್ನು ತೆಗೆಯುವುದಕ್ಕೆ, ಮತ್ತು ಉಪಾಧ್ಯಾಯರುಗಳ ಸಮಸ್ಯೆಗಳು ಬಂದಾಗ ಸಲಹೆ ಕೊಡಲಿಕ್ಕೆ ಒಂದು ಅಡ್ವೈಸರಿ ಕಮಿಟಿಯನ್ನು ಮಾಡುವ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಸರ್ಕಾರದವರಿಗೆ ಹಣದ ರೀತಿಗೆ ಕೊಡಲಿಕ್ಕೆ ಕಷ್ಟವಾಗುವುದಿಲ್ಲ. ಇದರ ಒಂದು ಪ್ರಮುಖವಾದಂಥ ಬೇಡಿಕೆಗಳು ಏನು ಇವೆ, ಇವುಗಳನ್ನು ಈಡೇರಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ, ಕೆಲವು ಬೇಡಿಕೆಗಳ ಬಗ್ಗೆ, ಸರ್ಕಾರದವರು, ಅವುಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಉದಾಹರಣೆಗಾಗಿ, ವಯಸ್ಸಿನ ಮಿತಿಯ ಬಗ್ಗೆ, ಅನೇಕ ರಾಜ್ಯಗಳ ಸರ್ಕಾರದಲ್ಲಿ ಕೆಲಸ ಮಾಡತಕ್ಕ ವಯೋಮಿತಿ, 58-60 ವರ್ಷ ಇದೆಯೆಂದು ಕೇಳಿದ್ದೇನೆ; ಒರಿಸ್ಸಾದಲ್ಲಿ ವಯೋಮಿತಿಯೇ ಇಲ್ಲ ಎಂದು ನಾನು ತಿಳಿದಿದ್ದೇನೆ. ಅವರು ಕೆಲಸ ಮಾಡಿಕೊಂಡು ಹೋಗುವವರೆಗೂ ಹೋಗಬಹುದು.

ಶ್ರೀ ಕೆ. ಬಿ. ಶಿವಯ್ಯ.—ಬಹಳ ಉತ್ತಮವಾದ ಸಲಹೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಹೇಳಿದ್ದನ್ನು ನೀವು ಎಲ್ಲಾ ಒಪ್ಪಿಕೊಳ್ಳುತ್ತೀರಾ, ಟೀಚರ್ಸ್ ಏಕೆ 55 ವರ್ಷಕ್ಕೆ ಮನೆಗೆ ಹೋಗಬೇಕು, ಬೇರೆಯವರು ಏಕೆ ಮನೆಗೆ ಹೋಗಬಾರದು? ಇವತ್ತು ಐ. ಎ. ಎಸ್, ಮತ್ತು ಐ.ಪಿ.ಎಸ್. ಅಧಿಕಾರಿಗಳು 58 ವರ್ಷದವರೆಗೆ ಕೆಲಸ ಮಾಡುವುದಕ್ಕೆ ಅವಕಾಶ ಇದೆ. ಆದರೆ ಈ ಉಪಾಧ್ಯಾಯರುಗಳು ಏಕೆ ಇದಕ್ಕೆ ಯಜ್ಞ ಪಶುಗಳಾಗಬೇಕು? ಇವರನ್ನು ಮಾತ್ರ ಕಡಿಮೆ ದರ್ಜೆಯ ನೌಕರರು ಎನ್ನುವ ಭಾವನೆಯನ್ನು ಇಟ್ಟುಕೊಂಡು ಈ ರೀತಿ ಅನಾದರಣೆ ಮಾಡತಕ್ಕದ್ದು ಸರಿಯಲ್ಲ. ಒಂದು ಪಾಲಿಸಿ ಡಿಸಿಷನ್ ತನ್ನಿ. ಇದನ್ನು ಎಲ್ಲರಿಗೂ ಅಪ್ಲೈ ಮಾಡಿ, ಇಲ್ಲದೇಹೋದರೆ ನಾವು ಈ ಬಗ್ಗೆ ಹೋರಾಟ ಮಾಡಬೇಕಾಗುತ್ತದೆ. ಇದಕ್ಕೆ ತಮ್ಮ ಸಹಾನುಭೂತಿ ಸಿಕ್ಕುತ್ತೆಂದು ನಾನು ತಿಳಿದುಕೊಳ್ಳಬೇಕಾಗುತ್ತದೆ

ಕೊನೆಯದಾಗಿ ಈಗ 7000 ಸಾವಿರ ಜನ ಉಪಾಧ್ಯಾಯರುಗಳು ಏನು ಇದ್ದಾರೆ, ಇವರು ಪ್ರಶ್ನೆ ಪತ್ರಿಕೆಗಳನ್ನು ವ್ಯಾಲ್ಯೂಯೇಷನ್ ಮಾಡತಕ್ಕ ಸಂದರ್ಭದಲ್ಲಿ ಈ 7000 ಶಿಕ್ಷಕರಿಗೆ ಅನ್ಯಾಯವಾಗುವಂಥ ಬೇಡಿಕೆಗಳು ಕೆಲವು ಇವೆ, ಇನ್ನು ಕೆಲವು ಸುಮಾರು ಒಂದೂವರೆ, ಅಥವಾ ಎರಡು ಲಕ್ಷ ಉಪಾಧ್ಯಾಯರುಗಳಿಗೆಲ್ಲರಿಗೂ ಅನ್ವಯವಾಗುವಂಥವುಗಳು ಇವೆ. ಇವುಗಳನ್ನು ಎರಡು ಭಾಗಗಳನ್ನಾಗಿ ವಿಂಗಡಣೆ ಮಾಡಬೇಕಾಗುತ್ತದೆ. ತಾವು, ಈ ವಿಷಯ ಚರ್ಚೆಯಾಗಿ ಉತ್ತರ ಕೊಡತಕ್ಕ ಕಾಲದಲ್ಲಿ, ಸರ್ಕಾರ ಈ ಬಗ್ಗೆ ಏನು ನಿರ್ಧಾರ ಮಾಡಿದೆ ಎನ್ನುವುದನ್ನು ತಿಳಿಸಬೇಕಾಗುತ್ತದೆ. ಮತ್ತೆ ಕೆಲವು ವಿಷಯಗಳ ಬಗ್ಗೆ ಪರಿಶೀಲನೆ ಮಾಡಿ ನಿರ್ಣಯ ಮಾಡುತ್ತೇವೆಂದೂ

ಆಶ್ವಾಸನೆ ಕೊಡಬೇಕಾಗುತ್ತದೆ, ಇಲ್ಲದೆ ಹೋದರೆ, ಏನಾಗುತ್ತದೆಂದರೆ, ಶಿಕ್ಷಣ ರಂಗದಲ್ಲಿ ಅತೃಪ್ತಿ ಯುಂಟಾಗಿ, ಇದು ವಿಕೋಪಕ್ಕೆ ಹೋದರೆ, ಬಹಳ ಕಷ್ಟವಾಗುತ್ತದೆ. ಅಲ್ಲಿಯವರಿಗೆ ತಾವು ಎಡೆಕೊಡುವುದು ಬೇಡ. ಶಿಕ್ಷಕರು ಹೊರಗೆ ಬಂದಾಗ ಅವರ ಜೊತೆಗೆ ವಿದ್ಯಾರ್ಥಿಗಳು ಮತ್ತು ಪೋಷಕರು ಸೇರಿಕೊಂಡರೆ, ಈ ಒಂದು ಕಿಚ್ಚು, ಜ್ವಾಲೆ ಹತ್ತಿದರೆ, ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆ. ಅಲ್ಲಿಯವರೆಗೆ ತಾವು ಅವಕಾಶ ಕೊಡುವುದು ಬೇಡ. ಈ ಸಭೆಯಲ್ಲಿಯೇ ಈ ವಿಷಯ ನಿರ್ಣಯ ಆಗಬೇಕಾಗುತ್ತದೆ. ದಯಮಾಡಿ ಈ ಒಂದು ವಿಷಯದಲ್ಲಿ ಯಾವುದೇ ರೀತಿಯ ಎವೇಜಿವ್ ಅನ್ಸರ್ ಕೊಡುವುದಕ್ಕೆ ಪ್ರಯತ್ನ ಮಾಡದೆ, ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗುತ್ತದೆ. ತಾವು ಸುಮ್ಮನೆ ಪರಿಶೀಲನೆ ಮಾಡುತ್ತೇವೆಂದು ಮಾತನಾಡುವುದಾದರೆ, ನಾವು ಅದಕ್ಕೆ ಸಮಾಧಾನ ಪಟ್ಟುಕೊಳ್ಳುವುದಿಲ್ಲ.

ಇವತ್ತು ಪ್ರಾಶಸ್ತ್ಯ ಮಾಪನ ಕೆಲಸಕ್ಕೆ ಸುಮಾರು 1500 ಜನ ಮಹಿಳಾ ಶಿಕ್ಷಕರು ಬಂದಿದ್ದಾರೆ. ಶಿಕ್ಷಕರ ಕೈಯಲ್ಲಿ ಕಾಸು ಇಲ್ಲದೆ ಊಟಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಶಿಕ್ಷಣ ರಂಗದಲ್ಲಿ, ರಾಜ್ಯಸಚಿವೆಯಾಗಿ ಒಬ್ಬ ಮಂತ್ರಿಯಿದ್ದರೂ ಸಹ, ಅವರು ಗುಲ್ಬರ್ಗದಲ್ಲಿ ಭಾಷಣ ಮಾಡುತ್ತಿದ್ದಾರೆ, ಇವರು ಇಲ್ಲಿ ಉಪವಾಸ ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾನು ಇಲ್ಲಿಯೇ ಇದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಮಗೆ ಹೆಂಗಸರ ಕಷ್ಟ ಗೊತ್ತಾಗುತ್ತದೆಂದು ತಿಳಿದುಕೊಂಡಿದ್ದೇನೆ. ಸುಮಾರು 1500 ಜನ ಶಿಕ್ಷಕಿಯರು ಈ ಕೆಲಸಕ್ಕೆ ಬಂದಿದ್ದಾರೆ. ತಮಗೆ ಅವರ ಬಗ್ಗೆ ಸಹಾನುಭೂತಿ ಇರುವುದಾದರೆ, ಅವರ ಪರಿಸ್ಥಿತಿ ಏನಾಗಿದೆ ಎನ್ನುವುದನ್ನು ತಾವು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇನ್ನು ಯಾರು ಯಾರಿಗೆ ಅಸಮಾಧಾನವಾಗಿದೆ ಎನ್ನುವುದನ್ನೂ ಹೇಳಿಬಿಡಿ.

3-30 P.M.

ಶ್ರೀ ಎಚ್. ಡಿ. ದೇವೇಗೌಡ.—ನಾವೂ, ನೀವೂ ಈ ಭಾವನೆ ಇಟ್ಟು ಕೊಳ್ಳುವುದಾದರೆ ಕಾರ್ಮಿಕರ ಬೇಡಿಕೆ ಬಗ್ಗೆ ಸರ್ಕಾರದವರು ಯಾವ ರೀತಿ ನಿರ್ಣಯ ತೆಗೆದುಕೊಳ್ಳುತ್ತಾರೆಂದು ನೋಡಬೇಕು. ಅವರು ಸೌಮ್ಯವಾಗಿ ನಡೆದುಕೊಳ್ಳುತ್ತಾರೆ, ಅವರು ದುರ್ಬಲರು ಎಂದು ತಿಳಿದುಕೊಂಡರೆ ಅದು ತಪ್ಪಾಗುತ್ತದೆ. We cannot allow such things. ನಿಮ್ಮ ದೃಷ್ಟಿಕೋನದಲ್ಲಿ ಈ ಬೇಡಿಕೆಗಳು ಪರ್ಯಾಲೋಚನೆ ಮಾಡುವುದಕ್ಕೆ ಯೋಗ್ಯವಾದುವಲ್ಲವೆಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಾಗೆ ಹೇಳಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಅಂತಿಮವಾದ ನಿರ್ಣಯ ಆಗಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಈಗಾಗಲೇ ವಿರೋಧಪಕ್ಷದ ನಾಯಕರು ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅಧ್ಯಕ್ಷರೆ, ಈ ಒಂದು ಪರಿಸ್ಥಿತಿ ರಾಜ್ಯದಲ್ಲಿ ಬರುವುದಕ್ಕೆ ಅವಕಾಶ ಮಾಡಿಕೊಟ್ಟಂಥ ಈ ಸರ್ಕಾರಕ್ಕೆ ಹೃದಯ ಇಲ್ಲ, ಕಣ್ಣಿಲ್ಲ, ಮೂಗಿಲ್ಲವೆಂದು ಹೇಳಬೇಕಾಗುತ್ತದೆ. ಕಿವುಡು ಸರ್ಕಾರ, ಬೇಜವಾಬ್ದಾರಿ ಸರ್ಕಾರ ಎಂದು ಹೇಳಬೇಕಾಗುತ್ತದೆ,

ಶ್ರೀ ಎಚ್. ಸಿದ್ದವೀರಪ್ಪ.—ಕಿವಿ ಇಲ್ಲವೆಂದು ಹೇಳುವುದಾದರೆ ಏತಕ್ಕೆ ನೀವು ಮಾತನಾಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಕಿವಿ ಇದ್ದಿದ್ದರೆ ಈ ಪರಿಸ್ಥಿತಿ ಬರುವುದಕ್ಕೆ ಅವಕಾಶ ಕೊಡುತ್ತಾ ಇರಲಿಲ್ಲ. ನಮಗೆ ಬಂದಿರುವ ಸಂಕಟ ಏನೆಂದರೆ ವಿರೋಧಪಕ್ಷದ ನಾಯಕರು ಹೇಳಿದರು, ಈ ಒಂದು ಪರಿಸ್ಥಿತಿಯಲ್ಲಿ ಅಥವ ಚಿಂತಾಜನಕ ಪರಿಸ್ಥಿತಿ ಉಂಟಾದ ವಾತಾವರಣದಲ್ಲಿ ಶಿಕ್ಷಕರ ಜೊತೆಗೆ ನಮ್ಮ ಬಾಲಕರೂ ಸೇರಿದರೆ ಏನಾಗುತ್ತದೆ ಎಂಬುದನ್ನು ತಿಳಿದುಕೊಳ್ಳಬೇಕು. ಆದುದರಿಂದ ಸರ್ಕಾರದವರು ಈ ಪರಿಸ್ಥಿತಿ ಬರುವುದಕ್ಕೆ ಅವಕಾಶವನ್ನು ಕೊಡಬಾರದೆಂದು ಹೇಳುತ್ತೇನೆ. ಉಪಾಧ್ಯಾಯರ ವರ್ಗದಲ್ಲಿ ಲಂಚ ರುಷುವತ್ತು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆದುದರಿಂದ ದುಡಿಮೆ ಮಾಡತಕ್ಕವರಿಗೆ ಹೆಚ್ಚು ಸಂಬಳ ಕೊಡಬೇಕಾದುದು

(ಶ್ರೀ ಕಾಗೋಡು ತಿಮ್ಮಪ್ಪ)

ನ್ಯಾಯವಾದುದು. ಎಷ್ಟು ಕೊಡಬೇಕು, ಹೇಗೆ ಕೊಡಬೇಕು ಎಂಬುದನ್ನು ಶಾಸ್ತ್ರೀಯವಾಗಿ ಪರಿಗಣನೆ ಮಾಡಿ ತೀರ್ಮಾನ ಮಾಡಿ. ಚಳುವಳಿ ಪ್ರಾರಂಭವಾಗುವುದಕ್ಕೆ ಮುಂಚೆಯೇ ಉಪಾಧ್ಯಾಯರು ಬೇಡಿಕೆಗಳನ್ನು ಇಟ್ಟಿದ್ದರು. ಈ ಚಳುವಳಿ ಪ್ರಾರಂಭ ವಾಡಿದ್ದಕ್ಕೆ ಮುಂಚೆ ಅವರ ಮುಂದೆ ಇದ್ದಂತಹ ಪ್ರಶ್ನೆ ಒಂದೇ ಒಂದು ಎಂದು ನಾನು ತಿಳಿದುಕೊಂಡಿದ್ದೇನೆ. ಉಪಾಧ್ಯಾಯರು ಪ್ರಶ್ನೆಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವುದಕ್ಕೆ ಬಂದಿದ್ದರು. ಬಂದಂತಹ ಕಾಲದಲ್ಲಿ ಅವರಿಗೆ ಕೊಡಬೇಕಾದಂಥ ಶುಲ್ಕ ಬಹಳ ಕಮ್ಮಿ ಪ್ರಮಾಣದ್ದು ಎಂದು ಒಂದು ಮುಖ್ಯವಾದ ಬೇಡಿಕೆ ಇತ್ತು. ಆ ಬೇಡಿಕೆಯ ಬಗ್ಗೆ ತೀರ್ಮಾನ ಮಾಡಿದ್ದರೆ ನೀವು ತಲೆಯ ಮೇಲೆ ಕಲ್ಲನ್ನು ಹಾಕಿಕೊಳ್ಳುತ್ತಾ ಇರಲಿಲ್ಲ. ಅದನ್ನು ತಕ್ಷಣ ತೀರ್ಮಾನ ಮಾಡುವುದಕ್ಕೆ ಹೋಗಲಿಲ್ಲ. ಈಗ ಅವರು ಎಲ್ಲಾ ಸಮಸ್ಯೆಗಳನ್ನು ತಮ್ಮ ಮುಂದಿಟ್ಟು ಪ್ರಶ್ನೆ ಪತ್ರಿಕೆಗಳ ವ್ಯಾಲುಯೇಷನ್ ಮಾಡುವುದನ್ನೂ ಕೂಡ ಸಂಪೂರ್ಣವಾಗಿ ನಿಲ್ಲಿಸಿಬಿಟ್ಟಿದ್ದಾರೆ. ಏನು ಮಾಡುವುದಕ್ಕೂ ಅವಕಾಶ ಅಗದೇ ಇರತಕ್ಕ ಸಂದಿಗ್ಧ ಪರಿಸ್ಥಿತಿ ಬಂದಿದೆ. ಅವರು ಕೇಳಿರುವ ದಿನಭತ್ಯ ಬಹಳ ಕನಿಷ್ಠದ್ದು. 10 ದಿವಸದ ಅವಧಿಯಲ್ಲಿ 300 ರೂಪಾಯಿಗಳಿಗಿಂತ ಜಾಸ್ತಿಯಾಗಿ ಕೊಡುವುದಿಲ್ಲ. ಒಂದು ಪ್ರಶ್ನೆ ಪತ್ರಿಕೆಗೆ 75 ಪೈಸೆ ಕೊಡುತ್ತಿರುವುದನ್ನು 1 ರೂಪಾಯಿ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದೀರಿ. ಜೊತೆಗೆ 6 ರೂಪಾಯಿ ಕೊಡುತ್ತಿದ್ದೀರಿ. ಬೆಂಗಳೂರಿನಲ್ಲಿ ಒಂದು ದಿವಸ ಉಳಿದರೆ ಎಷ್ಟು ಖರ್ಚಾಗುತ್ತದೆ? 10 ದಿವಸ ಬೆಂಗಳೂರಿಗೆ ಬಂದರೆ ಅವರಿಗೆ ಬರತಕ್ಕ ಆದಾಯದಲ್ಲಿ ಖರ್ಚನ್ನು ಪೂರೈಸಿಕೊಂಡು ಮನೆಗೆ ಹೋಗಬೇಕಾದರೆ 300 ರೂಪಾಯಿ ಕೈಯಲ್ಲಿದ್ದರೆ ಮಕ್ಕಳು ಮರಿಗಳಿಗೆ ಬಟ್ಟೆ ತಗೆದುಕೊಂಡು ಹೋಗುವುದಕ್ಕಾಗುತ್ತದೆ. ಹೋಟೆಲ್‌ನಲ್ಲಿ ಉಳಿಯುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ? ಅದು ಅಲ್ಲ. ಆದುದರಿಂದ ಸಾಮಾನ್ಯ ಹೋಟೆಲ್‌ನಲ್ಲಿ ಉಳಿದುಕೊಂಡರೆ ಒಂದು ಬೆಡ್‌ಗೆ 6 ರೂಪಾಯಿ ಕೊಡಬೇಕು. ಮಧ್ಯಾಹ್ನ ಊಟಕ್ಕೆ ಎರಡೂವರೆ ರೂಪಾಯಿ ಬೆಳಿಗ್ಗೆ ಕಾಫಿಗೆ 1 ರೂಪಾಯಿ, ಸಾಯಂಕಾಲ ಕಾಫಿಗೆ 1 ರೂಪಾಯಿ, ರಾತ್ರಿ ಊಟಕ್ಕೆ ಎರಡೂವರೆ ರೂಪಾಯಿ. ಅಂದರೆ ಒಟ್ಟಿಗೆ 13 ರೂಪಾಯಿ ಖರ್ಚಾಗುತ್ತದೆ. ನೀವು ಕೊಡುವುದು 6 ರೂಪಾಯಿ. ಉಳಿದ 7 ರೂಪಾಯಿಗಳನ್ನು ಅವರು ಎಲ್ಲಿಂದ ತರಬೇಕು? ಯಾರ ಮನೆಗೆ ಕನ್ನ ಹಾಕಬೇಕು? ದಿನಕ್ಕೆ ಅವರು 10 ರೂಪಾಯಿ ಕೇಳಿದ್ದಾರೆ. 10 ರೂಪಾಯಿ ಅಲ್ಲ, 15 ರೂಪಾಯಿ ಆದರೂ ಕನಿಷ್ಠ ಕೊಡಬೇಕು. 13 ರೂಪಾಯಿ ಖರ್ಚಾದಮೇಲೆ 2 ರೂಪಾಯಿ ಪಾಕೆಟ್ ಮನಿ, ಸಿಗರೇಟ್‌ನ ಸ್ವರ್ಗ್?. ಬೆಳಗಿನಿಂದ ಪ್ರಶ್ನೆಪತ್ರಿಕೆ ವಾಲ್ಯುಯೇಷನ್ ಮಾಡಿ, ಮಾಡಿ ತಲೆ ಕಾದಿರುತ್ತದೆ, ಸಿಗರೇಟ್ ಸೇದಿ ಅದನ್ನು ಸಮಾಧಾನ ಮಾಡಿಕೊಳ್ಳಬಹುದು. ಇಲ್ಲದೆ ಹೋದರೆ 50 ಮಾರ್ಕ್ಸ್ ಕೊಡುವ ಕಡೆ 30 ಮಾರ್ಕ್ಸ್ ಕೊಟ್ಟರೆ ಏನು ಮಾಡಬೇಕು? ನಿಮ್ಮ ಹುಡುಗನಿಗೇ 30 ಮಾರ್ಕ್ಸ್ ಕೊಟ್ಟರೆ ನಿಮಗೆ ಏನು ಅನ್ನಿಸುತ್ತದೆ?

ಶ್ರೀ ಕೆ. ಎಚ್. ರಂಗನಾಥ್.—ಇಷ್ಟೇ ನಂಬರ್ ಕೊಡಬೇಕು ಎಂದು ಅದಕ್ಕೆ ಮಾಡಲ್ ಆನ್ಸರ್ ಇರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾಡಲ್ ಆನ್ಸರ್ ಪ್ರಿಪೇರ್ ಮಾಡಿ ಕೊಟ್ಟಿರಬಹುದು. ಆದರೂ ಅವರು 50 ಮಾರ್ಕ್ಸ್ ಕೊಡುವ ಕಡೆ 5 ನಂಬರ್ ಕೊಟ್ಟರೆ ನೀವು ಏನು ಮಾಡುವುದಕ್ಕೂ ಬರುವುದಿಲ್ಲ. ಅವರು ಕೇಳಿರತಕ್ಕ ದಿನಭತ್ಯವನ್ನು 15 ರೂಪಾಯಿಗೆ ಈ ಕಾಲದಲ್ಲಿ ಏರಿಸುವುದು ಸಮಂಜಸ. ಜೊತೆಗೆ ಒಂದು ರೂಪಾಯಿ ಕೊಡುವುದಕ್ಕೆ ಒಪ್ಪಿಕೊಂಡಿದ್ದೀರಿ. ಅದು ಉತ್ತಮವಾದ ತೀರ್ಮಾನ. ಧರಣಿ ಮುಷ್ಕರವನ್ನು ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ಈ ಕೆಲಸ ಮಾಡಿದ್ದರೆ ಈ ಒಂದು ಸನ್ನಿವೇಶ ರಾಜ್ಯದಲ್ಲಿ ಉಂಟಾಗುವುದಕ್ಕೆ ಅವಕಾಶವೇ ಇರಲಿಲ್ಲ. ಈಗ ಚಳುವಳಿ ಬೇರೆ ರೂಪ ತಾಳುವುದಕ್ಕೆ ಪ್ರಾರಂಭವಾಗಿದೆ. ಜೊತೆಗೆ ಪ್ರತಿಗಾಮಿ ವಾದಿಗಳ ಕೈಗೆ ಈ ಚಳುವಳಿ ಹೋಗುವುದಕ್ಕೆ ಶುರುವಾಗಿದೆ. ಇದಕ್ಕೆ ಯಾರು ಹೊಣೆಗಾರರು ಎಂದು ನೋಡುವುದಾದರೆ, ಜವಾಬ್ದಾರಿ ಸ್ಥಾನದಲ್ಲಿರುವ ಸರ್ಕಾರವೇ ಎಂದು ಹೇಳಬಹುದು. ಈ ರಾಜ್ಯದಲ್ಲಿರುವ ಶಿಕ್ಷಕರನ್ನು ಜವಾಬ್ದಾರಿ ಸ್ಥಾನದಲ್ಲಿರುವವರು ಸರಿಯಾಗಿ ಇಲ್ಲಿಯವರೆಗೆ ನೋಡಿಕೊಳ್ಳದೆ ಬಂದಿದ್ದರಿಂದ ಅದು ಇಂದು ಚಳುವಳಿ ರೂಪಕ್ಕೆ ತಿರುಗಿದೆ. ಮುಖ್ಯವಾಗಿ ಉಪಾಧ್ಯಾಯರು ಈ ಒಂದು ಚಳುವಳಿಯನ್ನು ಮಾಡುವುದಕ್ಕೆ ಸರ್ಕಾರವೇ ನೇರವಾಗಿ ಪ್ರೋತ್ಸಾಹ ನೀಡಿದೆ ಎಂದು ನಾನು ಆಪಾದನೆ ಮಾಡದೆ ವಿಧಿಯಿಲ್ಲ. ಆದಕಾರಣ ಇವೊತ್ತು ಅವರ ಒಂದು ಬೇಡಿಕೆಗಳು ಏನಿವೆ ಅವುಗಳನ್ನು ಅವರ ಜೊತೆಯಲ್ಲಿ ಸಮಾಲೋಚನೆ ಮಾಡುವುದರ ಮೂಲಕ ಒಂದು ಗೊತ್ತಾದಂತಹ ಅವಧಿಯಲ್ಲಿ ತೀರ್ಮಾನ ಮಾಡಬೇಕು. ಒಂದೇ ಕೆಲಸ ಮಾಡುವ

ಉಪಾಧ್ಯಾಯರುಗಳಿಗೆ ಎರಡು ರೀತಿಯ ವೇತನ ಕೊಡುವುದನ್ನು ತಪ್ಪಿಸುವುದು, ಸೀನಿಯಾರಿಟಿ ಪಟ್ಟಿಯನ್ನು ಜಾರಿಗೆ ಜಾಗ್ರತೆ ತರಬೇಕು ಮುಂತಾದ ಬೇಡಿಕೆಗಳು ಏನಿವೆ, ಅವುಗಳನ್ನು ಕೂಡಲೇ ಕಾರ್ಯಗತ ಮಾಡಬೇಕು. ಈಗ ಈ ಇಲಾಖೆಯವರಿಗೆ ಸೀನಿಯಾರಿಟಿ ಪಟ್ಟಿ ತಯಾರು ಮಾಡುವುದೇ ಗೊತ್ತಿಲ್ಲ; ಆ ಬಗ್ಗೆ ಸರ್ಕಾರದವರು ಒಂದು ಗೈಡ್ ಲೈನ್ ಹಾಕಿಕೊಟ್ಟರೆ ಅದರಂತೆ ಅವರು ಮಾಡಿ ಕೊಂಡು ಹೋಗುತ್ತಾರೆ. ಅವರ ಬೇಡಿಕೆಗಳ ಪೈಕಿ,

> "To make the present system of education purposeful and save the students community from disgrace."

ಎಂಬತಕ್ಕಂಥ ಒಂದು ಬೇಡಿಕೆಯೂ ಸಹ ಇದೆ. ಇದನ್ನು ಏನಾದರು ಸರ್ಕಾರದವರು ಕಾರ್ಯಗತ ಮಾಡಿದರೆ ಬಹಳ ಜನ ಉಪಾಧ್ಯಾಯರು ಮನೆಗೆ ಹೋಗಬೇಕಾಗುತ್ತದೆ. ಏಕೆಂದರೆ ಇಂದಿನ ಉಪಾಧ್ಯಾಯರುಗಳ ಪೈಕಿ ಅನೇಕ ಜನರಿಗೆ ನೇಗಿಲು ಹಿಡಿಯುವುದಕ್ಕೇ ಬರುವುದಿಲ್ಲ. ಆಗ ಬೇರೆ ಉಪಾಧ್ಯಾಯರುಗಳನ್ನು ಅವರ ಜಾಗಕ್ಕೆ ತರಬೇಕಾಗುತ್ತದೆ. ಉಪಾಧ್ಯಾಯರುಗಳೇ ಈ ವಿಚಾರವನ್ನು ಹೇಳುತ್ತಿರುವುದರಿಂದ ಇದನ್ನು ಕಾರ್ಯಗತ ಮಾಡುವುದಾದರೆ ಅದು ಬಹಳ ಉತ್ತಮವಾದಂಥ ಕೆಲಸವಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಇಂದಿನ ಉಪಾಧ್ಯಾಯರುಗಳ ಪೈಕಿ ನೇಗಿಲು ಹಿಡಿಯು ವವರು ಬಹಳ ಮಂದಿ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಇಂದಿನ ವಿದ್ಯಾಭ್ಯಾಸದ ಕ್ರಮದಿಂದ ನಮ್ಮ ಸಮಾಜಕ್ಕೆ ಏನೂ ಉಪಯೋಗ ಇಲ್ಲ ಎಂಬುದನ್ನು ಅವರೇ ಮನಗಂಡಮೇಲೆ ಈ ಒಂದು ಅಂಶವನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಕಾಲ ಸನ್ನಿಹಿತವಾಗಿದೆ ಎಂದು ತಮ್ಮ ಮೂಲಕ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ಈ ಅಂಶವನ್ನು ಮತ್ತು ಅವರ ಇನ್ನಿತರ ಬೇಡಿಕೆಗಳನ್ನು ತಕ್ಷಣವೇ ಪರಿಶೀಲನೆ ಮಾಡ ಬೇಕು ಮತ್ತು ಒಂದು ನಿರ್ದಿಷ್ಟವಾದ ಅವಧಿಯಲ್ಲಿ ಜಾರಿಗೆ ತರುತ್ತೇವೆಂದು ಅವರಿಗೆ ತಿಳಿಸಬೇಕು. ಆದರೆ ಈ ರೀತಿ ಮೀನಾಮೇಷ ಎಣಿಸುವುದು ಬೇಡ. ಈ ಬಗ್ಗೆ ಒಂದು ನಿರ್ದಿಷ್ಟವಾದ ತೀರ್ಮಾನ ವನ್ನು ಕೈಕೊಳ್ಳಿ, ಇಲ್ಲದಿದ್ದರೆ ನಿಮಗೆ ಧೈರ್ಯವಿದ್ದರೆ ಚಳುವಳಿಯನ್ನು ಎದುರಿಸಿ; ಅದು ಬಿಟ್ಟು ಆಕ್ಕ ಬೇಕು, ಭಾವ ಬೇಡ ಎಂದು ಹೇಳುವುದು ಸರಿಯಲ್ಲ; ಮುಖ್ಯವಾಗಿ ಒಂದು ನಿರ್ದಿಷ್ಟವಾದ ಹೊತ್ತಿನಲ್ಲಿ ಅವರ ಬೇಡಿಕೆಗಳನ್ನು ಜಾರಿಗೆ ತರುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕು ಮತ್ತು ಅವರ ದಿನಭತ್ಯದ ಹಣವನ್ನು ಸರ್ಕಾರದವರು ಹೆಚ್ಚು ಮಾಡುತ್ತಾರೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಶಿಕ್ಷಕರ ವಿಷಯದಲ್ಲಿ ಮಾನ್ಯ ದೇವೇಗೌಡರು ಮಂಡಿಸಿರತಕ್ಕಂಥ ನಿಲುವಳಿ ಸೂಚನೆ ಏನಿದೆ, ಅದನ್ನು ಮತ್ತು ಶಿಕ್ಷಕರು ಸರ್ಕಾರದ ಮುಂದಿಟ್ಟಿರತಕ್ಕಂಥ ಕನಿಷ್ಠವಾದ ಬೇಡಿಕೆಗಳು ಏನಿವೆ, ಅವನ್ನು ಸರ್ಕಾರದವರು ನ್ಯಾಯವಾಗಿ ಪರಿಶೀಲನೆ ಮಾಡಬೇಕಾದಂಥ ಬೇಡಿಕೆಗಳಾಗಿವೆಯಾದ್ದರಿಂದ ಅವುಗಳ ಬಗ್ಗೆ ನನ್ನ ಸಹಾನುಭೂತಿ ಇದೆ. ಮಾನ್ಯ ದೇವೇಗೌಡರು ಮಾತನಾಡುವಾಗ ಶಿಕ್ಷಕರ ಬೇಡಿಕೆಗಳ ಪೈಕಿ ಕೆಲವು ಕಳೆದ ಮೂರು ವರ್ಷಗಳಿಂದ ಮತ್ತೆ ಕೆಲವು ಕಳೆದ 30 ವರ್ಷಗಳಿಂದ ಪರಿಶೀಲನೆಯಾಗದೆ ಬಾಕಿ ಉಳಿದಿವೆ ಎಂದು ಹೇಳಿದರು. ಈ ಅಂಶವನ್ನು ನಾವು ಪತ್ರಿಕೆಗಳಲ್ಲಿಯೂ ಸಹ ನೋಡಿದ್ದೇವೆ. ಬಹಳ ಹಿಂದಿನಿಂದ ಇವು ಇತ್ಯರ್ಥವಾಗದೇ ಉಳಿದಿರುವುದಕ್ಕೆ ಈಗ ಅಧಿಕಾರಕ್ಕೆ ಬಂದಿರುವ ಸರ್ಕಾರವೇ ಕಾರಣ ಎಂದು ಹೇಳುವುದಕ್ಕೆ ಬರುವುದಿಲ್ಲ. ಈ ಹಿಂದೆ ಈ ಖಾತೆಯಲ್ಲಿ ಮಾನ್ಯ ಬದರೀನಾರಾಯಣ ಅಯ್ಯಂಗಾರ್ ಇದ್ದರು. ಅವರ ಕಾಲದಲ್ಲಿ ಏತಕ್ಕೆ ಈ ಬೇಡಿಕೆಗಳ ಬಗ್ಗೆ ಒತ್ತಾಯ ತರಲಿಲ್ಲ ಎನ್ನುವ ಪ್ರಶ್ನೆಯನ್ನು ಕೂಡ ಇಲ್ಲಿ ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಡಿ. ದೇವೇಗೌಡ.—ವಿಧಾನಪರಿಷತ್ತಿನಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ; ಆ ಸಮಯದಲ್ಲಿ ಸರ್ಕಾರದವರು ನಾನಾ ರೀತಿಯ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಶ್ರೀಮಾನ್ ಶಂಕರಗೌಡರು ಸಹ ಈ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ತಾವು ಹಿಂದಿನ ಪ್ರೊಸೀಡಿಂಗ್ಸನ್ನು ತೆಗೆದು ನೋಡಿದರೆ ಗೊತ್ತಾಗುತ್ತದೆ We cannot take it in such a light-hearted way. ಆದ್ದರಿಂದ ಈ ಬಗ್ಗೆ ನಾನು ನನ್ನ ಸ್ನೇಹಿತರಿಗೆ ಹೇಳುವುದೇನೆಂದರೆ, ಇದು ನೆನ್ನೆ ಅಥವಾ ಮೊನ್ನೆ ಪ್ರಾರಂಭವಾದ ಬೇಡಿಕೆಗಳಲ್ಲ ಮತ್ತು ಆ ರೀತಿಯ ಭಾವನೆ ಕೊಡು ವುದು ಬೇಡ.

ಶ್ರೀ ಕೆ. ಶ್ರೀರಾಮುಲು.—ಮಾನ್ಯ ದೇವೇಗೌಡರು ಹೇಳಿದ್ದು ನನಗೆ ಅರ್ಥವಾಗಿದೆ. ಆದರೆ ಈ ಸಭೆಯಲ್ಲಿ ಕಳೆದ ನೂರು ವರ್ಷಗಳಿಂದ ಈ ಬೇಡಿಕೆಗಳ ಬಗ್ಗೆ ಏತಕ್ಕೆ ಒತ್ತಾಯ ತರಲಿಲ್ಲ ಎಂದು ನಾನು ಕೇಳುತ್ತಿರುವುದು? ಮತ್ತೊಂದು ಮುಖ್ಯವಾದ ಅಂಶವೆಂದರೆ, ಇಂದು ಯಾರೇ ಆಗಲೀ, ಬುದ್ಧಿವಂತರ ವಿಚಾರದಲ್ಲಿ ಮತ್ತು ಉಪಾಧ್ಯಾಯರ ವಿಚಾರದಲ್ಲಿ ಏನಾದರೂ ತೊಂದರೆ ಇದ್ದರೆ ಆ ಬಗ್ಗೆ ಕನಿಕರದಿಂದ ಮಾತನಾಡುತಾರೆ; ಆದರೆ 1966ನೇ ಇಸವಿಯಲ್ಲಿ ಮೈಸೂರು ಮಿನರ್ವ ಮಿಲ್ಸ್‌ನ್ನು ಮುಚ್ಚಲಾಯಿತು; ಆಗ ಸುಮಾರು 5 ಸಾವಿರ ಕಾರ್ಮಿಕರು ಸುಮಾರು 4 ವರ್ಷಗಳ ಕಾಲ ತೊಂದರೆಗೆ ಒಳಪಟ್ಟರು. ಕೆಲವರು ನೇಣು ಹಾಕಿಕೊಂಡು ಸತ್ತರು; ಆದರೆ ಅವರಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಯಾರೂ ಸಹ ಒಂದು ನಿರ್ಣಯವನ್ನು ಇಲ್ಲಿ ತರಲಿಲ್ಲ; ಆಗ ಶ್ರೀಮಾನ್ ವೀರೇಂದ್ರಪಾಟೀಲರ ಸರ್ಕಾರವಿತ್ತು; ಆದರೆ ನಾನು ಈ ಶಿಕ್ಷಕರಿಗೆ ಏತಕ್ಕೆ ಅನುಕೂಲ ಮಾಡಿಕೊಡುತ್ತಿದ್ದೀರಿ ಎಂದು ಕೇಳುತ್ತಿಲ್ಲ; ಅವರೆ ಅನುಕೂಲಗಳನ್ನು ಕಲ್ಪಿಸಿಕೊಡುವಾಗ ಸರ್ಕಾರದವರು ಸಮಾಜದಲ್ಲಿರುವ ಎಲ್ಲರನ್ನೂ ಸಮನಾಗಿ ನೋಡಬೇಕಾಗುತ್ತದೆಂಬ ಅಂಶವನ್ನು ಮಾತ್ರ ಮಾನ್ಯ ವಿರೋಧಪಕ್ಷದ ನಾಯಕರಿಗೆ ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ದೇವರಾಜ ಅರಸ್ ಅವರು ಅಂದು ಕಾರ್ಮಿಕ ಮಂತ್ರಿಗಳಾಗಿದ್ದರು. ಆ ಸಮಯದಲ್ಲಿ ಈ ಮಿಲ್‌ಗಳನ್ನು ಸರ್ಕಾರದವರೇ ತೆಗೆದುಕೊಳ್ಳಬೇಕು ಎಂದು ಹೋರಾಟ ಮಾಡಿದವರ ಪೈಕಿ ಮಾನ್ಯ ದೇವರಾಜ ಅರಸ್ ಅವರೇ ಮೊದಲಿಗರು.

ಶ್ರೀ ಎಚ್. ಡಿ ದೇವೇಗೌಡ.—1966ನೇ ಇಸವಿಯಲ್ಲಿ ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದರೂ ಸಹ ಮಾನ್ಯ ದೇವರಾಜ ಅರಸ್ ಅವರು ಕಾರ್ಮಿಕ ಮಂತ್ರಿಗಳಾಗಿದ್ದರು. ಆದಕಾರಣ ಅದರ ಜವಾಬ್ದಾರಿಯನ್ನು ತೆಗೆದುಕೊಂಡಿರುವವರು ಆ ಕೆಲಸವನ್ನು ಮಾಡಬೇಕಾಗುತ್ತದೆ. ಅಂದರೆ ದೋಬಿಯಾದವನು ದೋಬಿ ಕೆಲಸ ಮಾಡಬೇಕಾಗುತ್ತದೆ, ಕ್ಷೌರದ ಕೆಲಸ ಮಾಡುವವನು ಕ್ಷೌರ ಮಾಡಬೇಕಾಗುತ್ತದೆ; ಅದೇ ರೀತಿ ನನ್ನಂತಹವರು ಹೊಲದಲ್ಲಿ ಹುಕ್ಕೆ ಹೊಡೆಯಬೇಕಾಗುತ್ತದೆ.

ಶ್ರೀ ಕೆ. ಶ್ರೀರಾಮುಲು.—ಈ ವಿಷಯವನ್ನು ನಾನು ತಮ್ಮಿಂದ ಕಲಿಯಬೇಕಾಗಿಲ್ಲ. ಆದರೆ ಕ್ಷೌರ ಮಾಡುವವನಿಗೆ ಕತ್ತಿಯನ್ನೇ ಕೊಡದೆ ಇದ್ದರೆ ಅತನು ಏನು ಮಾಡುವುದಕ್ಕಾಗುತ್ತದೆ? ಶ್ರೀಮಾನ್ ವೀರೇಂದ್ರ ಪಾಟೀಲರು ಅವರಿಗೆ ಅಧಿಕಾರ ಕೊಟ್ಟಿದ್ದರೆ ಮಾಡುತ್ತಿದ್ದರು; ಆದರೆ ಅವರಿಗೆ ಕಾರ್ಮಿಕರ ಬಗ್ಗೆ ಕನಿಕರ ಇರಲಿಲ್ಲ; ಅನೇಕ ವರ್ಷಗಳ ಕಾಲ ಆ ಮಿಲ್‌ಗಳನ್ನು ಮುಚ್ಚಿದ್ದರಿಂದ ಕೆಲವರು ಫಾಲಿಡಾಲ್ ಸೇವಿಸಿ ಸತ್ತರೆ ಮತ್ತೆ ಕೆಲವರು ನೇಣು ಹಾಕಿಕೊಂಡು ಸತ್ತರು. ಶಿಕ್ಷಕರ ವಿಷಯದಲ್ಲಿ ನನಗೆ ಸಾಕಷ್ಟು ಕನಿಕರ ಇದೆ ಎಂದು ನಾನು ಈ ಮೊದಲೇ ಹೇಳಿದ್ದೇನೆ. ಅವರ ನ್ಯಾಯವಾದ ಬೇಡಿಕೆಗಳ ಬಗ್ಗೆ ನನ್ನ ಬೆಂಬಲವಿದೆ. ಎಲ್ಲ ಧಾರಣೆಗಳು ಹೆಚ್ಚುತ್ತಿರುವಾಗ ಅವರ ದಿನಭತ್ಯ ಹೆಚ್ಚಾಗಬಾರದು ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಈ ಮಾತನ್ನು ನಾನು ಕಾರ್ಮಿಕ ಮುಖಂಡನಾಗಿ ಹೇಳುತ್ತಿದ್ದೇನೆ. ಅಷ್ಟೇ ಅಲ್ಲ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಇಂದು ಸರ್ಕಾರದವರು ಶಿಕ್ಷಕರ ನಿವೃತ್ತಿ ವಯಸ್ಸನ್ನು 58 ರಿಂದ 55ಕ್ಕೆ ಏನು ಇಳಿಸಿದೆ, ಆ ಬಗ್ಗೆ ಮತ್ತೆ ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಇಲ್ಲದಿದ್ದರೆ ಈ ರೀತಿ ನಿವೃತ್ತಿಯಾಗುವವರ ಒಂದು ಗುಂಪೇ ಇನ್ನು ಹತ್ತು ವರ್ಷಗಳಲ್ಲಿ ದೊಡ್ಡದಾಗಿ ಬೆಳೆದುಬಿಡುತ್ತದೆ, ಮತ್ತು ಸುಪ್ರೀಂ ಕೋರ್ಟಿನ ಜಡ್ಜ್‌ಗಳು ಕೂಡ 62ನೇ ವರ್ಷದವರೆಗೂ ಕೆಲಸ ಮಾಡಬಹುದು ಎಂದು ಹೇಳಿದ್ದಾರಾದ್ದರಿಂದ, ಶಿಕ್ಷಕರ ಬೇಡಿಕೆಗಳನ್ನು ಪರಿಶೀಲನೆ ಮಾಡುವಾಗ ಈ ಅಂಶವನ್ನು ಸಹ ಮಾನ್ಯ ವಿದ್ಯಾಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಮನಸ್ಸಿನಿಂದ ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಆದರೆ ವಿದ್ಯಾವಂತರಾದ ಶಿಕ್ಷಕರು ನಾಳೆ ನಮ್ಮನ್ನು ಕೇಳುತಾರೆ ಎಂಬ ಹೆದರಿಕೆಯಿಂದ ಈ ರೀತಿಯ ನಿರ್ಣಯವನ್ನು ಈ ಸಭೆಯಲ್ಲಿ ತರುವುದು ಸರಿಯಲ್ಲ. ಏಕೆಂದರೆ ಇಂದು ಸಮಾಜದಲ್ಲಿ ಅನೇಕ ಅವಿದ್ಯಾವಂತರಿದ್ದಾರೆ, ಇವರುಗಳ ಪೈಕಿ ಎಷ್ಟೋ ಜನರು ಮಾನ್ಯ ಎಂ. ಎಸ್. ಕೃಷ್ಣನ್ ಅವರ ಕೈಕಾಲು ಹಿಡಿದು ತಿಂಗಳಿಗೆ 40-50 ರೂಪಾಯಿಗಳ ಕೆಲಸಕ್ಕೆ ಸೇರಿದವರು ಇದ್ದಾರೆ. ಇಂತಹವರಿಗೆ ಅನುಕೂಲ ಮಾಡಬೇಕು ಎಂಬ ಬಗ್ಗೆ ಕಳೆದ 25 ವರ್ಷಗಳಿಂದ ಯಾರೂ ಸಹ ಯಾವ ಒಂದು ನಿರ್ಣಯವನ್ನು ತರಲಿಲ್ಲ; ಆದ್ದರಿಂದ ಒಬ್ಬರಿಗೆ ಒಂದು ನೀತಿ ಮತ್ತೊಬ್ಬರಿಗೆ ಇನ್ನೊಂದು ನೀತಿ ಎಂಬುದು ಹೋಗಬೇಕು; ಸಮಾಜದಲ್ಲಿರತಕ್ಕಂಥ ಅವಿದ್ಯಾವಂತರನ್ನು ಮೇಲಕ್ಕೆ ತರುವ ಬಗ್ಗೆ ಏನಾದರು ನಿರ್ಣಯ ತಂದರೆ ಆಗ ನಾನು ಸಂತೋಷಪಡುತ್ತೇನೆ ಮತ್ತು ಅದಕ್ಕೆ ಶಹಭಾಸ್‌ಗಿರಿಯನ್ನು ಕೊಡಬಹುದು; ಅಂದರೆ ಈಗ ಸಭೆಯ ಮುಂದಿರುವ ಶಿಕ್ಷಕರ ಬೇಡಿಕೆಗಳ ಬಗ್ಗೆ ನನ್ನ ವಿರೋಧವಿದೆ ಎಂದು ಅರ್ಥವಲ್ಲ; ಅವುಗಳನ್ನು ಸರ್ಕಾರದವರು

ಒಪ್ಪಿಕೊಂಡರೆ ನಾನು ಸಂತೋಷಪಡುತ್ತೇನೆ. ಈಗಾಗಲೇ ಸರ್ಕಾರದವರು ಕೆಲವು ಬೇಡಿಕೆಗಳನ್ನು ಒಪ್ಪಿಕೊಂಡಿದ್ದಾರೆ. ಇನ್ನು ಉಳಿದಿರತಕ್ಕಂಥ ಬೇಡಿಕೆಗಳನ್ನು ಸಹ ಸರ್ಕಾರದವರು ಪರಿಶೀಲನೆ ಮಾಡಿ ಜಾರಿಗೆ ಕೊಡುವುದರಲ್ಲಿ ನನ್ನ ಅಭ್ಯಂತರವಿಲ್ಲ: ಈಗ ಶಿಕ್ಷಕರು ಸುಮಾರು 23 ಡಿಮ್ಯಾಂಡುಗಳನ್ನು ಸರ್ಕಾರದ ಮುಂದೆ ಇಟ್ಟಿದ್ದಾರೆ. ಆ ಡಿಮ್ಯಾಂಡ್‌ಗಳ ವಿವರ ನನ್ನ ಹತ್ತಿರ ಇಲ್ಲದಿರುವುದರಿಂದ ಅವುಗಳನ್ನು ಒಂದೊಂದಾಗಿ ಬಿಡಿಸಿ ಹೇಳುವುದಕ್ಕೆ ಹೋದರೆ ತಪ್ಪಾಗಬಹುದು; ಆದಕಾರಣ ಆ ವಿಷಯವನ್ನು ಸರ್ಕಾರಕ್ಕೆ ಬಿಟ್ಟು, ಇಲ್ಲಿ ಶಿಕ್ಷಕರು ಕೆಲವರು ಇರುವುದರಿಂದ, ಅವರ ಬಗ್ಗೆ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಏನೆಂದರೆ, 1971ರಿಂದ 1973ರವರೆಗೆ ಎಸ್.ಎಸ್.ಎಲ್.ಸಿ.ಯ ಪರೀಕ್ಷಾ ಫಲಿತಾಂಶ ಕೆಳಕ್ಕೆ ಇಳಿದಿದೆ. ಈ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಫೇಲಾಗುತ್ತಿರುವುದಕ್ಕೆ ಶಿಕ್ಷಕರೇ ಜವಾಬ್ದಾರರು ಎಂದು ಹೇಳುತ್ತೇನೆ. ಶಿಕ್ಷಕರ ಬೇಡಿಕೆಗಳ ಬಗ್ಗೆ ನನ್ನ ಮೆಚ್ಚುಗೆ ಇದೆ. ಆದರೆ ಅವರ ಕರ್ತವ್ಯವನ್ನು ಸರಿಯಾಗಿ ನಿರ್ವಹಣೆ ಮಾಡಬೇಕಾಗುತ್ತದೆಂದು ಹೇಳಿ, ಕೊನೆಯದಾಗಿ ಶಿಕ್ಷಕರ ನ್ಯಾಯವಾದ ಬೇಡಿಕೆಗಳನ್ನು ಸರ್ಕಾರ ಪರಿಶೀಲನೆ ಮಾಡುವುದು ಒಳ್ಳೆಯದು ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರತಕ್ಕ ನಿಲುವಳಿ ಸೂಚನೆಯ ವಿಷಯದಲ್ಲಿ ಈಗಾಗಲೇ ಮಾನ್ಯ ಸದಸ್ಯರು ಹಲವಾರು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನಾನಾದರೂ ಕೂಡ ಇಷ್ಟು ಅಭಿಪ್ರಾಯ ಪಡುತ್ತೇನೆ. ಈಗ ಏನು ಸೆಕೆಂಡರಿ ಟೀಚರ್ಸ್ ಅಸೋಸಿಯೇಷನ್ನಿನವರಿಂದ ಬೇಡಿಕೆಗಳ ಒಂದು ದೊಡ್ಡ ಪಟ್ಟಿ ಮಂಡನೆಯಾಗಿದೆ ಅವರಲ್ಲಿರತಕ್ಕ ಎಲ್ಲಾ ಬೇಡಿಕೆಗಳನ್ನೂ ತತ್‌ಕ್ಷಣ ಸರ್ಕಾರ ಈಡೇರಿಸುವುದಕ್ಕೆ ಸಾಧ್ಯ ಎನ್ನತಕ್ಕಂಥಾ ಮಾತನ್ನು ನಾನು ನಂಬುವುದಿಲ್ಲ. ಕೆಲವಾರು ಪಾಲಸಿ ಮ್ಯಾಟರಿಗೆ ಸಂಬಂಧಪಟ್ಟವುಗಳಾಗಿವೆ, ಆದ್ದರಿಂದ ಇದು ತಡವಾಗಬಹುದು. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಈಗ ನಮ್ಮ ಮುಂದಿರತಕ್ಕ ಪ್ರಶ್ನೆ ಇಷ್ಟೆ. ಎಸ್. ಎಸ್. ಎಲ್. ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯ ಮಾಪನಕ್ಕೆ ಶಿಕ್ಷಕರು ಬೆಂಗಳೂರು ನಗರಕ್ಕೆ ಬಂದಾಗ ಈ ವಿಷಯ ದೊಡ್ಡ ಪ್ರಮಾಣದಲ್ಲಿ ಚರ್ಚೆಗೆ ಬಂದಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಚರ್ಚೆ ನಡೆಯುತ್ತಿದೆ. ವಿದ್ಯಾ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳು ಈ ಸದನದಲ್ಲಿ ಚರ್ಚೆಯಾಗಿ ತೀರ್ಮಾನ ಆದಾಗ ಈ ಬೇಡಿಕೆಗೆ ಈ ಮಾನ್ಯ ಸಭೆಯು ತನ್ನ ಒಪ್ಪಿಗೆಯನ್ನು ಕೊಡುವಾಗ ನಾವು ಮಾನ್ಯ ವಿದ್ಯಾ ಮಂತ್ರಿಗಳಿಗೆ ಒತ್ತಾಯ ಮಾಡಿ ಈ ಸಭೆಯಲ್ಲಿ ಮಾನ್ಯ ಸದಸ್ಯರು ಎತ್ತಿರತಕ್ಕ ಕೆಲವು ಪಾಲಸಿ ಮ್ಯಾಟರ್ಸ್ ಏನಿವೆ ಅವುಗಳ ಬಗ್ಗೆ ಏನೇನು ಮಾಡಿದ್ದೀರಿ ಎಂಬುದನ್ನು ಹೇಳಿ ಎಂದು ನಾನು ಮಾನ್ಯ ವಿದ್ಯಾ ಮಂತ್ರಿಗಳಿಗೆ ಒತ್ತಡವನ್ನು ತಂದಿದ್ದೇವೆ. ಆಗ ಮಾನ್ಯ ಮಂತ್ರಿಗಳು ಹೆಚ್ಚಿನ ಕಾಲಾವಕಾಶವಿಲ್ಲ ಎಂದು ಹೇಳಿದ್ದರಿಂದ ಅದನ್ನು ಅಷ್ಟಕ್ಕೇ ಬಿಡಬೇಕಾದಂತಹ ಪರಿಸ್ಥಿತಿ ಬಂತು, ಮೊನ್ನೆ ಶಿಕ್ಷಕರು ಎಸ್. ಎಸ್. ಎಲ್ ಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯ ಮಾಪನಕ್ಕೆ ಬೆಂಗಳೂರು ನಗರಕ್ಕೆ ಬಂದಾಗ ಮಾತ್ರ ಈ ಶಿಕ್ಷಕರ ಬೇಡಿಕೆಗಳು ಉದ್ಭವವಾಗಿವೆ. ಈ ಬೇಡಿಕೆಗಳನ್ನು ನಾನು ಒಪ್ಪುತ್ತೇನೆ. ಇವೊತ್ತಿನ ಪ್ರಶ್ನೆ ಶ್ರೀಮಾನ್ ವೀರೇಂದ್ರಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಹುಟ್ಟಿದ್ದೋ, ಅವರ ಗುರುಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯ ಮಂತ್ರಿಗಳಾಗಿದ್ದಾಗ ಹುಟ್ಟಿದ್ದೋ, ಅಥವಾ ಈಗ ಮುಖ್ಯ ಮಂತ್ರಿಗಳಾಗಿರತಕ್ಕ ಶ್ರೀಮಾನ್ ದೇವರಾಜ ಅರಸ್ ಅವರು ಅಧಿಕಾರದಲ್ಲಿರುವಾಗ ಹುಟ್ಟಿತೆ ಎನ್ನುವ ಪ್ರಶ್ನೆ ಬೇಡ. ಈ ಪ್ರಶ್ನೆ ಯಾವಾಗ ಹುಟ್ಟಿತು ಎನ್ನುವ ಪ್ರಶ್ನೆ ಬೇಡ. ಇದಕ್ಕೆ ಒಂದು ರಾಜಕೀಯ ಬಣ್ಣವನ್ನು ಕಟ್ಟುವುದು ಬೇಡ. ಇದಕ್ಕೆ ಯಾವುದೇ ಬಣ್ಣ ಹಾಕುವುದು ಬೇಡ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಈ ವಿದ್ಯಾಖಾತೆಯನ್ನು ವಹಿಸಿಕೊಂಡ ಮೇಲೆ ಬಹಳ ಚೆನ್ನಾಗಿ ಮಾಡುತ್ತಾರೆ ಎನ್ನುವ ನಂಬಿಕೆ ಇದೆಯೆಂದು ಎಲ್ಲರೂ ಹೇಳುತ್ತಾರೆ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿ ಅವರು ನಿಜವಾಗಿ ದಕ್ಷರು, ನಾನು ಅದನ್ನು ಒಪ್ಪುತ್ತೇನೆ. ಆದರೆ ಈಗ ಬಂದಿರತಕ್ಕ ಪ್ರಶ್ನೆ ಏನೆಂದರೆ ಶಿಕ್ಷಕರು ಸರ್ಕಾರದ ಮುಂದೆ ಇಟ್ಟಿರತಕ ಬೇಡಿಕೆಗಳು ಏನಿವೆ ಅವುಗಳ ಬಗ್ಗೆ ಮಾನ್ಯ ವಿದ್ಯಾಮಂತ್ರಿಗಳಿಂದ ತ್ವರಿತವಾಗಿ ಉತ್ತರವನ್ನು ಪಡೆಯತಕ್ಕ ಸಮಸ್ಯೆ ಏನಿದೆ ಅವುಗಳಿಗೆ ಅವರು ಉತ್ತರವನ್ನು ಕೊಡುವಾಗ ಆ ಪ್ರಶ್ನೆಗಳನ್ನು ನೀಗಿಸುತ್ತಾರೆ ಎನ್ನುವ ನಂಬಿಕೆ ನನಗೆ ಇರಲಿಲ್ಲ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಒಳ್ಳೆ ಚೆನ್ನಾಗಿ ಓದಿಕೊಂಡು ಆಳವಾಗಿ ಅಭ್ಯಾಸ ಮಾಡಿಕೊಂಡು ಬಂದಿದ್ದೇನೆ ಎಂದು ಎಷ್ಟೋ ಸಾರಿ ಅವರು ಈ ಸದನದಲ್ಲಿ ಹೇಳಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಶಿಕ್ಷಕರ ವಿಷಯದಲ್ಲಿ ಶಿಕ್ಷಣದ ವಿಷಯದಲ್ಲಿ ಹಲವಾರು ಸಮಸ್ಯೆಗಳು ಇವೆ, ಶಿಕ್ಷಕರ ಬೇಡಿಕೆಗಳು ಹಲವಾರು ದಿವಸಗಳಿಂದ ಇದ್ದು ಈ ಬಗ್ಗೆ 7—8 ದಿವಸಗಳಿಂದ ಚಳುವಳಿ ನಡೆಯುತ್ತಿದೆ. ಶಿಕ್ಷಕರ ಬೇಡಿಕೆಗಳು ನಿನ್ನೆ ಮೊನ್ನೆಯವು ಅಲ್ಲ. ಹಲವಾರು ದಿವಸಗಳಿಂದ ಚರ್ಚೆಮಾಡಿ ಹಲವಾರು ದಿವಸಗಳಿಂದ ಶಿಕ್ಷಕರು ತಮ್ಮ ಬೇಡಿಕೆಗಳನ್ನು ಸರ್ಕಾರದ

(ಶ್ರೀ ಎಸ್. ಬಂಗಾರಪ್ಪ)

ಮುಂದೆ ಇಡುತ್ತಾ ಬಂದಿದ್ದಾರೆ. ಈ ಬೇಡಿಕೆಗಳ ಬಗ್ಗೆ ಮಾನ್ಯ ವಿದ್ಯಾ ಮಂತ್ರಿಗಳು ಮೌನ ತಳೆದಿದ್ದು ಏತಕ್ಕೆ ? ಶಿಕ್ಷಕರ ಸಂಘದ ವತಿಯಿಂದ ಪ್ರತಿನಿಧಿಗಳು ಮಾನ್ಯ ವಿದ್ಯಾ ಮಂತ್ರಿಗಳನ್ನು ಕಂಡಾಗ ಅವರ ಕೆಲವಾರು ಬೇಡಿಕೆಗಳನ್ನು ಮಾನ್ಯ ವಿದ್ಯಾಮಂತ್ರಿಗಳು ಒಪ್ಪಿದಹಾಗೆ ಮಾಡಿ ಅವರು ಅವುಗಳನ್ನು ಒಪ್ಪಿದರೂ ಕೂಡ ಅವುಗಳನ್ನು ಯಾವ ನಿರ್ದಿಷ್ಟವಾದ ತಾರೀಖಿನಿಂದ ಕಾರ್ಯರೂಪಕ್ಕೆ ತರುತ್ತಾರೆ ಎನ್ನುವ ಬಗ್ಗೆ ಅವರು ಮೌನವನ್ನು ತಾಳಿದ್ದಾರೆ. ಅವರ ಒಂದು ಬೇಡಿಕೆಗಳಿಗೆ ಸಂಬಂಧಪಟ್ಟ ಬಜೆಟ್ಟನ್ನು ಯಾವ ತಾರೀಖಿನಿಂದ ಜಾರಿಗೆ ತರುತ್ತಾರೆ ಎನ್ನುವ ಬಗ್ಗೆ ಅವರು ಉತ್ತರವನ್ನು ಕೊಟ್ಟಿಲ್ಲ ಎಂದು ನಾನು ಕೇಳಿದ್ದೇನೆ. ಎಲ್ಲಾ ಹೈಸ್ಕೂಲು ಹೆಡ್ಮಾಸ್ಟರಿಗೂ ಯೂನಿಫಾರಂ ಸ್ಕೇಲ್ಸ್ ಆಫ್ ಪೇ ಆಫ್ ರೂ. 300–700 ಈ ಗ್ರೇಡನ್ನು ಕೊಡುವುದರಲ್ಲಿ ಸರ್ಕಾರದವರು ಒಪ್ಪಿದ್ದಾರೆ ಎಂದು ನಾನು ಕೇಳಿದ್ದೇನೆ. ಆದರೆ ಯಾವಾಗ ಅದನ್ನು ಜಾರಿಗೆ ಕೊಡುತ್ತಾರೆ ಎನ್ನುವ ಮಾತನ್ನು ಅವರು ತಿಳಿಸಿಲ್ಲ. ಫಿಜಿಕಲ್ ಎಡ್ಯುಕೇಷನ್ ಇನ್‌ಸ್ಟ್ರಕ್ಟರಲ್ಲಿ ಇರತಕ್ಕ ಸಂಬಳದ ವ್ಯತ್ಯಾಸವನ್ನು ಸರಿಪಡುತ್ತೇವೆ ಎಂದು ಹೇಳಿದ್ದಾರೆ. ಹಾಗೆಯೇ ಎಲ್ಲಾ ಸ್ಥಳೀಯ ಸಂಸ್ಥೆಗಳು ನಡೆಸತಕ್ಕ ಶಾಲೆಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕು ಎಂದು ಹಿಂದಿನ ಸರ್ಕಾರದವರೇ ಒಪ್ಪಿದ್ದರು. ಇದು ನಿನ್ನೆ ಮೊನ್ನೆಯ ಪ್ರಶ್ನೆ ಅಲ್ಲ. ಈಗ ಮೊನ್ನೆ ಸ್ಥಳೀಯ ಸಂಸ್ಥೆಗಳು ನಡೆಸತಕ್ಕ ಶಾಲೆಯನ್ನು ಸರ್ಕಾರದವರು ವಹಿಸಿಕೊಳ್ಳತಕ್ಕ ವಿಷಯ ಬಂದಾಗ ಏನಾಯಿತು ಎನ್ನುವ ಬಗ್ಗೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ನಾನು ಮೊನ್ನೆ ಬ್ಯಾಡಗಿಗೆ ಹೋಗಿದ್ದೆ. ಅಲ್ಲಿನ ಮುನಿಸಿಪಲ್ ಹೈಸ್ಕೂಲನ್ನು ಸರ್ಕಾರದವರೇ ವಹಿಸಿಕೊಂಡಿದ್ದರು. ಆದರೆ ಸರ್ಕಾರದವರು ಅವರ ಪಕ್ಷದ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಪುನಃ ಅದನ್ನು ಮುನಿಸಿಪಾಲಿಟಿಗೇ ಕೊಟ್ಟಿದ್ದಾರೆ. ಇದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಕೆ. ಎಫ್. ಪಾಟೀಲ್.—ನಾನು ಆ ಕ್ಷೇತ್ರದ ಪ್ರತಿನಿಧಿ. ನಾನು ಈ ವಿಷಯದಲ್ಲಿ ಮಾನ್ಯ ವಿದ್ಯಾಮಂತ್ರಿಗಳನ್ನು ಅಪ್ರೋಚ್ ಮಾಡಿಲ್ಲ. ಇದು ಪಕ್ಷಕ್ಕೆ ಸಂಬಂಧಪಟ್ಟ ವಿಷಯ ಅಲ್ಲ. ಆದ್ದರಿಂದ ಈಗ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಅದು ನಿರಾಧಾರವಾದ ಆಪಾದನೆ.

ಶ್ರೀ ಎಸ್. ಬಂಗಾರಪ್ಪ.—ಪಕ್ಷಪಂಗಡ ಮತ್ತು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಸ್ಥಳೀಯ ಸಂಸ್ಥೆ ನಡೆಸತಕ್ಕ, ಮುನಿಸಿಪಾಲಿಟಿ ನಡೆಸತಕ್ಕ ಬ್ಯಾಡಗಿ ಮುನಿಸಿಪಲ್ ಹೈಸ್ಕೂಲನ್ನು ಸರ್ಕಾರ ವಹಿಸಿಕೊಂಡಿದ್ದು ಪುನಃ ಮುನಿಸಿಪಾಲಿಟಿಗೆ ಕೊಟ್ಟಿರತಕ್ಕ ಔಚಿತ್ಯ ಏನು ಎಂದು ನಾನು ಪ್ರಶ್ನೆ ಮಾಡುತ್ತೇನೆ. ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳು ನಡೆಸತಕ್ಕ ಹೈಸ್ಕೂಲುಗಳನ್ನು ಸರ್ಕಾರದವರು ವಹಿಸಿಕೊಳ್ಳುವುದಾಗಿ ಹಿಂದಿನ ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಅದನ್ನು ಸಂಪೂರ್ಣವಾಗಿ ಜಾರಿಗೆ ತರತಕ್ಕ ಈ ಒಂದು ದಿಶೆಯಲ್ಲಿ ಶಿಕ್ಷಕರು ಸರ್ಕಾರದ ಮುಂದೆ ಇಟ್ಟಿರತಕ್ಕ ಬೇಡಿಕೆಗಳು ಸಾಧುವಾಗಿವೆ. ಅವುಗಳನ್ನು ಸರ್ಕಾರದವರು ಮಾನ್ಯ ಮಾಡುತ್ತಾರೆ ಎಂದು ನಾನು ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಶಿಕ್ಷಕರಿಗೆ ದಿನಭತ್ಯ 10 ರೂಪಾಯಿಗಳನ್ನು ಸರ್ಕಾರ ಕೊಡುತಕ್ಕದು ಎಂದಿದೆ ಇದಕ್ಕೆ ನಾನು ನನ್ನ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತೇನೆ. ಬೆಲೆ ಏರಿಕೆಗೆ ಅಳತೆಗೋಲು ಏನು ? ಜೀವನಾವಶ್ಯಕ ವಸ್ತುಗಳ ಬೆಲೆ ವಿಪರೀತವಾಗಿ ಏರಿದೆ. ಆದ್ದರಿಂದ ಶಿಕ್ಷಕರು ಹಾಗೂ ಬಡಜನಗಳ ಜೀವನ ಸಮಸ್ಯೆ ಬಹಳ ಕಷ್ಟವಾಗಿದೆ. ಮಾನ್ಯ ಮಂತ್ರಿಗಳು ದೆಹಲಿಗೆ ಹೋದಾಗ ಅಲ್ಲಿ ಮೈಸೂರು ಭವನ ಮತ್ತು ಅಶೋಕ ಹೋಟೆಲುಗಳಲ್ಲಿ ಇಳಿದುಕೊಂಡಾಗ ಅಲ್ಲಿ ಎಷ್ಟು ಖರ್ಚು ಬರುತ್ತದೆ ಎಂಬುದು ಅವರಿಗೆ ಗೊತ್ತಿದೆ. ಅದನ್ನು ಯಾವ ಮಾಪನದಲ್ಲಿ ಅಳೆಯುತ್ತಾರೆ ? ಹೀಗಿರುವಾಗ ಶಿಕ್ಷಕರು ಬೆಂಗಳೂರು ನಗರಕ್ಕೆ ಉತ್ತರ ಪತ್ರಿಕೆಗಳ ಮೌಲ್ಯ ಮಾಪನಕ್ಕೆ ಬಂದಾಗ ಅವರಿಗೆ ಊಟ ವಸತಿ ಇತ್ಯಾದಿಗಳಿಗೆ ಏನು ಖರ್ಚು ಬರುತ್ತದೆಯೋ ಅದನ್ನು ಸರಿದೂಗಿಸುವುದಕ್ಕೆ ಬೇಕಾದಷ್ಟು ದಿನಭತ್ಯವನ್ನು ಸರ್ಕಾರದವರು ಕೊಡುವುದು ಅತ್ಯಗತ್ಯ. ಈಗ ಉದಾಹರಣೆಗೆ ಹೇಳುವುದಾದರೆ ಮಾನ್ಯ ಸಾರಿಗೆ ಸಚಿವರಾದ ಶ್ರೀಮಾನ್ ರಂಗನಾಥ್ ಅವರು ಬೆಂಗಳೂರು ಸಿಟಿಯಲ್ಲಿ ಓಡಿಸುವ ಕೆಂಪು ಸಿಟಿ ಬಸ್ಸಿನಲ್ಲಿ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ರಾಜಾಜಿನಗರದ ಕೊನೆಗೋ ಅಥವಾ ಜಯನಗರದ 8ನೇ ಬ್ಲಾಕಿಗೋ ಹೋಗಿ ಬರಬೇಕಾದರೆ 2 ರೂಪಾಯಿಗಳು ಸಾಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಬೆಂಗಳೂರು ಸಿಟಿಯಲ್ಲಿ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸಿಟಿ ಬಸ್ಸಿನಲ್ಲಿ ಹೋಗಬೇಕಾದರೆ 2 ರೂಪಾಯಿ ಚಾರ್ಜ್ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಹೋಗುವುದು ಬರುವುದು ಎರಡೂ ಸೇರಿ ಒಬ್ಬರಿಗೆ 2 ರೂಪಾಯಿ ಖರ್ಚಾಗುತ್ತದೆ. ಆದ್ದರಿಂದ ತಾವು ಇಟ್ಟಿರುವುದು ಎಷ್ಟೊಂದು ಅನ್ಯಾಯ ಎನ್ನುವುದನ್ನು ತಾವು ಮನಗಾಣಬೇಕು. ಟೀಚರ್ಸ್ ಅಡ್ವೈಸರಿ ಕಮಿಟಿ, ಎಜುಕೇಷನ್ ಅಡ್ವೈಸರಿ ಕಮಿಟಿ ರಚನೆ ಇತ್ಯಾದಿ ಶಿಕ್ಷಕರ ನ್ಯಾಯ ವಾದ ಕೆಲವು ಬೇಡಿಕೆಗಳು ಏನಿವೆ ಅವುಗಳನ್ನು ಸರ್ಕಾರದವರು ಈಡೇರಿಸ ಬೇಕು. ಕೆಲವು ಪಾಲಿಸಿ ಮ್ಯಾಟರ್ಸ್ ಎಂದು ಏನು ಹೇಳುತ್ತಾರೆ, ಮತ್ತು ನೀತಿಗೆ ಸಂಬಂಧಪಟ್ಟ ಬೇಡಿಕೆಗಳು ಏನಿವೆ ಅವುಗಳನ್ನು ಬೇಕಾದರೆ ಸರ್ಕಾರದವರು ಯೋಚನೆ ಮಾಡಲಿ, ಅದನ್ನು ನಾನು ಒಪ್ಪುತ್ತೇನೆ. ಮಾನ್ಯ ಮಂತ್ರಿಗಳು ಯಾವ ಯಾವ ಬೇಡಿಕೆಗಳನ್ನು ಈಗಾಗಲೇ ಈಡೇರಿಸುವ ಬಗ್ಗೆ ತ್ವರಿತವಾಗಿ ಗಮನ ಕೊಡಬೇಕಾಗುತ್ತದೆ. ನಮಗೆ ಇರತಕ್ಕ ಒಂದು ಯೋಚನೆ ಏನೆಂದರೆ ಈ ಒಂದು ವಿಷಯವನ್ನು ರಾಜಕೀಯಕ್ಕೆ ಗುರಿ ಮಾಡಬಾರದು. ಇದನ್ನು ಶಿಕ್ಷಕರೂ ಮಾಡಬಾರದು, ವಿದ್ಯಾರ್ಥಿಗಳೂ ಮಾಡಬಾರದು ಎಂದು ಹೇಳುತ್ತಾರೆ. ಆದ್ದರಿಂದ ಯಾರೂ ಇದನ್ನು ರಾಜಕೀಯ ಮಾಡಬಾರದು. ಆದರೆ ಗುಜರಾತಿನ ಚಳುವಳಿಯಲ್ಲಿ ನಡೆದ ವಿಷಯವನ್ನು ತಮ್ಮ ಗಮನಕ್ಕೆ ತರುವುದಾದರೆ ಗುಜರಾತಿನಲ್ಲಿ ಚಳುವಳಿಯಲ್ಲಿ ವಿದ್ಯಾರ್ಥಿಗಳು, ಯುವಕರು ಶಿಕ್ಷಕರು ಎಲ್ಲರೂ ಸೇರಿದ್ದಾರೆನ್ನುವ ಮಾತನ್ನು ಯಾರೂ ಮರೆಯಬಾರದು. ಈಗ ನಮ್ಮ ರಾಜ್ಯದಲ್ಲಿ ಶಿಕ್ಷಕರು ಚಳುವಳಿಯನ್ನು ಪ್ರಾರಂಭ ಮಾಡಿದ್ದಾರೆ. ಶಿಕ್ಷಕರು ಚಳುವಳಿಯನ್ನು ಹೂಡಿದಾಗ ವಿದ್ಯಾರ್ಥಿಗಳು ಸುಮ್ಮನೆ ಮಲಗುವುದಿಲ್ಲ ಎಂಬುದನ್ನು ಸರ್ಕಾರದವರು ನೆನಪು ಮಾಡಿಕೊಳ್ಳಬೇಕು ಆದ್ದರಿಂದ ಶಿಕ್ಷಕರ ಬೇಡಿಕೆಗಳ ಬಗ್ಗೆ ಮಾನ್ಯ ಮಂತ್ರಿಗಳು ತ್ವರಿತವಾಗಿ ಗಮನ ಕೊಡಬೇಕು. ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಚಳುವಳಿ ಪ್ರಾರಂಭವಾದರೆ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರ ಸರ್ಕಾರ ಔಟಾಗುತ್ತದೆ. ಅದು ಬಹಳ ಕಷ್ಟ. ನಮ್ಮ ಪ್ರಕಾರ ಅವರು ಫೈರ್ ಬ್ರ್ಯಾಂಡ್ ಇದ್ದ ಹಾಗೆ. ಅವರನ್ನು ಮುಟ್ಟುವುದಕ್ಕೆ ಹೋಗಬಾರದು. ಆ ಒಂದು ದೃಷ್ಟಿಯಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ಈಗಲೇ ಅವರ ವಿಷಯವಾಗಿ ಎಚ್ಚರಿಕೆ ಕೊಡುತ್ತಿದ್ದೇನೆ.

4-00 P.M

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅರಾಜಕತೆ ಮಾಡುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ಅದು ಅರಾಜಕತೆಯೋ, ಅನಾಯಕತೆಯೋ ? ನೀವೇ ಅದನ್ನು ನಿಮ್ಮ ಮನೆ ಬಾಗಿಲಿಗೆ ಕರೆಯುತ್ತಿದ್ದೀರಿ. ಬೀದಿಯಲ್ಲಿ ಹೋಗುವ ಮಾರಿಯನ್ನು ನಿಮ್ಮ ಮನೆಯ ಬಾಗಿಲಿಗೆ ಬಂದು ಹೋಗಲಿ ಎಂದು ಕರೆಯುತ್ತಿದ್ದೀರಿ. ಗುಜರಾತ್, ಬಿಹಾರಗಳಲ್ಲಿ ಆಗಿರತಕ್ಕ ವಿಷಯಗಳ ಬಗ್ಗೆ ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಅದರಿಂದ ಈ ದೇಶದಲ್ಲಿ ಅಹಿತಕರ ಘಟನೆಗಳು ನಡೆಯುವುದಕ್ಕೆ ಅವಕಾಶವನ್ನು ಕೊಡಬಾರದು. ಯಾವ ರೀತಿಯಾದಂಥ ಬೇಡಿಕೆಗಳನ್ನು ಈ ಸಂಘದವರು ಹಾಗೂ ಶಿಕ್ಷಕರು ಮತ್ತು ಸದಸ್ಯರು ಇಟ್ಟಿದ್ದಾರೋ ಅದಕ್ಕೆ ನಾನು ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತಾ ಸರ್ಕಾರ ಇದನ್ನು ಕೂಡಲೇ ಈಡೇರಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ಅಹಿತಕರ ಘಟನೆಗಳಿಗೆ ಸರ್ಕಾರ ನಿಜವಾಗಿ ಅವಕಾಶವನ್ನು ಕೊಡಬಾರದೆಂದು ನಾನು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಮಾನ್ಯ ವಿದ್ಯಾ ಸಚಿವರು ಅವರ ಉತ್ತರದಲ್ಲಿ ಇದಕ್ಕಾಗಿ ಒಂದು ಸಮಿತಿಯನ್ನು ಮಾಡುತ್ತೇವೆಂದು ಹೇಳಬಹುದು. ಆದರೆ ಅವರು ಒಂದುವೇಳೆ ಆ ರೀತಿಯಾಗಿ ಹೇಳಿದರೂ, ದಯಮಾಡಿ ಅವರ ಬೇಡಿಕೆಗಳ ಬಗ್ಗೆ ಸೂಕ್ತವಾದಂಥ ಉತ್ತರವನ್ನು ಕೊಟ್ಟು ಅವರ ಬೇಡಿಕೆಯನ್ನು ನ್ಯಾಯವಾಗಿ ಅತಿ ಜಾಗ್ರತೆಯಾಗಿ ಬಗೆಹರಿಸಬೇಕು. ಮತ್ತೆ ಅವರ ಒಂದು ಬೇಡಿಕೆಗಳ ಬಗ್ಗೆ ಜೀವವನ್ನು ಕೊಟ್ಟು ಅವರಿಂದ ಯಾವ ತರಹ ಅಹಿತಕರ ಘಟನೆಗಳು ಆಗದಂತೆ ನೋಡಿಕೊಂಡು, ಅವು ಎಂದೆಂದಿಗೂ ಹೆಮ್ಮರವಾಗಿ ಮಾಡುವುದಕ್ಕೆ ಸರ್ಕಾರದವರು ಅವಕಾಶ ಕೊಡಬಾರದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎನ್. ವೀರಪ್ಪಗೌಡ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧ ಪಕ್ಷದವರು ಒಂದು ನಿಲುವಳಿ ಸೂಚನೆಯನ್ನು ತಂದು ಈ ಪ್ರಶ್ನೆಯನ್ನು ಚರ್ಚೆಮಾಡಬೇಕೆಂದು ಈ ಸಭೆಯಲ್ಲಿ ತಂದಿರುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಕಾರಣ ಸ್ವಾಭಾವಿಕವಾಗಿ ಈ ದೇಶದ ಮುಂದೆ ಇರತಕ್ಕ ಪ್ರಶ್ನೆ ಇದಾಗಿರುವುದರಿಂದ ಇದು ಚರ್ಚೆ ಆಗತಕ್ಕದ್ದು ಅಗತ್ಯವೆಂದು ಮನಗಂಡು ತಾವೂ ಕೂಡ ಇದರ ಚರ್ಚೆಗೆ ಇಲ್ಲ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ. ಇದು ಈಗ ಇರತಕ್ಕ ಪ್ರಾಮುಖ್ಯ ಪ್ರಶ್ನೆ. ಇವತ್ತು ಉಪಾಧ್ಯಾಯರಾಗಲೀ ಅಥವಾ ಯಾವ ಅಧಿಕಾರ ಹೊಂದಿರುವವರಾಗಲೀ ಸರ್ಕಾರವನ್ನು ಅಪ್ರೋಚ್ ಮಾಡತಕ್ಕ ರೀತಿ ನೀತಿ ಮತ್ತು ಯಾವ

(ಶ್ರೀ ಕೆ. ಎನ್. ವೀರಪ್ಪಗೌಡ)

ರೀತಿ ಅವರ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಬೇಕೆಂಬುದು ಪ್ರಾಮುಖ್ಯವಾದುದು. ಇವತ್ತು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಎಲ್ಲರೂ ಬಯಸಿದ್ದಾರೆ. ಸ್ವಾಭಾವಿಕವಾಗಿ ನನಗೆ ತಿಳಿದಿರುವ ಹಾಗೆ ಈಗ ಎಗ್ಸಾಮಿನೇಷನ್ಸ್ ಬಗ್ಗೆ ಹಾಗೂ ಪೇಪರ್ ವ್ಯಾಲ್ಯು ಮಾಡುವ ಬಗ್ಗೆ ಮೊದಲು ಟೀಚರ್ಸನ್ನು ಸೆಲೆಕ್ಟ್ ಮಾಡಿಕೊಂಡು, ನೀವು ತಯಾರಾಗಿದ್ದೀರಾ ಎಂದು ಅವರನ್ನು ಕೇಳಿದಮೇಲೆಯೇ ಅವರು ಒಪ್ಪಿಕೊಂಡ ನಂತರ ಅವರಿಗೆ ಇಂಟಿಮೇಷನ್ ಹೋಗಿ ಅವರು ಇಲ್ಲಿಗೆ ಬರುತ್ತಾರೆ. ಒಂದುವೇಳೆ ಅವರಿಗೆ ಏನಾದರೂ ಕಷ್ಟವಿದ್ದರೆ ಅವರು ಇಲ್ಲಿಗೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಬೆಂಗಳೂರಿಗೆ ಇಂತಹ ಕೆಲಸ ಮಾಡುವುದಕ್ಕೆ ನಾವು ಬರುವುದಿಲ್ಲವೆಂದು ಹೇಳಿದರೆ ಸರ್ಕಾರ ಅಕಸ್ಮಾತ್ತಾಗಿ ಜಿಲ್ಲಾ ಸೆಂಟರುಗಳಲ್ಲಿಯೇ ಇದನ್ನು ಪ್ರಾರಂಭಮಾಡುವುದಕ್ಕೆ ಸಾಧ್ಯವಿದೆಯೇ ಎಂಬುದಾಗಿ ಯೋಚನೆ ಮಾಡುವ ಅವಕಾಶವಿರುತ್ತದೆ ಇದೇವನ್ನು ಒಂದು ಬದಿಗೊತ್ತಿ ಅವರಿಂದ ಸಾಕಷ್ಟು ಕೆಲಸವನ್ನು ಮಾಡಿಸಬೇಕು. ಇವರು ಯಾವುದೋ ಒಂದು ರಾಜಕೀಯ ಪಕ್ಷಗಳ ಜೊತೆಗೆ ಸೇರಿಕೊಂಡಾಗ್ಗೆ ತೋರಿಸಿ, ಇವತ್ತಿನದಿವಸ ಸತ್ಯಾಗ್ರಹ ಮಾಡುವುದು, ಬೆದರಿಕೆ ಹಾಕುವುದು—ಇವು ನಿಜವಾಗಿಯೂ ಸರಿಯಾದುದಲ್ಲ. ನಾವು ಪೇಪರ್ ವ್ಯಾಲ್ಯು ಮಾಡುವುದಿಲ್ಲವೆಂದು ಹೇಳತಕ್ಕದ್ದನ್ನು ಯಾರೂ ಅದರಲ್ಲಿಯೂ ಸಾರ್ವಜನಿಕರು ಖಂಡಿತವಾಗಿ ಸಹಿಸುವುದಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಅವರ ಬೇಡಿಕೆಗಳಲ್ಲಿ ಅನೇಕವನ್ನು ಪರಿಶೀಲನೆ ಮಾಡುವ ಬಗ್ಗೆ ನಾನು ಒಪ್ಪತಕ್ಕ ಮನುಷ್ಯನಾಗಿದ್ದೇನೆ. ಇಂತಹ ಸಮಯದಲ್ಲಿ ಸರ್ಕಾರವನ್ನು ತಾವೇ ಕೈಯಲ್ಲಿ ಹಿಡಿದುಕೊಂಡಿದ್ದೇವೆಂದು ತೋರಿಸುವುದು ಯಾವ ಒಂದು ಸರ್ಕಾರವು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಖಂಡಿತವಾಗಿ ಅವಕಾಶವಾಗಲಾರದು. ಇದೇ ರೀತಿಯಲ್ಲಿ ಒಪ್ಪಿಕೊಳ್ಳುತ್ತಾ ಹೋದರೆ ನಮ್ಮ ದೇಶದಲ್ಲಿರತಕ್ಕ ಎಲ್ಲಾ ನೌಕರರು ಇದೇ ಒಂದು ಪಾಠವನ್ನು ಮಾಡಿ ಇಂತಹ ಚಳುವಳಿಗಳನ್ನು ಮಾಡುವುದಕ್ಕೆ ಅವಕಾಶವಾಗುತ್ತದೆ. ನಮ್ಮ ಸ್ನೇಹಿತರು ಒಬ್ಬರು ಹಿಂದೆ ಹೇಳುತ್ತಿದ್ದರು. ಟ್ರೆಜರಿ ಬೀಗದ ಕೈ ಅವರ ಕೈಗೆ ಕೊಟ್ಟುಬಿಡುವುದು ಒಳ್ಳೆಯದು ಎಂಬುದಾಗಿ. ಇದು ಬಹಳ ಪ್ರಾಮುಖ್ಯವಾದಂಥ ವಿಷಯವೆಂದು ನಾನು ಹೇಳುತ್ತೇನೆ. ಈಗ ಟ್ರೆಜರಿ ಯಾರಿಂದ ಖಾಲಿ ಆಗುತ್ತಿದೆಯೆಂದರೆ, ಕೇವಲ ಸೇಕಡ 3 ರಷ್ಟು ಜನರಿಗೆ ಮಾತ್ರ. ಈಗ ಸೇಕಡ 50 ರಷ್ಟು ಬಜೆಟ್ಟನ್ನು ಅವರಿಗೆ ಕೊಡುತ್ತಿದ್ದೇವೆಂದು ಹೇಳಬಹುದು. ಅಂದವೇಲೆ ಉಳಿದ ಜನರಿಗೆ ಅದರಲ್ಲಿ ಸೇಕಡ 97 ರಷ್ಟು ಇರತಕ್ಕ ಬಡವರಿಗೆ ಅದರಲ್ಲಿಯೂ ರೈತರ ಅನುಕೂಲಕ್ಕೆ ಇವರು ಏನು ಕೊಡಬೇಕೆಂಬುದನ್ನು ಇವರು ಮನಗಾಣಬೇಕು. ಅವರಿಗೇನು ಕೊಡಬೇಕೆಂಬುದನ್ನು ಅವರೇ ಹೇಳಲಿ. ಆ ಪ್ರಶ್ನೆ ಬೇರೆ. ಯಾವಾಗಲೂ ಮಾನ್ಯ ಶ್ರೀ ಬಂಗಾರಪ್ಪನವರು ಕ್ರಾಂತಿಕಾರಕ ಭಾಷಣವನ್ನೇ ಮಾಡುತ್ತಾರೆ. ಆ ಹೆಸರನ್ನು ಇಟ್ಟುಕೊಂಡ ಮೇಲೆ ಹೆಸರಿಗೆ ತಕ್ಕ ಹಾಗೆಯೇ ಮಾತನಾಡಿದ್ದಾರೆ. ಈ ದೇಶದಲ್ಲಿ ವಿದ್ಯಾವಂತ ಯುವಕರು ಕೆಲಸಕ್ಕಾಗಿ ಕಾದು ಕೂತಿದ್ದಾರೆ. ಅವರಲ್ಲಿ ಅನೇಕರು ನಾವು ರಸ್ತೆಯಲ್ಲಿದ್ದೇವೆ, ನಮಗೆ ಉದ್ಯೋಗಗಳೇ ಇಲ್ಲ. ಇನ್ನು ಎಸ್. ಎಸ್. ಎಲ್. ಸಿ. ವ್ಯಾಲುಯೇಷನ್ ಆಗಿ ಅದರಲ್ಲಿ ಪಾಸ್ ಆಗಿರುವವರಲ್ಲಿ ಕೇವಲ ಸೇಕಡ 30 ರಷ್ಟು ಸಹ ಸಿಗುವುದಿಲ್ಲ. ಅವರಲ್ಲಿ ಸೇಕಡ 70 ರಷ್ಟು ಮುಂದೆ ಓದುವುದಕ್ಕೆ ಬರುವುದಿಲ್ಲ. ಅಂತಹವರು ಶ್ರೀರಾಮುಲುರವರು ಹೇಳಿದ ಹಾಗೆ 58–62 ರ ವರೆಗೆ ಇರಲು ಅವಕಾಶ ಇದೆ ಎಂದರೆ ವಿದ್ಯಾವಂತ ಯುವಕರು ನಾವು ಎಲ್ಲಿ ಹೋಗಬೇಕೆಂದು ಕೇಳುತ್ತಾರೆ. ಅಂತಹವರು ಇಂತಹವರ ಜೊತೆಯಲ್ಲಿ ಸೇರುವುದಕ್ಕೆ ಈಗ ತಯಾರಾಗಿಲ್ಲ. ಅವರು ಈಗ ನಮಗೆ ಮುಂದೆ ಅನ್ನದ ಗತಿಯೇನು ಎಂಬುದಾಗಿ ಕೇಳುತ್ತಾ ಇದ್ದಾರೆ. ಇನ್ನು ಮುಂದೆ ಸರ್ಕಾರದಲ್ಲಿ ಕೆಲಸಮಾಡುವವರ ಸರ್ವಿಸ್ಸನ್ನು ಕೇವಲ 20 ವರ್ಷಕ್ಕೆ ಇಳಿಸಿದರೆ ಸಾಕು, ನಮಗೂ ಈ ದೇಶದಲ್ಲಿ ಕೆಲಸಮಾಡುವುದಕ್ಕೆ ಹಾಗೂ ಜೀವನಮಾಡುವುದಕ್ಕೆ ಅವಕಾಶ ಸಿಗುತ್ತದೆ ಎಂಬುದಾಗಿ ಯೋಚನೆ ಮಾಡುತ್ತಿದ್ದಾರೆ. ಅವರಲ್ಲಿ ಅನೇಕರು ಈಗಾಗಲೇ ಅದರಲ್ಲಿಯೂ ಅತಿ ಬಡವರು, ವಿದ್ಯಾವಂತ ತರುಣರು ಈ ದೇಶದಲ್ಲಿ ಹೊರಗೆ ಬಂದಿದ್ದಾರೆ. ಹಿಂದೆ ಯಾರು ಹಣಕಾಸಿನ ಶಕ್ತಿವಂತರಾಗಿದ್ದರೋ ಅಂತಹವರು ಮಾತ್ರ ಹೆಚ್ಚಿನ ವಿದ್ಯಾಭ್ಯಾಸವನ್ನು ತೆಗೆದುಕೊಳ್ಳುತ್ತಿದ್ದರು. ಇವತ್ತು ಬಡವರಿಗೂ ಹೆಚ್ಚಿನ ವಿದ್ಯಾಭ್ಯಾಸ ಕೊಡಬೇಕೆಂದು ಸರಕಾರದ ನೀತಿ ನಿರ್ಧಾರವಾಗಿದೆ. ಅದರ ಆ ಪ್ರಕಾರ ಇವತ್ತು ಎಲ್ಲ ಕಡೆಗಳಲ್ಲಿಯೂ ಕಾದು ಕೂತಿದ್ದಾರೆಂಬುದನ್ನು ತಾವು ಮರೆಯಬಾರದು. ಇವರ ಜೊತೆಗೆ ಅವರೂ ಸೇರಿದರೆ ಇಲ್ಲಿಯೂ ಗುಜರಾತ್, ಬಿಹಾರ ರೀತಿ ಆಗುತ್ತದೆಂದು ಹೆದರಿಸುವುದು ಸರಿಯಲ್ಲ. ಯಾವಾಗಲೂ ಕ್ರಾಂತಿ ಪಕ್ಷ ಸಾಮಾನ್ಯವಾಗಿ ಮಾತನಾಡುವುದೇ ಹಾಗೆ. ಈಗ ಯಾರೂ ಅಷ್ಟು

ದಡ್ಡರಿಲ್ಲ. ತಕ್ಕಮಟ್ಟಿಗೆ ಬುದ್ಧಿವಂತರು ಇದ್ದಾರೆ. ಅವರೂ ಸಹ ಈಗ ಯಾವ ರೀತಿ ಜೀವನಮಾಡಬೇಕೆಂದು ಯೋಚನೆಮಾಡುತ್ತಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಈಗ ಅವರಿಗೆ ಪೇಪರ್ ವ್ಯಾಲ್ಯುಯೇಷನ್ನಿಗೆ ಕೊಡತಕ್ಕ ರೆಮ್ಯೂನರೇಷನ್ ಬಹಳ ಕಾಲದಿಂದಲೂ ಹೆಚ್ಚಿಗೆ ಮಾಡಲಿಲ್ಲವೆಂದು ಹೇಳುತ್ತಾ ಇರುವುದರಿಂದ ಅದರ ಬಗ್ಗೆ ಸರ್ಕಾರ ಯೋಚನೆ ಮಾಡಲಿ. ಇವರಿಗೆ ರಜಾ ಕಾಲದಲ್ಲಿ ಸಂಪೂರ್ಣವಾಗಿ ಸಂಬಳ ಕೊಡುತ್ತಾರೆ. ಈಗ ಜೂನಿಯರ್ ಕಾಲೇಜು ಉಪಾಧ್ಯಾಯರ ಬಗ್ಗೆ ಸರ್ಕಾರದವರು ಏನು ಕಾಂಟ್ರಾಕ್ಟ್ ಪದ್ಧತಿ ತೆಗೆದುಕೊಂಡಿದ್ದರೋ ಆ ಪ್ರಕಾರ ಅವರನ್ನು ಕೂಡಲೇ ರಿಲೀವ್ ಮಾಡಿ ಅವರನ್ನೆಲ್ಲಾ ಈಗ ಮನೆಗೆ ಕಳುಹಿಸಿದ್ದಾರೆ. ಅವರಿಗೆ ಈಗ ಸಂಬಳವಿಲ್ಲ. ಆದರೆ ಇವರು ಒಂದು ಕಡೆ ಮನೆಯಲ್ಲಿ ಕೂತರೂ ಸಂಬಳ ಕೊಡುತ್ತಾರೆ ಸುಮಾರು ಒಂದೂವರೆ ತಿಂಗಳು ಕಾಲ ರಜದಲ್ಲಿದ್ದರೂ ಸಂಬಳ ಕೊಡುತ್ತಾರೆ. ಪೇಪರ್ ವ್ಯಾಲ್ಯುಯೇಷನ್ನಿಗೆ ಯಾವರೀತಿ ಫೀ ಕೊಡುತ್ತಾರೆಂದರೆ, ನನಗೆ ತಿಳಿದಿರುವ ಹಾಗೆ ಕೇವಲ 10 ದಿವಸಗಳಿಗೆ ಒಬ್ಬೊಬ್ಬರಿಗೂ 335 ರೂಪಾಯಿಗಳವರೆಗೂ ಬರುತ್ತದೆ. ಇದನ್ನು ಲೆಕ್ಕ ಹಾಕುವುದಿಲ್ಲವೆಂದರೆ ಹೇಗೆ? ಜೊತೆಗೆ ದಿವಸವೂ 8 ರೂಪಾಯಿಗಳಷ್ಟು ಡಿ ಎ. ಕೊಡುತ್ತಾರೆ. ಇದೂ ಕೂಡ ಸಾಕಾಗುವುದಿಲ್ಲವೆಂದರೆ ಹೇಗೆ? ಅವರು ಈ ಪೇಪರ್ ವ್ಯಾಲ್ಯುಯೇಷನ್‌ಗೆ ಬರುವುದಕ್ಕೆ ಇಷ್ಟವಿಲ್ಲವೆಂದು ಹೇಳಿದರೆ ನಾವೇನೂ ಯಾರನ್ನೂ ಕಂಪೆಲ್ ಮಾಡಿಲ್ಲ. ಕಂಪಲ್ಸರಿಯಾಗಿ ಇದಕ್ಕೆ ಬರಬೇಕೆಂದೂ ಹೇಳಲಿಲ್ಲ. ಕಂಪಲ್ಸರಿಯಾಗಿ ಅವರನ್ನು ನಾವು ಕರೆಸಲೂ ಇಲ್ಲ ಪ್ರಮುಖವಾಗಿ ಈ ದೇಶದಲ್ಲಿ ಮುಂದೆ ಭಾವೀ ಜನಾಂಗವನ್ನು ತಯಾರುಮಾಡತಕ್ಕ ಇವರು ಏನಿದ್ದಾರೆಯೋ ಅವರು ಮೊದಲು ಈ ದೇಶದ ಹಣಕಾಸಿನ ಮತ್ತು ಇತರೆ ಗರೀಬರ ಪರಿಸ್ಥಿತಿಯನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು. ಅಲ್ಲದೆ ಅವರು ತಮಗೆ ಸಿಗುತ್ತಿರುವ ಸಂಬಳಕ್ಕಿಂತಲೂ ಕನಿಷ್ಠ ದರ್ಜೆಯ ಸಂಬಳವಿಲ್ಲದ ತಕ್ಕ ಜನರು ಈ ದೇಶದಲ್ಲಿ ಎಷ್ಟು ಜನರು ಇದ್ದಾರೆಂಬುದನ್ನು ಅವರು ಪರಿಶೀಲನೆ ಮಾಡುವುದು ಬಹಳ ಒಳ್ಳೆಯದೆಂದು ನನ್ನ ಅಭಿಪ್ರಾಯ. ಅಂತೂ ಯುವಕರು ಇಂತಹ ಸ್ಥಿತಿಗತಿಗಳನ್ನು ನೋಡುತ್ತಾ ಕಾದು ನಿಂತಿದ್ದಾರೆ. ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಕೇವಲ ಗುಜರಾತ್, ಬಿಹಾರದಂತೆ ಇಲ್ಲಿಯೂ ಆಗುವುದಕ್ಕೆ ಅವಕಾಶವಾಗಬಹುದು ಎಂಬುದಾಗಿ ಮಾತನಾಡುತ್ತಾರೆ. ಇನ್ನೊಂದು ದಿವಸ ಇನ್ನೊಂದು ರೀತಿಯಲ್ಲಿ ನಿರುದ್ಯೋಗ ಸಮಸ್ಯೆ ಪರಿಹರಿಸಿಲ್ಲ ಈ ಸರಕಾರ ಎಂದು ಮಾತನಾಡುತ್ತಾರೆ. ಇನ್ನೊಂದು ಸಾರಿ ನಿವೃತ್ತಿ ವಯಸ್ಸನ್ನು ಏರಿಸಿ ಎಂದು ಹೇಳುತ್ತಾರೆ. ಆದರೆ ಇಲ್ಲಿಗೆ ನೀವೂ ನಾವೂ ಬರುವುದು, ನಮ್ಮ ಮುಂದಿನ ಭವಿಷ್ಯ ಜನರ ಕೈಲಿದೆ. ಸರ್ಕಾರ ಅವರಿಗೆ ಒಂದು ನಿರ್ದಿಷ್ಟವಾದ ನಿಲುವನ್ನು ಹಾಕಿ ಈ ಒಂದು ಅಪಾಯಿಂಟ್‌ಮೆಂಟ್ ಕೊಡಬೇಕಾದರೆ ಮೊದಲೇ ಅವರ ಅರ್ಜಿಗಳನ್ನು ಕ್ಲಿಯರ್ ಮಾಡಿ ಅವರಿಗೆ ಒಂದು ಅಷ್ಯೂರೆನ್ಸ್ ಕೊಟ್ಟ ಹಾಗೆ ಕಾಣುತ್ತಿರುವುದು ಆಗಿದೆ. 30 ವರ್ಷಗಳವರೆಗೂ ಸೇವೆ ಸಲ್ಲಿಸುವುದಕ್ಕೆ ಅವಕಾಶವನ್ನು ಕೊಡುತ್ತಾ ಇದ್ದೇವೆ. ಅದರ ಮೇಲೆ ಅವರನ್ನು ತೆಗೆಯುವ ಪ್ರಶ್ನೆಯೇ ಇಲ್ಲ. ಅಂದಮೇಲೆ ಮಾನ್ಯ ಸದಸ್ಯರು ಯಾರೋ ಕೇವಲ ಒಂದು ವರ್ಗದ ಹಿತರಕ್ಷಣೆಯ ಬಗ್ಗೆ ಈ ತರಹ ಮಾತನಾಡುವುದು ಅಷ್ಟೊಂದು ಸರಿಯಲ್ಲ. ವಿರೋಧಪಕ್ಷದ ಸದಸ್ಯರು ಸಾಮಾನ್ಯ ಬಡವರ ಹಾಗೂ ಸಾಮಾನ್ಯ ರೈತರ ಮೂಲಕ ನಾವು ಚುನಾಯಿತರಾಗಿ ಬಂದಿದ್ದೇವೆಂಬುದನ್ನು ಮರೆಯಬಾರದು. ಆ ಎಲ್ಲಾ ದೃಷ್ಟಿಯನ್ನೂ ಗಣನೆಗೆ ತೆಗೆದುಕೊಳ್ಳದೆ ಕೇವಲ ಒಂದು ವರ್ಗಕ್ಕೆ ಮಾತ್ರ ಅನುಕೂಲ ಮಾಡಿಕೊಡಬೇಕೆಂದು ಅವರು ಈ ಸಭೆಯಲ್ಲಿ ಮಾತನಾಡಿದರೆ ಅದು ಸರಿಯಲ್ಲ.

ಬೆಂಗಳೂರಿನ "A" ನಗರದಲ್ಲಿ ಹೇಗೆ ಈ ಹತ್ತು ದಿವಸ ಕಳೆಯಬೇಕು ಎನ್ನುತ್ತಾರೆ. ಈ ದಿವಸ ಇವರ ಮಾತು ಹಾಗಿರಲಿ; ಇದೇ ಬೆಂಗಳೂರಿನಲ್ಲಿ ಈ ದಿವಸ ಆ ನಾಲ್ಕನೇ ದರ್ಜೆಯ ಸರ್ಕಾರಿ ನೌಕರರು ಹೇಗೆ ಇಲ್ಲಿ ವಾಸಮಾಡುತ್ತಿದ್ದಾರೆ? ನಾಳೆ ಈ ದಿವಸ ಇವರಿಗೆ ಇವರೇನು ಕೆಲವು ಅನುಕೂಲಗಳನ್ನು ಕೇಳುತ್ತಿದ್ದಾರೆ ಅವುಗಳನ್ನು ಒದಗಿಸಿಕೊಟ್ಟರೆ, ಇವರಿಗೆ ಒದಗಿಸಿಕೊಟ್ಟಂತೆ ನಾಳೆ ಆ ನಾಲ್ಕನೇ ದರ್ಜೆಯ ನೌಕರರಿಗೂ ಒದಗಿಸಿಕೊಡಬೇಕಾಗುತ್ತದೆ. ಈಗ ತಾನೆ ಮಾತನಾಡುತ್ತಾ, ಆ ಐ.ಎ.ಎಸ್. ಅಧಿಕಾರಿಗಳಿಗೇಕೆ 58 ವರ್ಷ ವಯೋಮಿತಿ? ಅದೇ ವಯೋಮಿತಿಯನ್ನು ಈ ಎಲ್ಲ ಸರ್ಕಾರಿ ನೌಕರರಿಗೂ ಏಕೆ ಅನುಸರಿಸಬಾರದೆಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಆದರೆ ಅವರು ಅದಕ್ಕೆ ಬದಲು ದೇಶದಲ್ಲಿ ಹಾಹಾಕಾರವೇಳುತ್ತಿರುವ ನಿರುದ್ಯೋಗ ಸಮಸ್ಯೆ ಎದುರಿಸಲು ಈ ಸರ್ಕಾರಿ ಸೇವೆಯ ಅವಧಿಯನ್ನು ಎಲ್ಲರಿಗೂ 20 ವರ್ಷಕ್ಕೆ ಇಳಿಸುವಂತೆ ಅವರೊಂದು ನಿರ್ಣಯ ತಂದರೆ ಅದಕ್ಕೆ ಒಪ್ಪಿಗೆ ಕೊಡತಕ್ಕವರಲ್ಲಿ ನಾನೂ ಒಬ್ಬ. ಆದರೆ ನಾವು ಇಂದು ಅನುಸರಿಸುತ್ತಿರುವ ನೌಕರರ ಈ ರೂಲ್ಸ್-ನಿಬಂಧನೆಗಳೇನಿವೆ ಅವು ಆ ಬ್ರಿಟಿಷ್ ಕಾಲದಿಂದಲೂ ಒಂದೇ ಸಮನಾಗಿ ನಡೆದುಕೊಂಡು ಬಂದಿರತಕ್ಕವುಗಳಾಗಿವೆ. ಇವುಗಳನ್ನು ಒಂದು ಬದಲಾಯಿಸದಿದ್ದರೆ ನಮಗೆ ಗತ್ಯಂತರವಿಲ್ಲ ಒಬ್ಬ ಅಸಿಸ್ಟೆಂಟ್ ಕಮಿಷನರೇ ಒಂದು ಮೀಟಿಂಗಿನಲ್ಲಿ

(ಶ್ರೀ ಕೆ. ಎನ್. ವೀರಪ್ಪಗೌಡ)

ನನ್ನ ಸಮಾಕ್ಷಮ ಹೇಳಿದ್ದಾರೆ. ಆದುದರಿಂದ ಇದನ್ನು ಸಮರ್ಥಿಸಿ ನಾವು ಇಂದಿನ ಈ ರೂಲ್ಸ್‌ಗಳನ್ನು ಬದಲಾವಣೆ ಮಾಡತಕ್ಕದ್ದು ಅತ್ಯಗತ್ಯ. ಆದರೆ ಈ ದಿವಸ ಈ ಉಪಾಧ್ಯಾಯರೇನು ಒಂದು ತಮ್ಮ ಬೇಡಿಕೆಗಳನ್ನು ಕೇಳುತ್ತಿದ್ದಾರೆ–ಆ ಕೇಳತಕ್ಕ ವಿಧಾನವೇ ಸರಿಯಾಗಿಲ್ಲ; ಅವರು ಹಾಕತಕ್ಕ ಬೆದರಿಕೆ ಯಂತೂ ಖಂಡಿತ ಸರಿಯಾದ್ದಲ್ಲ. ಆದುದರಿಂದ ಸರ್ಕಾರದವರು ಎಂದಿಗೂ ಅವರ ಈ ಬೆದರಿಕೆಗಳಿಗೆ ತಗ್ಗಿ ಏನೂ ಮಾಡಬಾರದೆಂದು ಹೇಳುತ್ತೇನೆ. ಮೊದಲು ಈ ಉಪಾಧ್ಯಾಯರುಗಳು ತಾವು ಒಪ್ಪಿ ಕೊಂಡಿದ್ದ ರೀತಿಯಲ್ಲಿ—ಈ ಹೆದರಿಕೆ ಬೆದರಿಕೆ ಮಾತುಗಳನ್ನು ನಿಲ್ಲಿಸಿ, ಪ್ರಶ್ನೆಪತ್ರಿಕೆಗಳ ವ್ಯಾಲ್ಯುಯೇಷನ್ ಕೆಲಸವನ್ನು ಮೊದಲು ಮುಗಿಸಬೇಕು. ಅನಂತರ ಅವರ ಬೇಡಿಕೆಗಳೇನೆಂಬುದನ್ನು ಈ ಸಭೆಯವರು ತೀರ್ಮಾನಿಸಬೇಕಾದುದು ಉಚಿತ. ಇದನ್ನು ಬಿಟ್ಟು ಆಗಲೇ ಮಾನ್ಯ ಸದಸ್ಯರಾದ ತಿಮ್ಮಪ್ಪನವರು ಹೇಳಿದಂತೆ ಇದಕ್ಕೆ ಅವಕಾಶ ಕೊಡುತ್ತ ಹೋದರೆ ಕೊನೆಮೊದಲಿಲ್ಲದಂತಾಗುವುದು. ಆದರೆ ಮಾನ್ಯ ತಿಮ್ಮಪ್ಪನವರು ಇಂಥ ವಿಚಾರಗಳಲ್ಲಿ ತೀರ್ಮಾನ ನಿಧಾನ ಮಾಡಬಾರದೆಂದು ಹೇಳಿದ್ದನ್ನು ನಾನೂ ಒಪ್ಪುತ್ತೇನೆ. ಈ ಉಪಾಧ್ಯಾಯರುಗಳ ಸೂಚನೆಯ ಬಗ್ಗೆ ನನ್ನ ಸಹಾನುಭೂತಿ ಇದ್ದರೂ ಅವರೇನು ಈ ದಿವಸ ಈ ಕುತ್ತಿಗೆ ಹಿಡಿದು ಕೆಲಸಮಾಡಿಸುವುದಕ್ಕೆ ಹೊರಟಿದ್ದಾರೆ ಅದು ಆಡಳಿತ ನಡೆಸುವ ದೃಷ್ಟಿಯಿಂದ ಒಳ್ಳೆಯದಲ್ಲ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri B. B. SAYANAK (Belgaum).—Madam Speaker, there is an adjournment motion placed by our Hon'ble Leader of the Opposition Mr. Deve Gowda regarding he demands of the Mysore State Secondary School Teachers' Association. Mr. Mallur Ananda Rao, M.L.C., is also undergoing a fast unto death. They have submitted 53 demands to the Government, but they are urging eleven demands at present. Apart from the eleven demands they have placed before the Government, according to me, the most important demand and genuine demand is regarding the enhancement of the age of retirement of teachers. Last year also, there were high prices but the teachers did not ask for more money for the valuation. This year what was the reason for asking for more ? The Cabinet have taken the decision to reduce the age of retirement from 58 to 55 years. That is the crux of the problem. They say : 'We want our retirement age should be increased to 58'. That is their problem. I want to submit to this august House that some of the Primary School Teachers had filed a writ petition in the High Court in this behalf and a decision has been given by the High Court. Their writ petitions have been rejected. Now, some of the Secondary School Teachers have filed a writ petition in the High Court. The High Court has said : 'We are going to send your writ petition ot the full Bench'. The decision is yet to be declared. So, the writ petitions are pending before the High Court.

Regarding the valuation, about 7,000 teachers have come to Bangalore. This is not necessary. In Bombay, Maharashtra, the valuaution scheme is centralized. They are giving code number. Papers are sent to the teachers, for valuation. Here, we are asking about 7000 persons to come here and do valuation. Answer papers are pending for valuation. We are paying more. If the Government is of the opinion that there are influences working and people

approach the examiners, they can give the code numbers and send the answer papers to the respective places of the examiners. By this system, you will save money and time of the teachers.

The demand for the enhancement of the age of retirement of teachers is not within the purview of the Education Minister as it is a decision taken by the Cabinet. The Hon. Minister should consider the other 10 demands and do justice to these teachers. With these words, I thank the Chair.

† ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಮಾನ್ಯ ಅಧ್ಯಕ್ಷರೇ, ಈ ಒಂದು ಸಭೆಯ ಮುಂದೆ ಆ ವಿರೋಧಪಕ್ಷದ ಮಾನ್ಯ ನಾಯಕರೇನು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿದ್ದಾರೆ ಅದರ ಬಗ್ಗೆ ಪರವಾಗಿಯೂ, ವಿರೋಧವಾಗಿಯೂ ಅಭಿಪ್ರಾಯಗಳು ಈಗಾಗಲೇ ವ್ಯಕ್ತವಾಗಿರುತ್ತವೆ. ಆದರೆ ನನ್ನ ಸ್ಪಷ್ಟವಾದ ಒಂದು ಅಭಿಪ್ರಾಯವನ್ನು ತಿಳಿಸುವುದಾದರೆ—ಉಪಾಧ್ಯಾಯರ ಈ ಒಂದು ವೃತ್ತಿ ಏನಿದೆ ಅದು ಬಹಳ ಪವಿತ್ರವಾದದ್ದು ಹಾಗೂ ಬಹಳ ಮಹತ್ವವಾದದ್ದು ಎಂದು ನಾನು ಭಾವಿಸಿದ್ದೇನೆ ಅದರಲ್ಲೂ ಪ್ರಜಾಪ್ರಭುತ್ವದಲ್ಲಿ ನಮ್ಮ ಭಾವಿ ಜನಾಂಗ ಒಂದು ಹೆಚ್ಚಿನ ಮಟ್ಟದಲ್ಲಿ ಶಿಸ್ತನ್ನು ಬೆಳಸಿ ಅದನ್ನು ಕಾಪಾಡಿಕೊಂಡು ಬರತಕ್ಕ ರೀತಿಯಲ್ಲಿ ಅವರನ್ನು ತಯಾರು ಮಾಡುವುದು ಈ ಉಪಾಧ್ಯಾಯರ ಮುಖ್ಯ ಕರ್ತವ್ಯ. ಆ ಕರ್ತವ್ಯವೇನಿದೆ ಅದು ಬಹಳ ಪವಿತ್ರವಾದದ್ದು ಮತ್ತು ಬಹಳ ಮಹತ್ವವಾದದ್ದು ಎಂದು ಹೇಳದೆ ಗತ್ಯಂತರವೇ ಇಲ್ಲ. ಆದರೆ ಈ ಒಂದು ಸಂದರ್ಭದಲ್ಲಿ ಏಳು ಸಾವಿರ ಜನ ಉಪಾಧ್ಯಾಯರುಗಳು ಒಂದು ಕಡೆ ಸೇರಿ ಟ್ರೇಡ್ ಯೂನಿಯನ್ ಮನೋಭಾವದಿಂದ......

(ಸಭೆಯಲ್ಲಿ ಏಕ ಕಾಲಕ್ಕೆ ಶ್ರೀಗಳಾದ ಕೋಣಂದೂರು ಲಿಂಗಪ್ಪ—ಕಾಗೋಡು ತಿಮ್ಮಪ್ಪ—ಶ್ರೀ ಕೆ. ಎಫ್. ಪಾಟೀಲ್ ಇನ್ನೂ ಅನೇಕರು ನಿಂತು ಮಾತನಾಡಲು ಪ್ರಾರಂಭಿಸಿದರು—ಗದ್ದಲ)

ಅಧ್ಯಕ್ಷರು.—ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಿ. ಅವರು ಟ್ರೇಡ್ ಯೂನಿಯನ್ ಎಂಬ ಪದವನ್ನು ಬಳಸಿದ್ದರೆ ನಾವು ಮಾತನಾಡುವಾಗ ಅದಕ್ಕೆ ಏನು ಉತ್ತರ ಕೊಡಬೇಕೋ ಅದನ್ನು ಕೊಡಿ. ಆದರೆ ಮಧ್ಯೆ ಹೀಗೆ ಒಬ್ಬರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕ ಕಾಲದಲ್ಲಿ ತೊಂದರೆ ಮಾಡಬಾರದು.

ಶ್ರೀ ಕೆ. ಬಿ. ಶಿವಯ್ಯ.—ನಾನು 15 ವರ್ಷಗಳಿಂದ 4 ಸಾವಿರ ಜನ ಕಾರ್ಮಿಕರ ನಾಯಕನಾಗಿ ಮತ್ತು ಟ್ರೇಡ್ ಯೂನಿಯನ್ ಲೀಡರಾಗಿ ಕೆಲಸ ಮಾಡುತ್ತಿದ್ದೇನೆ. 7 ಸಾವಿರ ಜನ ಉಪಾಧ್ಯಾಯರು ಕಾರ್ಮಿಕವರ್ಗಕ್ಕೆ ಸೇರಿಲ್ಲ. ಅವರು ಸರಕಾರದ ಅಧಿಕಾರಿಗಳು, ಶಾಂತಿಯನ್ನು ಕಾಪಾಡಬೇಕಾದವರು. ಪ್ರಜಾಪ್ರಭುತ್ವವನ್ನು ಯಶಸ್ವಿಯಾಗಿ ನಡೆಸಲು ಅವರು ಶ್ರೇಷ್ಠ ಪಾತ್ರವನ್ನು ವಹಿಸಬೇಕು. ಅವರ ಯಾವುದೇ ಬೇಡಿಕೆಯಿದ್ದರೂ ಅದನ್ನು ಸಂಬಂಧಪಟ್ಟ ಇಲಾಖೆಯ ಮೂಲಕ ಅಥವ ಮಂತ್ರಿಗಳ ಮೂಲಕ ಬಗೆಹರಿಸಿಕೊಳ್ಳಬೇಕಾಗಿತ್ತು. ಹಾಗೆ ಮಾಡದೆ ಈ ದಿವಸ ಅವರು ಬೆಂಗಳೂರು ನಗರಕ್ಕೆ ಬಂದು ಚಳವಳಿಯ ಮನೋಭಾವದಿಂದ ಕೂಡಿ ಒಂದು ರಾಜಕೀಯ ಉದ್ದೇಶದಿಂದ ವಿಚಾರ ಬೆಳೆಸಿಕೊಂಡು ಅದಕ್ಕೆ ರಾಜಕೀಯ ಬಣ್ಣವನ್ನು ಕೊಡುತ್ತಿದ್ದಾರೆ. ಈ ಒಂದು ದೃಷ್ಟಿಯಿಂದ ಹೇಳುತ್ತಿದ್ದೇನೆ, ಯಾವ ಸರಕಾರವೇ ಆಗಲಿ, ಇಂಥ ಮನೋವೃತ್ತಿಯುಳ್ಳ ಜನರಿಗೆ ಪ್ರೋತ್ಸಾಹ ಕೊಡಬಾರದು ಎಂದು ಕಳಕಳಿಯಿಂದ ಅಧ್ಯಕ್ಷರ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ. ಬಹುಶಃ ದೇವೇಗೌಡರು ಹೇಳಿದ್ದಾರೆ. ಇಲ್ಲಿನ ಪರಿಸ್ಥಿತಿಗೆ ತಕ್ಕ ಹಾಗೆ ಉಪಾಧ್ಯಾಯರಿಗೆ ಅವರ ಕೆಲಸಕ್ಕೆ ತಕ್ಕಷ್ಟು ಹಣ ಕೊಡಬೇಕು ಎಂಬುದು ಬಹುಶಃ ಅವರ ಉದ್ದೇಶವಿರಬಹುದು, ಆದರಂತೆ ಅವರಿಗೆ ಜಾಸ್ತಿ ಕೊಡಿ, ದಿನಭತ್ಯ ಜಾಸ್ತಿ ಮಾಡಿ, ಅದರ ಬಗ್ಗೆ ನಮ್ಮ ಅನುಕಂಪವಿದೆ. ಮಾಡಲಿ. ಆದರೆ ಅದನ್ನು ಮಾಡುವವರೆಗೆ ಚಳವಳಿ ಮುಂದುವರಿಸುತ್ತೇವೆ. ಸತ್ಯಾಗ್ರಹ ಮಾಡುತ್ತೇವೆ ಎಂದು ಉಪಾಧ್ಯಾಯ ವರ್ಗ ಹೇಳುವುದಾದರೆ ಅಧಿಕಾರ ವರ್ಗದ ಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ವಿರೋಧ ಪಕ್ಷದವರು ಯೋಚನೆ ಮಾಡಬೇಕಾಗುತ್ತದೆ. ಕಳೆದ ಅನೇಕ ವರ್ಷದಿಂದ ವಿದ್ಯಾ ಕ್ಷೇತ್ರದಲ್ಲಿ ಅಶಿಸ್ತು ಜಾಸ್ತಿಯಾಗುತ್ತಿದೆ. ಇದಕ್ಕೆ ಯಾರು ಕಾರಣರು ? ವಿದ್ಯಾ ಕ್ಷೇತ್ರದಲ್ಲಿ ಅಶಿಸ್ತು ಹೋಗಬೇಕು, ಗುಣಮಟ್ಟ ಯಾವ ಮಟ್ಟದಲ್ಲಿರಬೇಕೋ ಆ ಮಟ್ಟದಲ್ಲಿಲ್ಲ. ಉಪಾಧ್ಯಾಯ ವರ್ಗ ಈ ಕಡೆ ಗಮನ ಕೊಡಬೇಕು. ಇದರ ಬಗ್ಗೆ ಯಾರೂ ಆಲೋಚನೆ ಮಾಡುತ್ತಿಲ್ಲ. ಇಂದು ಉಪಾ

(ಶ್ರೀ ಕೆ. ಬಿ. ಶಿವಯ್ಯ)

ಧ್ಯಾಯರ ನಿವೃತ್ತಿ ವಯಸ್ಸನ್ನು 55 ರಿಂದ 58ಕ್ಕೆ ಹೆಚ್ಚಿಸಿ, ಇದರ ಬಗ್ಗೆ ಏಜ್‌ ಲಿಮಿಟ್ ಬೇಡ ಎಂದು ದೇವೇಗೌಡರು ಹೇಳಿದರು. ಎರಡಾದರೂ ಉಂಟೆ ? ಇದರ ಬಗ್ಗೆ ರಚನಾತ್ಮಕವಾದ ಸಲಹೆ ಕೊಡಲಿ. ಈ ಒಂದು ಸಭೆಯನ್ನು ಉಪಯೋಗಿಸಿಕೊಂಡು ತಮ್ಮ ಬೇಡಿಕೆ ಈಡೇರಿಸಿಕೊಳ್ಳಲು ಪ್ರಯತ್ನಿಸಿರುವುದು ಸರಿಯಲ್ಲ. ಎಂದು ಎಸ್ ಎಸ್ ಎಲ್ ಸಿ ಪರೀಕ್ಷೆಗೆ 2 ಲಕ್ಷ ವಿದ್ಯಾರ್ಥಿಗಳು ಕುಳಿತಿದ್ದಾರೆ. ಅವರ ತಂದೆತಾಯಿಗಳು ಎರಡು ಲಕ್ಷ ಇದ್ದಾರೆ, ಅವರೆಲ್ಲರೂ ಸೇರಿ 7 ಸಾವಿರ ಉಪಾಧ್ಯಾಯರ ಮೇಲೆ ಚಳವಳಿ ಮಾಡಿದರೆ ಅದರ ಪರಿಣಾಮವೇನು ಎಂಬುದನ್ನು ನೋಡ ಬೇಕು. ಅದರ ಪರಿಣಾಮ ಭಯಂಕರವಾಗುತ್ತದೆ. ಉಗ್ರವಾಗುತ್ತದೆ, ಇದರ ಸ್ವರೂಪ ಬೇರೆಯಾಗುತ್ತದೆ. ಆದುದರಿಂದ ನಾನು ಹೇಳುವುದು. ಉಪಾಧ್ಯಾಯರ ಬಗ್ಗೆ ಅನುಕಂಪ ತೋರಿಸಿ. ಆದರೆ ಅವರು ಅನುಸರಿಸುತ್ತಿರುವ ಮಾರ್ಗ, ಚಳವಳಿ ಸರಿಯಲ್ಲ. ಅವರು ತಮ್ಮ ಬೇಡಿಕೆ ಪೂರೈಸಿದರೆ ಮಾತ್ರ ಉತ್ತರ ಪತ್ರಿಕೆಗಳನ್ನು ನೋಡಿ ಮೌಲ್ಯಮಾಪನ ಮಾಡುತ್ತೇವೆ ಎಂದು ಹಟಹಿಡಿದಿದ್ದಾರೆ. ಇದು ಸರಿಯಲ್ಲ. ಅವರು ಹೀಗೆ ಹಟ ಮಾಡಿದರೆ ಬೇಕಾದರೆ 2 ಲಕ್ಷ ವಿದ್ಯಾರ್ಥಿಗಳಿಗೂ ಪಾಸುಮಾಡಿಸಿ, ಅದರಿಂದ ತೊಂದರೆಯಾಗುವುದಿಲ್ಲ ಇಂದು ಅವರು ವ್ಯಾಲ್ಯುಯೇಷನ್ ಮಾಡದಿದ್ದರೆ ತೊಂದರೆಯಾಗುತ್ತದೆ. ಇದನ್ನು ತಪ್ಪಿಸಲು ಸುಮಾರು 2 ಲಕ್ಷ ವಿದ್ಯಾರ್ಥಿಗಳಿಗೆ ಪಾಸು ಮಾಡಿಸಿದರೆ ಅದರಿಂದೇನೂ ಪ್ರಮಾದವಾಗುವುದಿಲ್ಲ, ಅವರಿಗೆ ಇಂದು ಕೆಲಸ ಕೊಡುತ್ತಿಲ್ಲ. ಹಾಗೆ ಮಾಡಿ 7 ಸಾವಿರ ಉಪಾಧ್ಯಾಯರನ್ನು ಊರಿಗೆ ಕಳಿಸಿ, ಅವರು ವ್ಯಾಲ್ಯುಯೇಷನ್ ಮಾಡಬೇಕಾಗಿಲ್ಲ ವಿದ್ಯಾ ಮಂತ್ರಿಗಳು ದಿಟ್ಟತನದಿಂದ ಎದೆಗುಂದದೆ ಹಾಗೆ ಮಾಡಬೇಕು, ಅವರು ಪ್ರೋಗ್ರೆಸಿವ್ ಮಂತ್ರಿಗಳೆಂದು ಹೆಸರುಗಳಿಸಿದ್ದಾರೆ, ವಿರೋಧ ಪಕ್ಷಕ್ಕೆ ಮಣಿಯಬಾರದು ಎಂದು ತಿಳಿಸಿ ನನ್ನ ಮಾತನ್ನು ಮುಗಿಸುತ್ತೇನೆ

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಸನ್ಮಾನ್ಯ ಸಭಾಧ್ಯಕ್ಷಣಿಯರೇ. ನನಗೆ ಒಂದು ಸಂತೋಷವೇನೆಂದರೆ ನಾನು ಈ ವಿಧಾನಸಭೆಗೆ ಬಂದ ಮೇಲೆ ಮೊದಲನೆಯ ಬಾರಿಗೆ ಶ್ರಮಜೀವಿ ವರ್ಗದ ಬಗ್ಗೆ ಕಳಿಸಿದ ನಿಲುವಳಿ ಸೂಚನೆಯ ಚರ್ಚೆಗೆ ಅವಕಾಶಕೊಟ್ಟಿರುವುದು. ಕಾರ್ಮಿಕರ ಬಗ್ಗೆ ನಾನು ಹಲವಾರು ಬಾರಿ ಪ್ರಶ್ನೆ ಮಾಡಿರುವುದುಂಟು. ಉಪಾಧ್ಯಾಯರು ಶ್ರಮಜೀವಿಗಳ ಒಂದು ವಿಭಾಗ. ಶ್ರಮಜೀವಿಗಳು ಕಾರ್ಖಾನೆಗಳಲ್ಲಿ ಕೆಲಸ ಮಾಡಬಹುದು, ಉಪಾಧ್ಯಾಯರು ಅಲ್ಲಿ ಕೆಲಸ ಮಾಡದಿರಬಹುದು. ಮೆಷೀನ್‌ಗಳ ಮೇಲೆ ಕೆಲಸಮಾಡಿದರೆ ಮಾತ್ರ ಶ್ರಮಜೀವಿಗಳಾಗುವುದಿಲ್ಲ. ಈ ಶ್ರಮಜೀವಿಗಳ ವಿಚಾರ ಚರ್ಚಿಸಲು ಅವಕಾಶ ಕೊಟ್ಟಿರುವುದು ನನಗೆ ಸಂತೋಷವನ್ನುಂಟುಮಾಡಿದೆ. ಕಾರ್ಮಿಕರಿಗೆ ಸಂಬಂಧಪಟ್ಟ ಅನೇಕ ಪ್ರಶ್ನೆಗಳವೆ, ಆದರೆ ಅವು ಬಂದಾಗ ಅವಕಾಶ ಕೊಟ್ಟಿಲ್ಲ. ಅವು ಬಂದಾಗ ಆಳುವ ಪಕ್ಷ ಮತ್ತು ವಿರೋಧಪಕ್ಷ ಎರಡೂ ಕೂಡ ವಿರೋಧ ಮಾಡಿವೆ. ತಿಮ್ಮಪ್ಪನವರು, ಕೋಣಂದೂರು ಲಿಂಗಪ್ಪನವರು, ಬಂಗಾರಪ್ಪನವರು ಮುಂತಾದ ಕೆಲವರು ಮಾತ್ರ ಬೆಂಬಲ ಕೊಡುತ್ತಾರು. ಶ್ರೀರಾಮುಲುರವರು ಕೂಡ ನಮ್ಮ ಜೊತೆಗಿದ್ದಾರೆ. ಅಂಗವಿಕಲರ ಬಗ್ಗೆ ಮಾತನಾಡಿದಾಗ ಯಾರೂ ದನಿಕೂಡಿಸಲಿಲ್ಲ. ಅಧ್ಯಕ್ಷರಿಗೆ ಇದರ ವಿಚಾರ ಗೊತ್ತಿದೆ.

ಈ ದಿವಸ ದೊಡ್ಡ ಚಳವಳಿ ಆಗುತ್ತಿದೆ. ಇದರಲ್ಲಿ ರಾಜಕೀಯವಿದೆ, ಇದಕ್ಕೆ ಬೆಂಬಲ ಕೊಡಬಾರದು ಎಂದು ವೀರಪ್ಪಗೌಡರು ಹೇಳಿದರು. ಇದರಲ್ಲಿ ರಾಜಕೀಯವಿಲ್ಲ ಎಂದು ನಾನು ಹೇಳುವುದಿಲ್ಲ. ಕೆಲವು ರಾಜಕೀಯ ಪಕ್ಷಗಳ ನಾಯಕತ್ವದಲ್ಲಿ ಇದು ನಡೆಯುತ್ತಿದೆ ಎಂಬುದ ರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಪ್ರಶ್ನೆಯನ್ನು ಈ ರೀತಿ ನೋಡಬಹುದಾಗಿತ್ತು. ಉಪಾಧ್ಯಾಯರ ಬೇಡಿಕೆ ನ್ಯಾಯವಾಗಿದೆಯೋ ಇಲ್ಲವೇ ಎಂದು ನೋಡಿದರೆ ಅವರ ಬೇಡಿಕೆ ನ್ಯಾಯವಾದುದು ಎಂಬುದು ನನ್ನ ಅಭಿಪ್ರಾಯ.

4-30 P. M.

ಉಪಾಧ್ಯಾಯರ ಬೇಡಿಕೆಗಳು ನ್ಯಾಯವಾಗಿರುವುದರಿಂದ ಅವುಗಳಿಗೆ ಬೆಂಬಲ ಕೊಡುವ ಜವಾಬ್ದಾರಿ ಯಾರದೇ ಆಗಿರಲಿ ಪ್ರಗತಿಪರರಾದ ನಮ್ಮಂಥವರೆಲ್ಲರೂ ಇದಕ್ಕೆ ಬೆಂಬಲ ಕೊಡು ವುದು ನಮ್ಮ ಮುಖ್ಯವಾದ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಆ ದೃಷ್ಟಿಯಿಂದ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಇತರರು ಮಾತನಾಡಿದ್ದಕ್ಕೆ ನಾನು ಬೆಂಬಲ ಕೊಡು ತ್ತೇನೆ. ಉಪಾಧ್ಯಾಯರ ಬೇಡಿಕೆಗಳು ನ್ಯಾಯವಾದುವು ಎಂದು ಏಕೆ ಹೇಳುತ್ತೇನೆಂದರೆ ಅವರ

ಹನ್ನೊಂದು ಬೇಡಿಕೆಗಳು ಒಂದು ಕಡೆ ಇವೆ, ಹನ್ನೆರಡನೆಯ ಬೇಡಿಕೆ ಇನ್ನೊಂದು ಕಡೆ ಇದೆ. ಹನ್ನೊಂದು ಬೇಡಿಕೆಗಳನ್ನು ತಕ್ಷಣ ಕಾರ್ಯರೂಪಕ್ಕೆ ತರಬೇಕು, ಹನ್ನೆರಡನೆಯ ಬೇಡಿಕೆಯನ್ನು ನಂತರ ತರಬಹುದು ಎಂದು ಅವರೇ ಹೇಳಿದ್ದಾರೆ. ಈ ಹನ್ನೊಂದು ಬೇಡಿಕೆಗಳಿಗೆ ಎಷ್ಟು ಖರ್ಚಾಗುತ್ತದೆ ಎಂದು ನಾನು ಯೋಚನೆ ಮಾಡಿದ್ದಲ್ಲಿ ತೀರ ಕಡಿಮೆ ಹಣ ಅದಕ್ಕೆ ಖರ್ಚಾಗುತ್ತದೆ. ಅವರು ತಮ್ಮ ಬೇಡಿಕೆಗಳಲ್ಲಿ ಎಲ್ಲ ಉಪಾಧ್ಯಾಯರುಗಳ ಸಂಬಳ ಸಾರಿಗೆಯ ಪುನರ್ವಿಮರ್ಶೆ ಮಾಡಬೇಕೆಂದು ಕೇಳಿಲ್ಲ, ಅದನ್ನೂ ಅವರು ಕೇಳಬೇಕಾಗಿತ್ತು ಎಂದು ನನ್ನ ಅಭಿಪ್ರಾಯ. ಅವರು ಕೇಳದೆ ಹೋದರೆ ಅದು ಬೇರೆ ಸಮಾಚಾರ. ಮುಖ್ಯೋಪಾಧ್ಯಾಯರಿಗೆ ಯೂನಿಫಾರಂ ಸ್ಕೇಲ್ ಕೊಡಬೇಕು ಎಂದು ಕೇಳಿದ್ದಾರೆ. ಅವರಲ್ಲಿ ಎರಡು ತರಹ ಇದ್ದಾರೆ, ತಾರತಮ್ಯ ಮಾಡಬೇಡಿ ಎಂದು ಕೇಳಿದ್ದಾರೆ, ಫೈನಾನ್ಷಿಯಲ್ ಇಂಪ್ಲಿಕೇಷನ್ಸ್ ಇರುವಂಥದ್ದು ಇನ್ನೊಂದು.

"Give parity in the pay scales to Physical Education teachers and settle their arrears immediately"

ಅದು ಬಹಳ ಸಣ್ಣ ವಿಭಾಗ, ಅದರಲ್ಲಿ ಎಲ್ಲರೂ ಸೇರುವುದಿಲ್ಲ. ಏಳು ಸಾವಿರ ಜನಗಳಿಗೂ ಅನುಕೂಲವಾಗತಕ್ಕ ವಿಚಾರವೆಂದರೆ ದಿನಭತ್ಯವನ್ನು ಹತ್ತು ರೂಪಾಯಿ ಮಾಡುವುದು, ಡೆಪ್ಯುಟಿ ಚೀಫ್ ಎಗ್ಸಾಮಿನರ್‌ಗೆ 400 ರೂಪಾಯಿ ಮತ್ತು ಚೀಫ್ ಎಗ್ಸಾಮಿನರ್‌ಗೆ 500 ರೂಪಾಯಿ ಕೊಡಬೇಕೆಂಬ ವಿಚಾರ. ಇದು ವ್ಯಾಲ್ಯುವೇಷನ್ನಿಗೆ ಯಾರು ಬರುತ್ತಾರೆಯೋ ಅವರಿಗೆ ಮಾತ್ರ ಅನ್ವಯವಾಗುತ್ತದೆ, ಇತರರಿಗೆ ಅನ್ವಯವಾಗುವುದಿಲ್ಲ. ಮೂರನೇ ಅಂಶ ಮಾತ್ರ ತಕ್ಷಣ ತುರ್ತಾಗಿ ಕಾರ್ಯರೂಪಕ್ಕೆ ತರುವಂಥ ಅಂಶ. ಅದರಲ್ಲಿನ ಫೈನಾನ್ಷಿಯಲ್ ಇಂಪ್ಲಿಕೇಷನ್ ನೋಡಿದರೆ ಭಾರಿ ಮೊತ್ತದ ಪ್ರಮಾಣದಲ್ಲಿ ಖರ್ಚು ಮಾಡಬೇಕಾಗುತ್ತದೆಂದು ಹೇಳಿದರೆ ನಾನು ಅದನ್ನು ನಂಬುವುದಿಲ್ಲ. ಸರ್ಕಾರ ಅಷ್ಟೊಂದು ದಿವಾಳಿಯಾಗಿದೆ, ಮಾಡುವುದಕ್ಕಾಗುವುದಿಲ್ಲವೆಂದರೆ ನಂಬುವುದಕ್ಕಾಗುವುದಿಲ್ಲ. ಪ್ರಯತ್ನಪಟ್ಟರೆ ಮೂರನ್ನೂ ಕೂಡ ಕಾರ್ಯರೂಪದಲ್ಲಿ ತರುವುದಕ್ಕೆ ಸಾಧ್ಯವಿದೆ.

"Stop un-authorised collection of donations and fees"

ನಮ್ಮ ರಾಜ್ಯದ ಉಪಾಧ್ಯಾಯರು ಇನ್ನೂ ಮುಂದೆ ಹೋಗುತ್ತಾರೆಂದು ನಾನು ತಿಳಿದುಕೊಂಡಿದ್ದೆ, ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್ ಇರಕೂಡದು ಎಂದು ನನ್ನ ಅಭಿಪ್ರಾಯ. ಅವೆಲ್ಲವನ್ನೂ ಸರ್ಕಾರದವರೇ ನಡೆಸಬೇಕು. ಅಲ್ಲಿ ಕೆಲಸ ಮಾಡುವ ಉಪಾಧ್ಯಾಯರೆಲ್ಲ ಸರ್ಕಾರಿ ಉಪಾಧ್ಯಾಯರುಗಳಾಗಬೇಕು ಎನ್ನುವುದು ನನ್ನ ಅಭಿಪ್ರಾಯ. ಅನೇಕ ರಾಜಕಾರಣಿಗಳು ಎಜುಕೇಷನ್ ಸೊಸೈಟಿಗಳನ್ನು ಮಾಡಿಕೊಂಡು ಮುಖ್ಯವಾದ ಸ್ಥಾನಗಳನ್ನು ಪಡೆದು ಉಪಾಧ್ಯಾಯರನ್ನು ತುಳಿದು ಹಿಪ್ಪೆ ಮಾಡುತ್ತಿದ್ದಾರೆ. ಆದುದರಿಂದಲೇ ಅದು ಹೋಗಬೇಕು ಎಂದು ನಾನು ಹೇಳುವುದು. ಆ ಬೇಡಿಕೆಯನ್ನೂ ಅವರು ಇಟ್ಟಿಲ್ಲ.

" Stop un-authorised collection of donations and fees "

ಆದುದರಿಂದ ಅವರು ಕೇಳಿರುವುದು ನ್ಯಾಯವಾದುದು ಎನ್ನುವುದರಲ್ಲಿ ಅಭ್ಯಂತರವಿಲ್ಲ.

ನಿವೃತ್ತಿಯಾಗುವ ವಯಸ್ಸಿನ ಬಗ್ಗೆ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಬೇರೆ ರಾಜ್ಯಗಳಲ್ಲಿ ಯಾವ ರೀತಿ ಇದೆ ಎನ್ನುವುದನ್ನು ಪರಿಶೀಲನೆ ಮಾಡಬೇಕು. ಸಮತಾವಾದದ ತತ್ವವನ್ನು ಒಪ್ಪಿಕೊಂಡಿದ್ದಾರೆ. ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಜಾಸ್ತಿ ಮಾಡುವ ಉದ್ದೇಶದಿಂದ ನಿವೃತ್ತಿಯ ವಯಸ್ಸನ್ನು ಕಡಮೆ ಮಾಡಲಾಗಿದೆ ಎಂದು ಹೇಳುವ ವಾದ ಸರಿಯಲ್ಲ ಎಂದು ನನ್ನ ಅಭಿಪ್ರಾಯ. ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಜಾಸ್ತಿ ಮಾಡಬೇಕಾದರೆ ಅದಕ್ಕೆ ಬೇರೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಕೈಗಾರಿಕೆಗಳನ್ನು ಜಾಸ್ತಿ ಮಾಡುವುದು, ಭೂಸುಧಾರಣೆಯನ್ನು ಜಾರಿಗೆ ತರುವುದು, ರೈತರು ವಲಸೆ ಬಾರದೆ ಇರುವ ಹಾಗೆ ಮಾಡುವುದು ಇವುಗಳಿಂದ ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಜಾಸ್ತಿಯಾಗುತ್ತದೆ ನಿವೃತ್ತಿಯಾಗುವ ವಯೋಮಿತಿಯನ್ನು ಕಡಮೆ ಮಾಡುವುದರಿಂದ ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಜಾಸ್ತಿಯಾಗುವುದಿಲ್ಲ. 55 ವರ್ಷ ವಯಸ್ಸಾಗಿರುವವರೂ ಕೆಲಸ ಮಾಡುವುದಕ್ಕೆ ಶಕ್ತಿ ಇರುವವರಾಗಿರುತ್ತಾರೆ. ಅವರೂ ನಿರುದ್ಯೋಗಿಗಳಾಗುತ್ತಾರೆ. ಆದುದರಿಂದ ಎಂಪ್ಲಾಯ್‌ಮೆಂಟ್ ಪೊಟೆನ್ಷಿಯಲ್ ಜಾಸ್ತಿ ಮಾಡುವುದಕ್ಕಾಗಿ ನಿವೃತ್ತಿ ವಯೋಮಿತಿಯನ್ನು ಕಡಮೆ ಮಾಡಲಾಗಿದೆ ಎಂದು ಹೇಳುವುದು ಆಧಾರರಹಿತವಾದುದು, ಸತ್ವರಹಿತವಾದುದು. ಸಮಾಜ

(ಶ್ರೀ ಕೆ. ಬಿ. ಶಿವಯ್ಯ)

ವಾದವನ್ನು ಒಪ್ಪಿಕೊಂಡಿರುವ ಯಾವ ರಾಷ್ಟ್ರದಲ್ಲಿಯೇ ಆಗಲೀ ನಿವೃತ್ತಿಯ ವಯೋಮಿತಿ 55 ವರ್ಷವಿಲ್ಲ. ಆಲ್ಲೆಲ್ಲ ಮನುಷ್ಯನ ಆಯುರ್ಮಿತಿ ಜಾಸ್ತಿ ಇರಬಹುದು, ನಮ್ಮ ರಾಜ್ಯದಲ್ಲಿ ಕೂಡ ಸ್ವಾತಂತ್ರ್ಯ ಬಂದ ನಂತರ ಆಯುರ್ಮಿತಿ ಜಾಸ್ತಿಯಾಗಿದೆ. ಆದುದರಿಂದ ನಿವೃತ್ತಿಯ ವಯೋಮಿತಿಯನ್ನು ಹೆಚ್ಚಿಸುವ ವಿಚಾರವನ್ನೂ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅಪ್ರೋಚ್ ಏನಿರಬೇಕು ಎಂಬುದನ್ನು ಯೋಚನೆ ಮಾಡಬೇಕು. I will not budge an inch ಎಂದು ಮಾನ್ಯ ಮಂತ್ರಿಗಳು ಹೇಳಿದರು ಸಮಸ್ಯೆ ಬಗೆಹರಿಯುತ್ತದೆಯೇ ? ಅದನ್ನು ಏಕೆ ಹೇಳಿದರೋ ಗೊತ್ತಿಲ್ಲ. ಎಂಥೆಂಥವರೋ ಇದೇ ರೀತಿ ಹೇಳಿ ಕೊನೆಗೆ ಕೆಳಕ್ಕೆ ಇಳಿದಿದ್ದಾರೆ. ಹಿಟ್ಲರ್, ಚರ್ಚಿಲ್, ಲಾರ್ಡ್ ವೇವೆಲ್ ಮುಂತಾದ ಆಳುವ ಜನರೆಲ್ಲ ಹೇಳಿದರು. ಕಾರ್ಮಿಕ ವರ್ಗವನ್ನು, ದುಡಿಯುವವರನ್ನು ಹೆದರಿಸಿ ಅಂಕೆಯಲ್ಲಿಟ್ಟುಕೊಳ್ಳುವುದಾಗಿ ಕೆಲವರು ಹೇಳಿದರು. ಅದರಿಂದ ಏನೂ ಪ್ರಯೋಜನವಾಗ ವುದಿಲ್ಲ. ನ್ಯಾಯವಾದುವುಗಳನ್ನು ಒಪ್ಪಿಕೊಳ್ಳಿ, ನ್ಯಾಯವಿಲ್ಲದೆ ಇರುವ ವಿಚಾರಗಳಲ್ಲಿ ಅವರಿಗೆ ಒಪ್ಪುವಂತೆ ಹೇಳಬೇಕು. ಪ್ರತಿಗಾಮಿ ಶಕ್ತಿಗಳು ರಾಜ್ಯದಲ್ಲಿ ತಲೆ ಎತ್ತುವುದಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ. ಅದರಿಂದ ಅನಾಹುತವಾಗುತ್ತದೆ, ದೇಶಕ್ಕೆ ಅಪಕಾರವಾಗುತ್ತದೆ. ಆದ್ದರಿಂದ ಅಂಥವಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ವಿ. ನಾಯಕ್ (ಕುಮಟ).—ಮಾನ್ಯ ಅಧ್ಯಕ್ಷಿಣಿಯವರೇ, ಶಿಕ್ಷಕರ ಬೇಡಿಕೆಗಳ ಬಗ್ಗೆ ಪರವಾಗಿ ಮತ್ತು ವಿರೋಧವಾಗಿ ಈಗಾಗಲೇ ವಿಷಯ ಚರ್ಚಿತಚರ್ವಣವಾಗಿದೆ. 7ಸಾವಿರ ಶಿಕ್ಷಕರ ಮತ್ತು ಶಿಕ್ಷಕ್ಷಿಯರ ಬೇಡಿಕೆಗಳನ್ನು ಅರಿಯುವಂಥ ಸ್ಥಿತಿ ನಮ್ಮ ಶಿಕ್ಷಣ ಮಂತ್ರಿಗಳಿಗೆ ಇಲ್ಲವೆನ್ನುವ ಸಂಶಯವನ್ನು ಮಾನ್ಯ ವಿರೋಧಪಕ್ಷದ ನಾಯಕರಾದ ದೇವೇಗೌಡರು ವ್ಯಕ್ತಪಡಿಸಿದ್ದಾರೆ. 12 ವರ್ಷ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ ಮತ್ತು ನನ್ನ ಪತ್ನಿಯೂ ಕೂಡ ಈ ಹೊತ್ತು ಮುಖ್ಯ ಅಧ್ಯಾಪಕಿಯಾಗಿದ್ದಾಳೆ. ಆದ್ದರಿಂದ ಶಿಕ್ಷಕರ ತೊಂದರೆ ಏನು ಎನ್ನುವುದರ ಗುರುತರವಾದ ಹೊಣೆಯ ಅರಿವು ನನಗಿದೆ ಎಂದು ಮಾನ್ಯ ದೇವೇಗೌಡರಿಗೆ ಹೇಳುತ್ತೇನೆ. 7 ಸಾವಿರ ಶಿಕ್ಷಕರು ಮೌಲ್ಯಮಾಪನದ ದರವನ್ನು 75 ಪೈಸೆಯಿಂದ ಒಂದು ರೂಪಾಯಿಗೆ ಏರಿಸಬೇಕೆಂದು ಕೇಳುತ್ತಿದ್ದಾರೆ. ಸರ್ಕಾರಕ್ಕೆ ಕೂಡ ಭಾರ ಬೀಳದ ರೀತಿಯಲ್ಲಿ ಒಂದು ವ್ಯವಸ್ಥೆ ಮಾಡುವುದಕ್ಕೆ ಅವಕಾಶವಿದೆ ಎಂದು ನಾನು ಸೂಚಿಸ ಬಯಸುತ್ತೇನೆ. ಮಾನ್ಯ ನಯನಕ್ ಅವರು ಹೇಳಿದಂತೆ ಮೌಲ್ಯಮಾಪಕರನ್ನು ಇಲ್ಲಿಗೆ ಕರೆಸಿ 7 ಸಾವಿರ ಜನಗಳಿಗೆ ತೊಂದರೆ ಕೊಡುತ್ತಿದ್ದಾರೆ. ಏಪ್ರಿಲ್ ಮೇ ತಿಂಗಳ ರಜೆಯಲ್ಲಿ ತಮ್ಮ ಪತ್ನಿ ಮಕ್ಕಳ ಸಂಗಡ ಇರಬಹುದಾದ ಕಾಲದಲ್ಲಿ ಇಲ್ಲಿಗೆ ಬಂದು ಕಷ್ಟಪಡುತ್ತಿದ್ದಾರೆ. ಹಾಗೆ ಮಾಡುವುದು ಬೇಡ. ಈಗ ಇರುವಂಥ ಪದ್ಧತಿಯನ್ನು ಬದಲಾಯಿಸಿ ಅವರವರ ಸ್ಥಳಗಳಲ್ಲಿಯೇ, ಹಿಂದೆ ಬೊಂಬಾಯಿ ಸರ್ಕಾರದಲ್ಲಿ ಯಾವರೀತಿ ಇತ್ತೋ ಆ ರೀತಿ ಮೌಲ್ಯಮಾಪನದ ವ್ಯವಸ್ಥೆಯನ್ನು ಮಾಡಿದರೆ ಆ ಕೆಲಸ ಸುಗಮವಾಗಿ ಆಗುತ್ತದೆ. ಸಾಮಾನ್ಯವಾಗಿ ಮುಖ್ಯೋಪಾಧ್ಯಾಯರ ಮತ್ತು ಅಸಿಸ್ಟೆಂಟ್ ಮಾಸ್ತರುಗಳ ಸಂಬಳದ ಸ್ಕೇಲುಗಳನ್ನು ತೆಗೆದುಕೊಳ್ಳುವುದಾದರೆ ಪ್ರತಿಯೊಬ್ಬರಿಗೂ ಹತ್ತರಿಂದ 20 ರೂಪಾಯಿನವರೆಗೂ ದಿನವೆಚ್ಚ ಸಿಕ್ಕುತ್ತದೆ. ಅವರವರ ಸ್ಥಳಗಳಲ್ಲಿಯೇ ಮೌಲ್ಯಮಾಪನದ ಕೆಲಸವನ್ನು ಮಾಡಲು ಅವಕಾಶ ಮಾಡಿದರೆ ಈ ಹಣದ ಉಳಿತಾಯವಾಗುತ್ತದೆ ಮತ್ತು ಕೆಲಸವೂ ಉತ್ತಮ ರೀತಿಯಲ್ಲಿ ಆಗುತ್ತದೆ. ಯಾವರೀತಿಯ ತಾರತಮ್ಯವೂ ಆಗುವುದಿಲ್ಲ. ಉತ್ತರ ಪತ್ರಿಕೆಗಳ ಮೌಲ್ಯಮಾಪನಕ್ಕೆ ಒಂದು ರೂಪಾಯಿ ಬೇಕಾದರೂ ಕೊಡಬಹುದು. ಆದ್ದರಿಂದ ಈ ರೀತಿಯಾಗಿ ಪುನರ್ವ್ಯವಸ್ಥೆ ಮಾಡುವುದನ್ನು ಪುನರ್ಪರಿಶೀಲನೆ ಮಾಡಿ ಮೌಲ್ಯಮಾಪನ ಕೆಲಸ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಮಾನ್ಯ ದೇವೇಗೌಡರು ಹೇಳಿದಂತೆ ಶಿಕ್ಷಕರ ಬೇಡಿಕೆಗಳಲ್ಲಿ ಎರಡು ಭಾಗವಿದೆ. ಒಂದು ಮೌಲ್ಯಮಾಪನಕ್ಕೆ ಸಂಬಂಧಪಟ್ಟ ವಿಷಯ. ಇನ್ನು ಕೆಲವು ಬೇಡಿಕೆಗಳು ಧೋರಣೆಗೆ ಸಂಬಂಧಪಟ್ಟವು. ಸರ್ಕಾರ ಶೀಘ್ರವಾಗಿ ಈ ಸದನದಲ್ಲಿಯೇ ಆಶ್ವಾಸನೆ ಕೊಡಬಹುದಾದಂಥ ಕೆಲವು ಅಂಶಗಳು ಇದರಲ್ಲಿ ಅಡಕವಾಗಿವೆ. ಅವನ್ನು ಮಾನ್ಯ ಮಂತ್ರಿಗಳು ಈ ಸದನದಲ್ಲಿ ಪ್ರಕಟಪಡಿಸುತ್ತಾರೆನ್ನುವ ಆತ್ಮವಿಶ್ವಾಸ ನನಗಿದೆ.

ನಮಗೆ ಶಿಕ್ಷಕರ ಮೇಲೆ ಅನುಕಂಪವಿಲ್ಲ, ಸಹಾನುಭೂತಿ ಇಲ್ಲವೆನ್ನುವ ರೀತಿಯಲ್ಲಿ ವಿರೋಧ ಪಕ್ಷಗಳವರು ಮಾತನಾಡಿದರು. ಅವರು ಆ ರೀತಿಯ ಧೋರಣೆಯನ್ನು ತಾಳಿದ್ದರೆ, ಅಥವಾ ಆ ರೀತಿ ಏನಾದರೂ ಸಂಶಯವನ್ನು ಇಟ್ಟುಕೊಂಡಿದ್ದರೆ ಅದು ತಪ್ಪು. ಆಡಳಿತ ಪಕ್ಷದ ಸದಸ್ಯರಲ್ಲಿ

25—30 ಜನ ಸದಸ್ಯರು ಶಿಕ್ಷಕರ ಕ್ಷೇತ್ರದಿಂದ ಬಂದವರೇ ಇದ್ದಾರೆ. ಅವರಿಗೆ ವಿರೋಧಪಕ್ಷಗಳವರಿಗಿಂತ ಹೆಚ್ಚು ಸಹಾನುಭೂತಿ ಮತ್ತು ಅನುಕಂಪ ಶಿಕ್ಷಕರ ಮೇಲೆ ಇದೆ ಎನ್ನುವಂಥ ವಾದವನ್ನು ಕೂಡ ನಾನು ತಮ್ಮ ಮುಂದೆ ಮಂಡಿಸುತ್ತಿದ್ದೇನೆ. ಚಳುವಳಿ ಏಕಾಯಿತು ಎಂದರೆ, ನಾನು ಒಬ್ಬ ಶಿಕ್ಷಕರ ಪ್ರತಿನಿಧಿಯಾಗಿ ಮಾತನಾಡಬೇಕಾದರೆ ಶಿಕ್ಷಕರು ನಾವೆಲರೂ ಹೇಳುವಂತೆ ಅವರು ಗೋವಿನಂತಹ ಜನರು. ಅಂತಹವರನ್ನು ಇಂದು ಏನು ಮಾಡಿದ್ದಾರೆಂದರೆ ನಮ್ಮ ಮಾನ್ಯ ಸದಸ್ಯರಾದ ಶ್ರೀ ಕೃಷ್ಣನ್‌ರವರು ಹೇಳಿದಂತೆ ವಿರೋಧ ಪಕ್ಷದಲ್ಲಿರುವ ರಾಜಕೀಯ ಮುಖಂಡರುಗಳು ಇಂತಹ ಜನರನ್ನು ಚಳುವಳಿಗೆ ಎಳೆದಿದ್ದಾರೆ ಎಂದು ಅವರು ಹೇಳಿದುದನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಕೆಲವು ಶಿಕ್ಷಕರು ಇಂದು ಇಲ್ಲಿಗೆ ಬಂದವರು ಅವರಿಗೆ ಹಣ ಇದ್ದದ್ದು ಖರ್ಚಾಗಿ ಹೋಗಿರುಗಿ ಕೆಲವರು ಹಿಂದುಗಿ ಹೊರಟು ಹೋಗಿದ್ದಾರೆ. ಇದರಲ್ಲಿ ನಮಗೆ ತಿಳಿದಂತೆ ಇಲ್ಲಿಗೆ ಮೌಲ್ಯ ಮಾಪನಕ್ಕಾಗಿ ಬರುವಂತಹ ಶಿಕ್ಷಕರಿಗೆ ಮೊದಲಿಗೆ ಒಂದು ನೂರು ರೂಪಾಯಿಗಳಷ್ಟು ಅಡ್ವಾನ್ಸ್ ಆಗಿ ಕೊಡುತ್ತಿದ್ದರು. ಕೆಲವರು ಇದನ್ನು ನಂಬಿಕೊಂಡು ಬಂದು ಇಲ್ಲಿ ತೊಂದರೆಗೆ ಒಳಗಾಗಿದ್ದಾರೆ. ಇಂತಹ ಎಷ್ಟೋ ಶಿಕ್ಷಕರು ಕಷ್ಟಕ್ಕೆ ಸಿಕ್ಕಿಕೊಂಡು ತೊಂದರೆಪಡುತ್ತಿದ್ದಾರೆ. ಈಗಾಗಲೇ ಕೆಲ ಮಂದಿ ಶಿಕ್ಷಕರು ಅವರ ಮನೆಗಳಿಗೆ ಹೋಗಿಬಿಟ್ಟಿದ್ದಾರೆ. ಸರಕಾರಕ್ಕೆ ಇದು ಗೊತ್ತಿಲ್ಲವೇನೋ. ಇಂತಹ ಒಂದು ಸಂದರ್ಭದಲ್ಲಿ ಈ ಸಮಸ್ಯೆಯನ್ನು ಸಾಮಾಜಿಕ ದೃಷ್ಟಿಯಿಂದ ನೋಡಿ, ಮಾನವೀಯತೆಯ ದೃಷ್ಟಿಯಿಂದ ನೋಡಿ ಇದಕ್ಕೆ ತಕ್ಕ ಪರಿಹಾರವನ್ನು ಕೊಡಬೇಕು. ಇದಕ್ಕೆ ರಾಜಕೀಯ ಬಣ್ಣವನ್ನು ಕಟ್ಟಿ ಈ ಸಮಸ್ಯೆಯನ್ನು ಬಗೆಹರಿಸುವುದು ಸಾಧುವಲ್ಲ. ಇದಕ್ಕಾಗಿ ನಾವೂ ಹಾಗೂ ನೀವೂ ಎಲ್ಲರೂ ಕೂಡಿ ಮಾನವೀಯ ದೃಷ್ಟಿಯಿಂದ ಸಾಮೂಹಿಕ ದೃಷ್ಟಿಯಿಂದ ಈ ಸಮಸ್ಯೆಯನ್ನು ಬಗೆಹರಿಸಬೇಕಾದುದು ಅತ್ಯವಶ್ಯಕ. ಸರಕಾರ ಕೂಡ ಪರಿಹಾರ ಕೊಡಲು ಇಂತಹ ಸೂಕ್ಷ್ಮವಾದ ವಿಚಾರಗಳಲ್ಲಿ ಸಹಾನುಭೂತಿಯಿಂದ ವಿಚಾರ ಮಾಡುತ್ತಾರೆ. ಸರಕಾರಕ್ಕೆ ಇವರ ಬಗ್ಗೆ ಅನುಕಂಪ ಇದೆ ಮತ್ತು ಸಹಕಾರವಿದೆ ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಈ ದಿನ ಮೊಟ್ಟಮೊದಲನೆಯದಾಗಿ ಇಲ್ಲಿ ಈ ನಿಲುವಳಿ ಸೂಚನೆಗೆ ಅನುಮತಿ ಕೊಟ್ಟುದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಇವೊತ್ತಿನ ದಿವಸ ಸುಮಾರು ಏಳುಸಾವಿರ ಜನ ಶಿಕ್ಷಕರು ಇಂದು ನಮ್ಮ ಬೆಂಗಳೂರು ನಗರವನ್ನು ಮುತ್ತಿಗೆ ಹಾಕಿದ್ದಾರೆ. ಅಷ್ಟೇ ಅಲ್ಲ ಅವರು ಕೇಳಿರುವಂತಹ ಬೇಡಿಕೆಗಳೆಲ್ಲಾ ತೀರಾ ಕ್ಷುಲ್ಲಕವಾದವುಗಳೆಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತಿನ ದಿವಸ ಸರಕಾರ ಕೂಡ ಒಂದು ರೀತಿಯಾದ ಪೇಚಿನ ಸ್ಥಿತಿಗೆ ಸಿಕ್ಕಿಹಾಕಿಕೊಂಡಿದೆ. ಇದರ ಎಲ್ಲ ಹೊಣೆ ಹಾಗೂ ಜವಾಬ್ದಾರಿ ಅವರ ಮೇಲೆ ಬಿದ್ದಿದೆ. ಇದರಲ್ಲಿ ಹಿಂದೆ ಇದ್ದ ಸರಕಾರ ಎಂದು ಬೇಕಾದರೂ ಆಗಬಹುದು ಇಲ್ಲ ಈಗಿರುವ ಸರಕಾರ ಬೇಕಾದರೂ ಆಗಬಹುದು. ಆಗಿದ್ದದ್ದೂ ಕಾಂಗ್ರೆಸ್ಸು ಸರಕಾರ ಈಗಿರುವುದೂ ಕಾಂಗ್ರೆಸ್ಸು ಸರಕಾರ. ಇವೆರಡು ಕಾಂಗ್ರೆಸ್ಸು ಇದ್ದಂತಹ ಸರಕಾರಗಳೇ. ನಮ್ಮ ದೃಷ್ಟಿಯಲ್ಲಿ ಸರಕಾರ ಎಂದರೆ ಇದೊಂದು ಕಂಟಿನ್ಯೂಯಸ್ ಬಾಡಿ. ಇವೊತ್ತು ಒಂದು ಪಕ್ಷ ಆಡಳಿತದಲ್ಲಿರಬಹುದು. ಹಿಂದೆ ಒಂದು ಪಕ್ಷ ಅಡಳಿತದಲ್ಲಿರಬಹುದು. ಆದರೆ ಇದರಲ್ಲಿ ಸರಕಾರದ ಜವಾಬ್ದಾರಿ ಇದ್ದೇ ಇದೆ. ಇಪ್ಪತ್ತೆರಡು ವರ್ಷಗಳ ಹಿಂದೆ 75 ಪೈಸೆ ಎಂದು ಕೊಡುತ್ತಿರುವುದನ್ನು ಹೇಳುತ್ತ ನಮ್ಮ ಮಿತ್ರರು ಇದಕ್ಕೆ ಒಂದು ರೀತಿಯಾದ ರಾಜಕೀಯ ಬಣ್ಣವನ್ನು ಕೊಟ್ಟು ಸರಕಾರದ ಅಧಿಕಾರಿಗಳ ಮುಂದೆ ಬೇಡಿಕೆಗಳನ್ನು ಇಟ್ಟಿದ್ದಾರೆ. ಇದರ ಬಗ್ಗೆ ಮಾತನಾಡುತ್ತಾ ಶ್ರೀ ಕೃಷ್ಣನ್ ರವರು ಇದರ ಫೈನಾನ್‌ಷಿಯಲ್ ಇಂಪ್ಲಿಕೇಷನ್‌ಗಳ ಬಗ್ಗೆ ಹೇಳುವುದನ್ನು ಕೇಳಿದರೆ ಇದರಲ್ಲಿ ಅಂತಹದೇನೂ ಇಲ್ಲ. ಎಲ್ಲ ಕ್ಷುಲ್ಲಕವಾದ ಬೇಡಿಕೆಗಳೇ. ಇಂತಹ ಬೇಡಿಕೆಗಳಂತೆ ಇಷ್ಟು ಮಾತ್ರ ಹೆಚ್ಚು ಮಾಡಬಹುದು. ಇದರಲ್ಲಿ ಇನ್ನೊಂದು ಬೇಡಿಕೆ ನೋಡಿದರೆ ಸರಕಾರ ಎಷ್ಟುಮಟ್ಟಿಗೆ ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಇವರು ಇಟ್ಟಿರುವ ಬೇಡಿಕೆ ಎಂದರೆ ಕೆಲವು ಶಿಕ್ಷಕರುಗಳ ಅರಿಯರ್ಸ್‌ನ್ನು ಇನ್ನೂ ಕೊಟ್ಟಿಲ್ಲ. ಇದನ್ನು ಕೂಡಲೇ ಕೊಡಬೇಕು ಎನ್ನುವುದು. ಇಂತಹ ಕೆಲವಾರು ಸಣ್ಣ ಬೇಡಿಕೆಗಳನ್ನು ಸರಕಾರದ ಮುಂದಿಟ್ಟು ಇಂದು ನಮ್ಮ ಬೆಂಗಳೂರು ನಗರವನ್ನು ಮುತ್ತಿಗೆ ಹಾಕಿಬಿಟ್ಟಿದ್ದಾರೆ. ಇದನ್ನು ನೋಡಿ ನಮಗೆ ತುಂಬಾ ಆಶ್ಚರ್ಯವಾಗುತ್ತಿದೆ. ಇವೆಲ್ಲ ಸಣ್ಣ ಬೇಡಿಕೆಗಳು. ಇವನ್ನು ಸರಕಾರ ಈಡೇರಿಸುವುದಕ್ಕಾಗುವುದಿಲ್ಲ ಎಂದು ಹೇಳುವಂತಹವುಗಳೇನಲ್ಲ. ಇದರಲ್ಲಿ ರಿಟೈರುಮೆಂಟು ಏಜಿನ ಬಗ್ಗೆ ಒಂದು ಬೇಡಿಕೆ ಇದೆ. ಇದರ ಬಗ್ಗೆ ನನಗೆ ಹಿಂದೆ ಮಾತನಾಡಿದ ಮಿತ್ರರುಗಳನೇಕರು ವಿಧ ವಿಧವಾದ ಅಭಿಪ್ರಾಯಗಳನ್ನು ಇಲ್ಲಿ ವ್ಯಕ್ತಮಾಡಿದ್ದಾರೆ. ಆದರೆ ಇವೊತ್ತು ಸರಕಾರದ ಕೈಕೆಳಗಿರತಕ್ಕ ಯಾವ ಅಧಿಕಾರಿಗಳೇ ಆಗಲೀ ಅವರು ವಿದ್ಯಾ ಇಲಾಖೆಗೆ ಸಂಬಂಧಪಟ್ಟವರಲಿ ಇಲ್ಲವೇ ರೆವೆನ್ಯೂ ಇಲಾಖೆಗೆ ಸಂಬಂಧಪಟ್ಟವರೇ ಆಗಲೀ

(ಶ್ರೀ ಸಿ. ಬೈರೇ ಗೌಡ)

ಎಲ್ಲರಿಗೂ ಒಂದೇ ರೀತಿಯಾದ ರಿಟೈರುಮೆಂಟು ಏಜು ಇರಬೇಕಾದದ್ದು ಅತ್ಯಾವಶ್ಯಕ. ಇಂದು ಐ. ಏ. ಎಸ್. ಅಧಿಕಾರಿಗಳಿಗೆ ಮಾತ್ರ 58 ಎಂದು ವಯಸ್ಸು ನಿಗದಿ ಮಾಡಿ ಇತರ ಅಧಿಕಾರಿಗಳಿಗೆ 55 ವರ್ಷ ಎಂದು ಇಟ್ಟಿರುವುದು ಸೂಕ್ತವಾದುದಲ್ಲ. ನನ್ನ ಅಭಿಪ್ರಾಯದಲ್ಲಿ ಎಲ್ಲ ಅಧಿಕಾರಿಗಳಿಗೂ 55 ವರ್ಷಗಳೇ ಎಂದು ಮಾಡುವುದು ಸರಿಯಾಗಿರುತ್ತದೆ. ಇದನ್ನು ಸರಕಾರ ಪರಿಶೀಲನೆ ಮಾಡಬೇಕು. ವಿದ್ಯಾ ಇಲಾಖೆಯಲ್ಲಾಗಲೀ ಬೇರೆ ಇಲಾಖೆಯಾಗಲೀ ಎಲ್ಲ ಇಲಾಖೆಗಳಲ್ಲೂ 55 ವರ್ಷವೇ ರಿಟೈರು ಏಜು ಇರಬೇಕೆಂದು ಮಾಡುವುದು ಸೂಕ್ತ ಎಂದು ನಾನ ಹೇಳುತ್ತೇನೆ. ಇದನ್ನು ಹೇಳುವುದರಲ್ಲಿ ಸ್ವಲ್ಪ ಅರ್ಥವೂ ಇದೆ. ಇದರಲ್ಲಿ ಒಂದು ರೀತಿಯ ಅಲಸ್ಯ ಮನೋಭಾವವನ್ನು ಸರಕಾರ ತಳೆಯುವುದಾದರೆ ಇದರಿಂದ ದೇಶದಲ್ಲಿ ಒಂದು ರೀತಿಯಾದ ಫ್ಯಾಸಿಸ್ಟು ಶಕ್ತಿ ಬೆಳೆಯಲು ಅವಕಾಶವಾಗುತ್ತದೆ. ಇಂತಹ ಒಂದು ಪ್ರತಿಗಾಮಿ ಮನೋಭಾವನೆ ಬೆಳೆದು ಇದರಿಂದ ದುರುಪಯೋಗವಾಗುತ್ತದೆ. ಇದರಲ್ಲಿ ನೇರವಾಗಿ ಸರಕಾರದ ಹೊಣೆ ಇದೆ. ಸರಕಾರ ಕೆಲ ಕೆಲವು ಬೇಡಿಕೆಗಳನ್ನು ಈಡೇರಿಸುವಂತಹ ಪರಿಸ್ಥಿತಿ ಇದೆ. ಆದರೆ ಇದರಲ್ಲಿ ಪ್ರತಿಗಾಮಿ ಶಕ್ತಿ ಇಲ್ಲವೇ ಫಾಸಿಸಂ ಶಕ್ತಿ ಇರುವಂತಹ ಬೇಡಿಕೆಗಳನ್ನು ಇದರಲ್ಲಿ ತಂದು ಸರಕಾರವನ್ನು ಸಿಕ್ಕಿ ಹಾಕಿದೆ. ಇದರ ಬಗ್ಗೆ ಸರಕಾರ ಸ್ವಲ್ಪ ಎಚ್ಚರಿಕೆಯಿಂದಿರಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

Sri B. SUBBAYYA SHETTY (Suratkal).—Madam Speaker, the demands put forward by the teachers require sympathetic consideration. The teachers profession in this country or any country is a serious affair because it involves moulding of the generation. What I see today, is, the demand is only economic oriented. Most of the demands which we see in this country are economic oriented. Of course I do not be little the economic oriented demands. But, at the same time I would like to point out that the demands also should be duty-oriented. This particular profession moulds the generation and therefore the performance of the teachers is essential. We must give sufficient thought to this. What we see today is in so many schools especially in my constituency many complaints have come that the teachers are not performing their duty correctly. It is a question whether we should pay more to these teachers or whether we should adopt a system whereby apart from giving more salaries they should also discharge their duties properly. I certainly agree that when the prices are raising we cannot make the teachers work for lower salaries. At the same time we have to adopt a method whereby we should see that their performance becomes good.

About the increase in the allowance for evaluation of answer books, perhaps this demand requires a good and sympathetic consideration. Apart from this, as the hon. member Sri B. B. Sayanak suggested, whether this work could be decentralised may also be considered. Apart from this, I would like to suggest that when unemployment is growing in this country and when we have so many unemployed graduates, we could also consider whether this valuation can be done by the unemployed graduates so that at least to that extent some employment can be given to those unemployed graduates.

With these words I thank the Chair for the opportunity given to me to speak.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಅಧ್ಯಕ್ಷರೇ ವಿದ್ಯಾಮಂತ್ರಿಗಳು ಬಹಳ ದಕ್ಷರು, ಪ್ರಾಮಾಣಿಕರು, ಕಷ್ಟಸುಖಗಳನ್ನು ತಿಳಿದಂಥವರು. ಅವರ ಕಾಲದಲ್ಲಿ ಅನೇಕ ಸಮಸ್ಯೆಗಳನ್ನು ಬಗೆಹರಿಸುತ್ತಾರೆಂದು ಬಹಳ ಜನ ನಂಬಿಕೊಂಡಿದ್ದರು. ಈ ಸಣ್ಣ ಸಮಸ್ಯೆ ಬೃಹದಾಕಾರವಾಗಿ ಏಕೆ ಬೆಳೆಯಿತು ಎಂದು ಈಗ ನಾವು ಅನುಮಾನ ಪಡಬೇಕಾಗಿದೆ. ನಿಜವಾಗಿಯೂ ಉಪಾಧ್ಯಾಯರ ಬೇಡಿಕೆಗಳು ನ್ಯಾಯವಾಗಿ ಇದೆ. ಉಪಾಧ್ಯಾಯರುಗಳು ಮಂತ್ರಿ ಪದವಿಯನ್ನಾಗಲೀ- ಬಂಗಲೆಯನ್ನಾಗಲೀ ಅಥವಾ ಕಾರನ್ನಾಗಲೀ ಕೇಳಲಿಲ್ಲ. ಅವರು ಹತ್ತು ದಿವಸಗಳು ಕೆಲಸಮಾಡಲು ಅವರ ಜೀವನವನ್ನು ಸಾಗಿಸುವುದಕ್ಕೆ ಏನು ಬೇಕೋ ಅದನ್ನು ಕೇಳುತ್ತಿದ್ದಾರೆ. ಇಂಥ ಸಣ್ಣ ಸಮಸ್ಯೆಯನ್ನು ಮಂತ್ರಿಗಳು ಅರ್ಥಮಾಡಿಕೊಳ್ಳದೆ ಬೃಹದಾಕಾರವಾಗಿ ಇದನ್ನು ಏತಕ್ಕೆ ಬೆಳೆಸಿದ್ದಾರೋ ನಿಜವಾಗಿಯೂ ಅರ್ಥವಾಗುತ್ತಿಲ್ಲ. ವಿದ್ಯಾ ಮಂತ್ರಿಗಳು ಮನೆಯಲ್ಲಿ ದೊಡ್ಡ ಲೈಬ್ರರಿಯನ್ನು ಇಟ್ಟಿದ್ದಾರೆ. ಐವತ್ತು ಅರವತ್ತು ಸಾವಿರ ರೂಪಾಯಿ ಬೆಲೆ ಬಾಳುವ ಪುಸ್ತಕಗಳನ್ನು ಇಟ್ಟಿದ್ದಾರೆ. ಅವರು ವರ್ಲ್ಡ್ ಪ್ರಾಬ್ಲಮ್ ಡಿಸ್ಕಸ್ ಮಾಡುತ್ತಿರುವಾಗ ಇಂಥ ಸಣ್ಣ ಸಮಸ್ಯೆ ಅರ್ಥವಾಗಲಿಲ್ಲವೆಂದರೆ ಆಶ್ಚರ್ಯವಾಗುತ್ತದೆ. ಈವತ್ತಿನ ದಿವಸ ಯಾವ ಡಿಪಾರ್ಟ್‌ಮೆಂಟ್ ನೋಡಿದರೂ ಅಲ್ಲಿ ಬೇಕಾದಷ್ಟು ಲಂಚರುಶುವತ್ತು ನಡೆಯುತ್ತಿದೆ. ಆದರೆ ವಿದ್ಯಾ ಇಲಾಖೆಯಲ್ಲಿ ಯಾವ ಲಂಚರುಶುವತ್ತು ಇರುವುದಿಲ್ಲ. ಈ ಉಪಾಧ್ಯಾಯರು ಹತ್ತು ಗಂಟೆಯಿಂದ ಹದಿನೈದು ಗಂಟೆಯವರೆಗೆ ದುಡಿಯುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿ ಏನಾದರೂ ಅಶಾಂತಿ ಉಂಟಾದರೆ ನಮ್ಮನ್ನೂ ನೋಡುವುದಿಲ್ಲ; ಉಪಾಧ್ಯಾಯರನ್ನೂ ನೋಡುವುದಿಲ್ಲ ಯಾರನ್ನೂ ನೋಡುವುದಿಲ್ಲ. ನಮ್ಮ ಮೇಲೆ ಬಿದ್ದುಬಿಡುತ್ತಾರೆ. ಅಂತಹವರ ಜೊತೆಯಲ್ಲಿ ಉಪಾಧ್ಯಾಯರು ಹೊಡೆದಾಡುತ್ತಿದ್ದಾರೆ. ಅಂತಹ ಶಿಕ್ಷಕರ ಸಮಸ್ಯೆಯನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಸರ್ಕಾರಕ್ಕೆ 50 ಲಕ್ಷ ರೂಪಾಯಿಗಳು ನಷ್ಟವಾದರೂ ಚಿಂತೆಯಿಲ್ಲ. ಮೊದಲು ನ್ಯಾಯವಾಗಿ ಅವರಿಗೆ ಏನು ಕೊಡಬೇಕೋ ಅದನ್ನು ಕೊಡಿ. ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಕೋಟಿ ಕೋಟಿ ರೂಪಾಯಿಗಳನ್ನು ತಿಂದು ನೀರು ಕುಡಿದಿರುತ್ತಾರೆ. ಅವರನ್ನು ಹಾಗೆಯೇ ಬಿಟ್ಟುಬಿಡುತ್ತೀರಿ. ಉಪಾಧ್ಯಾಯ ನ್ಯಾಯವಾಗಿ ಕೇಳುತ್ತಿರುವ ಬೇಡಿಕೆಯನ್ನು ಈಡೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಹಮೀದ್ ಷಾ.—ಲಂಚ ಎಂದರೆ ಏನು ಸ್ವಾಮಿ ?

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ಅದು ಅವರಿಗೆ ಗೊತ್ತಿದೆ. ಆನ್ಸರ್ ಪೇಪರ್ ವ್ಯಾಲ್ಯೂಏಷನ್ ಬಗ್ಗೆ ಉಪಾಧ್ಯಾಯರುಗಳನ್ನು ನಂಬದೆ ಅವರನ್ನು ಇಲ್ಲಿಯೇ ಕರೆಮಾತರಿಸಿ ವ್ಯಾಲ್ಯೂಏಷನ್ ಮಾಡಿಸುತ್ತಾ ಇದ್ದೀರಿ. ಇದು ನಿಜವಾಗಿಯೂ ಉಪಾಧ್ಯಾಯರುಗಳಿಗೆ ಅವಮಾನಕರ. ಯಾರೋ ಒಬ್ಬ ಉಪಾಧ್ಯಾಯರು ತಪ್ಪು ಮಾಡಿರಬಹುದು. ಸುಪೀರಿಯರ್ ಆಫೀಸರ್ ಒಬ್ಬರನ್ನು ಅವರಿರುವ ಸ್ಥಳಕ್ಕೆ ಕಳುಹಿಸಿ ಅದನ್ನು ಚೆಕ್‌ಮಾಡಿಸಬಹುದು. ಸರ್ಕಾರದವರು ಅವರ ಮೇಲೆ ನಂಬಿಕೆ ಇಡುವುದು ಒಳ್ಳೆಯದು. ಅವರಲ್ಲಿ ಅಪನಂಬಿಕೆ ಇದ್ದರೆ, ಕೋಡ್ ಸಿಸ್ಟಮ್ ತೆಗೆದುಕೊಂಡು ಬನ್ನಿ. ಅದರಂತೆ ಆನ್ಸರ್ ಪೇಪರ್ ಕಳುಹಿಸಿ ವ್ಯಾಲ್ಯುಏಷನ್ ಮಾಡಿಸಿ. ಇಂಥ ಸಣ್ಣ ವಿಷಯವನ್ನು ದೊಡ್ಡದಾಗಿ ಮಾಡಬಾರದಾಗಿತ್ತು. ಅವರ ಬೇಡಿಕೆಗಳನ್ನು ಈಡೇರಿಸುತ್ತಾರೆಂದು ಭಾವಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ ನನಗೆ ಒಂದು ಸಮಸ್ಯೆ ಇದೆ. ಸೆಕೆಂಡರಿ ಶಿಕ್ಷಣದ ಮಂತ್ರಿಗಳು ಯಾರು ? ಪ್ರೈಮರಿ ಮತ್ತು ಸೆಕೆಂಡರಿ ಶಿಕ್ಷಣದ ಮಂತ್ರಿಗಳು ಶ್ರೀಮತಿ ಇವಾ ವಾಜ್ ಎಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಈವತ್ತಿನ ದಿವಸ ಅವರು ಕಾಣುತ್ತಾ ಇಲ್ಲ. ನಮ್ಮ ಮುಂದೆ ಇರುವವರು ಯೂನಿವರ್ಸಿಟಿ ಮಂತ್ರಿಗಳು. ಉತ್ತರ ಕೊಡತಕ್ಕವರು ಯಾರೋ ಗೊತ್ತಿಲ್ಲ. ಈಗ ಇಷ್ಟೊಂದು ಗೊಂದಲಮಯ ಸಮಸ್ಯೆಯನ್ನು ಕೃತಕವಾಗಿ ಉಂಟು ಮಾಡಿದ್ದಾರೆ. ಇಡೀ ಇಪ್ಪತ್ತೇಳು ವರ್ಷದ ಇತಿಹಾಸದಲ್ಲಿ ಅಧಿಕಾರ ಗದ್ದುಗೆ ಹತ್ತಿದ ಎಲ್ಲಾ ಜನರೂ ಕೂಡ ಅಧ್ಯಾಪಕ ವರ್ಗವನ್ನು ಬಹಳ ಕನಿಷ್ಠ ಜನರೆಂದು ಕಂಡುಕೊಂಡಿದ್ದಾರೆ. ಹಳ್ಳಿಹಳ್ಳಿಯಲ್ಲಿ ಯಾವುದೇ ಸರ್ಕಾರಿ ಕೆಲಸ ಇದ್ದರೂ ಕೂಡ ಅದನ್ನು ಉಪಾಧ್ಯಾಯರ ಮೇಲೆ ಹಾಕುತ್ತಾರೆ. ಕೋಳಿ ಎಣಿಕೆಯಾಗಲಿ, ಕುರಿ ಎಣಿಕೆಯಾಗಲಿ, ಜನರ ಎಣಿಕೆಯಾಗಲೀ ಎಲ್ಲದಕ್ಕೂ, ಉಪಾಧ್ಯಾಯರು ಬೇಕು. ವ್ಯಾಲ್ಯುಯೇಶನ್ ಬಗ್ಗೆ ಅವರು ಬೇಡಿಕೆಯನ್ನು ಇಟ್ಟರೆ ನನ್ನ ಸ್ನೇಹಿತರು ಹೇಳಿದ ಹಾಗೆ ಅದನ್ನು ಗಮನಿಸಲು ಈ ಸರ್ಕಾರಕ್ಕೆ ಕಣ್ಣು ಇಲ್ಲ, ಕಿವಿಯಿಲ್ಲ, ಮೂಗಿಲ್ಲ. ನಿಷ್ಕರುಣೆಯ ಸರ್ಕಾರವನ್ನು ನಾವು ನೋಡುತ್ತಿದ್ದೇವೆ. ಅದಕ್ಕೆ ಅಧ್ಯಾಪಕ ವರ್ಗದವರು ಈವತ್ತು ಪ್ರಪ್ರಥಮ ಭಾರಿ ಹೋರಾಟದ ಮೂಲಕ ಸರ್ಕಾರಕ್ಕೆ ಎಚ್ಚರಿಕೆಯನ್ನು ಉಂಟುಮಾಡಿದ್ದಾರೆ

(ಶ್ರೀ ಕೋಣಂದೂರು ಲಿಂಗಪ್ಪ)

ಅವರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾರೂ ರಾಜಕೀಯಕ್ಕೆ ಪ್ರವೇಶ ಮಾಡಬಾರದು ಎಂದು ಸರಕಾರದವರು ಹೇಳುತ್ತಾರೆ. ಅಧ್ಯಾಪಕರು ರಾಜಕೀಯ ಪ್ರವೇಶ ಮಾಡುತ್ತಿದ್ದಾರೆಂದು ಹೇಳುತ್ತಾರೆ. ನಾನು ಒಂದು ಪ್ರಶ್ನೆ ಕೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಯಾರೊಬ್ಬ ವಿದ್ಯಾರ್ಥಿ, ವಿದ್ಯಾರ್ಥಿ ಜೀವನದಲ್ಲಿ ರಾಜಕೀಯ ಪ್ರವೇಶ ಮಾಡಬಾರದು ; ಕೆಲಸಕ್ಕೆ ಸೇರಿದ ಮೇಲೆ 58 ವರ್ಷಗಳು ಆಗುವವರೆಗೆ ರಾಜಕೀಯ ಪ್ರವೇಶ ಮಾಡಬಾರದು ಎಂದರೆ ಎಲ್ಲರೂ 58 ವರ್ಷದ ನಂತರವೇ ರಾಜಕೀಯಕ್ಕೆ ಬರಬೇಕು, ರಿಟೈರ್ ಆದವರು ರಾಜಕೀಯಕ್ಕೆ ಬರಬಹುದು ಎಂದು ತಮ್ಮ ಅಭಿಪ್ರಾಯವೇ ಎಂದು ನಾನು ಹೇಳುತ್ತೇನೆ. ಅಧ್ಯಾಪಕರು ವಿದ್ಯಾರ್ಥಿಗಳು ಸಕ್ರಿಯವಾಗಿ ರಾಜಕಾರಣದಲ್ಲಿ ಭಾಗವಹಿಸಿ ಪ್ರಜಾಪ್ರಭುತ್ವವನ್ನು ಉಳಿಸಬೇಕಾದುದು ನ್ಯಾಯಬದ್ಧವೂ, ಸೈದ್ಧಾಂತಿಕವೂ ಎಂದು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಅವರನ್ನು ರಿಟೈರ್ ಮಾಡುವುದರಿಂದ ನಿರುದ್ಯೋಗ ಸಮಸ್ಯೆಯ ನಿವಾರಣೆ ಆಗುತ್ತದೆಂದು ಹೇಳುತ್ತಾರೆ. 25 ವರ್ಷಗಳಿಂದಲೂ ತಾವು ಅಧಿಕಾರಕ್ಕೆ ಬಂದಮೇಲೆ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದರ ಬಗ್ಗೆ ಒಂದು ಚಕಾರ ಶಬ್ದವನ್ನು ಹೇಳಲಿಲ್ಲ. ಈಗತಾನೇ ಹಾಫ್ ಮಿಲಿಯನ್ ಜಾಬ್ಸ್ ಎಂದು ಹೇಳಿ ಸುಮ್ಮನೆ ಯಾರಿಗೂ ಪ್ರಯೋಜನವಿಲ್ಲದೆ ಇರತಕ್ಕ ಕೆಲಸಗಳನ್ನು ತೆಗೆದುಕೊಂಡು ಮಾಡುವುದಕ್ಕೆ ಹೊರಟಿದ್ದೀರಿ. ರಚನಾತ್ಮಕವಾದಂತಹ ಅನೇಕ ಕಾರ್ಯಕ್ರಮಗಳನ್ನು ಕೈಕೊಳ್ಳುವುದರಿಂದ ನಿರುದ್ಯೋಗ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯ ಇದೆ. ಅಧಿಕಾರ ವರ್ಗದಲ್ಲಿ ಇರತಕ್ಕವರನ್ನು 55 ಅಥವಾ 50 ವರ್ಷಕ್ಕೆ ರಿಟೈರ್ ಮಾಡುವುದರ ಮೂಲಕ 30, 40 ಸಾವಿರ ಜನಕ್ಕೆ ಉದ್ಯೋಗ ಸಿಗುತ್ತದೆಯೋ. ಮಿತ್ರರಾದ ಶ್ರೀ ಬೈರೇಗೌಡರು ಹೇಳಿದ ಹಾಗೆ ಇದನ್ನು ಎಲ್ಲಾ ಅಧಿಕಾರಿಗಳೂ ಅನ್ವಯಿಸುವುದಾದರೆ ಅನ್ವಯಿಸಲಿ. ಅಧ್ಯಾಪಕವರ್ಗದವರಿಗೆ ಮಾತ್ರ ಅನ್ವಯಿಸುವುದಾದರೆ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಾಕಿದಂತಾಗುತ್ತದೆ. ಅನೇಕರು ಮಾತನಾಡಿದ್ದನ್ನು ಗಮನದಲ್ಲಿಟ್ಟು ಕೇಳಿದೆ. ನಾನೂ ಕೂಡ ಬೆಂಗಳೂರಿನಲ್ಲಿ ಪ್ರೌಢ ಶಾಲೆಯಲ್ಲಿ ಉಪಾಧ್ಯಾಯನಾಗಿ ಹತ್ತು ವರ್ಷ ಕೆಲಸ ಮಾಡಿ ಅನುಭವ ಇದೆ. ಮೂರುಸಾರಿ ವ್ಯಾಲ್ಯುಯೇಷನ್‌ಗೆ ಹೋಗಿದ್ದೆ. ಆಗಿನಿಂದಲೂ 75 ಪೈಸೆ ಸಾಲದು 1 ರೂಪಾಯಿ ಕೊಡಿ ಎಂದು ಕೇಳಿಕೊಂಡು ಬಂದಿದ್ದಾರೆ. ಹಾಗೆ ಕೇಳಿದವರ ಪೈಕಿ ನಾನೂ ಒಬ್ಬ. ಇದರ ಬಗ್ಗೆ ಯಾರು ಗಮನ ಕೊಟ್ಟಿಲ್ಲ. ಇಂದಿರಾಗಾಂಧಿಯವರ ಗರೀಬಿ ಹಟಾವೋ ಕಾಲದಲ್ಲಿ ಬೆಂಗಳೂರಿನಲ್ಲಿ ಅಶೋಕ ಹೋಟೆಲಿನಲ್ಲಿ ಒಂದು ಲೋಟ ಕಾಫಿಗೆ 2 ರೂಪಾಯಿ 75 ಪೈಸೆ ಕೊಡಬೇಕು. ಈವತ್ತಿನ ದಿವಸ ಬೆಂಗಳೂರಿನಲ್ಲಿ ಕಾಫಿ, ತಿಂಡಿ, ಊಟ ಮಾಡಲಿಕ್ಕೆ ದುರ್ಬರವಾಗಿರುವ ಈ ಸಂದರ್ಭದಲ್ಲಿ 6, 8 ರೂಪಾಯಿ ಕೊಟ್ಟರೆ ಅವರು ಜೀವನ ಮಾಡುವುದು ಹೇಗೆ ಸಾಧ್ಯ? ಮೌಲ್ಯಮಾಪನ ವ್ಯವಸ್ಥೆಯನ್ನು ವಿಕೇಂದ್ರೀಕೃತಗೊಳಿಸುವ ಬಗ್ಗೆ ನನ್ನ ಸ್ನೇಹಿತರು ಹೇಳಿದ್ದಾರೆ. ಆ ಬಗ್ಗೆ ವಿಚಾರ ಮಾಡಬೇಕು. ಹಿಂದೆ ಬಹಳಸಾರಿ ಅನೇಕ ಲೋಪದೋಷಗಳು ಕಂಡುಬಂದಿದ್ದರಿಂದ ಕೇಂದ್ರೀಕೃತ ಮೌಲ್ಯಮಾಪನ ವ್ಯವಸ್ಥೆಯನ್ನು ಯೋಚನೆ ಮಾಡಿದರು. ನನ್ನ ಸ್ನೇಹಿತರಾದ ಗುರುಸಿದ್ದಪ್ಪನವರು ಹೇಳಿದಹಾಗೆ ನಾವು ಉಪಾಧ್ಯಾಯರಲ್ಲಿ ನಂಬಿಕೆ ಇಡಬೇಕು. ಅಧ್ಯಾಪಕರ ವರ್ಗದಲ್ಲಿ ನಂಬಿಕೆ ಇಲ್ಲದವರು ಗುರುವಿಗೆ ತಿರುಮಂತ್ರ ಹಾಕುವವರು ವಿಧಾನಸೌಧ ಕಲ್ಲಿನ ಕಟ್ಟಡದಲ್ಲಿ ಪ್ರಾರ್ಥನೆ ಭಜನೆ ಮಾಡಿದರೆ ಇದು ಕರಗುವುದಿಲ್ಲ. ಮಣ್ಣಿನ ಕಟ್ಟಡವಾಗಿದ್ದರೆ ಕರಗಬಹುದು. ಆದರೆ ವಿಧಾನಸೌಧ ಕಲ್ಲಿನ ಕಟ್ಟಡ. ಅದಕ್ಕೆ ಸುತ್ತಿಗೆ ಚಾಣದ ಏಟು ಹೊಡೆಯಬೇಕು. ಅಧ್ಯಾಪಕವರ್ಗದವರು ಏನು ಹೋರಾಟ ಮಾಡಿದ್ದಾರೆ ಅದು ಯಶಸ್ವಿಯಾಗಲೀ ಎಂದು ಹಾರೈಸುತ್ತೇನೆ. ಸರ್ಕಾರದವರು ಅಧ್ಯಾಪಕರ ಬೇಡಿಕೆಗಳನ್ನು ಇತ್ಯರ್ಥಮಾಡಿ, ಅದಕ್ಕೆ ಇತಿಶ್ರೀ ಹಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ (ವಿದ್ಯಾಶಾಖೆಯ ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷಣಿಯವರೇ, ಹಾಗೂ ಘನವನ್ನು ಹೊಂದಿದ ಸನ್ಮಾನ್ಯ ಸಭಾಸದಸ್ಯರೆ, ಈವತ್ತಿನ ದಿವಸ ಮಾನ್ಯ ವಿರೋಧಪಕ್ಷದ ನಾಯಕರಾದಂಥ ಶ್ರೀ ದೇವೇಗೌಡರು ಯಾವ ಒಂದು ನಿಲುವಳಿ ಸೂಚನೆಯನ್ನು ಈ ಸಭೆಯ ಮುಂದಿಟ್ಟಿದ್ದಾರೋ ಅದರ ಮೇಲೆ ತಮ್ಮ ಅನುಮತಿ ಪ್ರಕಾರ ಚರ್ಚೆ ಇವತ್ತಿನ ದಿವಸ ನಡೆದಿದೆ. ಮಾನ್ಯ ಸದಸ್ಯರು ಉಪಾಧ್ಯಾಯರ ವಿಷಯದಲ್ಲಿ ಹಾಗೂ ಉಪಾಧ್ಯಾಯರ ವೃತ್ತಿಯ ವಿಷಯದಲ್ಲಿ ಬಹಳ ಗೌರವವಾಗಿ ಮಾತುಗಳನ್ನು ಹೇಳಿದ್ದಾರೆ. ಅದು ಅವರಿಗೆ ನ್ಯಾಯವಾಗಿ ಸಲ್ಲತಕ್ಕದ್ದು. ಅದರಲ್ಲಿ ನಾನು ವಿದ್ಯಾ ಸಚಿವನಾಗಿ ಈ ಒಂದು ವಿದ್ಯಾಭ್ಯಾಸದ ಇಲಾಖೆಯ ಕರ್ತ ಇದ್ದಹಾಗೆ.

5-00 P. M.

ಅದರ ಜೊತೆಗೆ, ಆಡಳಿತ ಮಾಡತಕ್ಕಂಥ ಪಕ್ಷಕ್ಕೇ ಆಗಲಿ ಅಥವಾ ವಿರೋಧ ಪಕ್ಷಕ್ಕೇ ಆಗಲಿ ಯಾವ ಒಬ್ಬರಿಗೂ ಉಪಾಧ್ಯಾಯರು ಸೇರಿದವರಲ್ಲ. ಅವರು ಎಲ್ಲರಿಗೂ ಸೇರಿದವರು, ಅವರಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯವೂ ಕೂಡ ಇಲ್ಲ. ಅವರು ನಮ್ಮ ಶಿಕ್ಷಕರು ಎಂದು ಮಾನ್ಯ ದೇವೇಗೌಡರು ಹೇಳಿದರು, ನಾನು ಅವರಿಗೆ ಹೇಳುತ್ತೇನೆ, ಅವರು ನಮ್ಮ ಶಿಕ್ಷಕರೂ ಹೌದು. ಉಪಾಧ್ಯಾಯ ವೃತ್ತಿ ಎಂಥಾದ್ದು ಎನ್ನತಕ್ಕಂಥಾದ್ದನ್ನು ಹೇಳುವಾಗ ಇರತಕ್ಕ ಸಂಕಷ್ಟಗಳು ಏನು ಎಂದು ಕೂಡ ಅವರು ಹೇಳಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷೆಗಳ ಮೌಲ್ಯಮಾಪನಕ್ಕೆ ಸಂಬಂಧಪಟ್ಟ ಕೆಲಸವನ್ನು ಉಪಾಧ್ಯಾಯರುಗಳು ಒಪ್ಪಿಕೊಂಡು ಅವರು ಈ ಊರಿಗೆ ಬಂದರು. ಅವರು ಏಳು ಸಾವಿರ ಉಪಾಧ್ಯಾಯರುಗಳು ಎಂದು ಹೇಳಿದರು. ಅದು ಸರಿಯಲ್ಲ, ಅವರು 5,600 ಉಪಾಧ್ಯಾಯರುಗಳು ಒಂದು ಗೊತ್ತಾದಂಥ ಶುಲ್ಕವನ್ನು ತೆಗೆದುಕೊಂಡು ನಾವು ಮೌಲ್ಯಮಾಪನ ಮಾಡುತ್ತೇವೆ ಎನ್ನತಕ್ಕ ಅರ್ಜಿಯನ್ನು ಉಪಾಧ್ಯಾಯರು ಹಾಕಿಕೊಂಡು ಈ ಕೆಲಸವನ್ನ ಅವರು ಒಪ್ಪಿಕೊಂಡು ಬೆಂಗಳೂರು ನಗರಕ್ಕೆ ಬಂದರು. ಬರುವಾಗ ಅವರು ತಮ್ಮ ಸ್ವಂತ ಹಣದಿಂದ ವ್ಯವಸ್ಥೆಯನ್ನು ಮಾಡಿಕೊಂಡು ಬಂದರೋ ಅಥವಾ ಬೇರೆಯವರಿಂದ ಸಾಲವನ್ನು ತೆಗೆದುಕೊಂಡು ಬಂದರೋ ಅದು ಅವರಿಗೆ ಗೊತ್ತು. ತೊಂದರೆ ಇದೆ, ಇಲ್ಲ ಎಂದು ನಾನು ಹೇಳುವುದಿಲ್ಲ. ಈಗ ಈ ಸಭೆಯ ಮುಖಾಂತರವಾಗಿ ನಾನು ಉಪಾಧ್ಯಾಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಉಪಾಧ್ಯಾಯರ ಏನು ಒಂದು ವೃತ್ತಿ ಇದೆ ಅವರ ಕರ್ತವ್ಯ ಏನು ಎನ್ನತಕ್ಕಂಥಾದ್ದನ್ನು ಉಪಾಧ್ಯಾಯರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಪಾಠ ಪ್ರವಚನಗಳನ್ನು ಮಾಡುವುದು, ಅದರ ಜೊತೆಗೆ ಪರೀಕ್ಷೆಗಳನ್ನು ವರ್ಷದ ಅಂತ್ಯದಲ್ಲಿ ನಡೆಸತಕ್ಕಂಥಾದ್ದು, ಮತ್ತು ಪರೀಕ್ಷೆಗಳಾದ ಮೇಲೆ ಪರೀಕ್ಷಾ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡತಕ್ಕದ್ದು ಒಂದು ಅವಿಭಾಜ್ಯ ಕರ್ತವ್ಯ ಎನ್ನತಕ್ಕದ್ದನ್ನು ಉಪಾಧ್ಯಾಯರು ಯಾರೂ ಮರೆಯಕೂಡದು. ನಾನು ಎರಡು ವರ್ಷಗಳ ಕಾಲ ಕಾಲೇಜಿನ ಉಪಾಧ್ಯಾಯನಾಗಿದ್ದೆ. ನಾನು ಒಂದು ಮಾತನ್ನು ಹೇಳಬೇಕಾದರೆ ಉಪಾಧ್ಯಾಯರು ಪರೀಕ್ಷಾ ಮಂಡಳಿಯೊಡನೆ ಒಂದು ಒಪ್ಪಂದಕ್ಕೆ ಬಂದಿದ್ದು ಈ ಕೆಲಸವನ್ನು ಮಾಡುವುದಕ್ಕೆ ಒಪ್ಪಿಕೊಂಡು ಬಂದಮೇಲೆ ಅವರು ಈ ಕೆಲಸವನ್ನು ಸಂತೋಷದಿಂದ ಮಾಡಬೇಕಾಗಿತ್ತು. ಹಾಗೆ ಮಾಡುವುದಕ್ಕೆ ಕೂಡ ಬಹುಭಾಗದ ಉಪಾಧ್ಯಾಯರು ತಯಾರಾಗಿದ್ದರು. ಆದರೆ ಈ ಪ್ರಶ್ನೆಯನ್ನು ದೊಡ್ಡ ಪ್ರಶ್ನೆಯನ್ನಾಗಿ ಮಾಡಿಕೊಂಡು ಇದಕ್ಕೆ ರಾಜಕೀಯ ಬಣ್ಣವನ್ನು ಕೊಟ್ಟು ಅದರಿಂದ ಪ್ರಯೋಜನವನ್ನು ಪಡೆಯಬೇಕು ಎಂಬತಕ್ಕಂಥ ಉದ್ದೇಶ ಇದರ ಹಿಂದುಗಡೆ ಇದೆಯೆಂದು ಹೇಳಿದರೆ ಅದು ತಪ್ಪಾಗಲಾರದು.

ಶ್ರೀ ಎಸ್. ಬಂಗಾರಪ್ಪ.—ಯಾರು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಬಂಗಾರಪ್ಪನವರು ಇದು ರಿಯಾಕ್ಷನರೀಜ್ಕ್ಕೆಗೆ ಹೋಗಿದೆ ಎನ್ನತಕ್ಕ ಮಾತನ್ನು ಹೇಳಿದರು. ಅದೇ ಅವರಿಗೆ ಉತ್ತರ ಆಯಿತು. ಆರ್ಥಿಕವಾಗಿ ಉಪಾಧ್ಯಾಯರ ಸ್ಥಿತಿ ಏನು ಎಂಬುದನ್ನೂ ಕೂಡ ಅವರು ಚರ್ಚೆ ಮಾಡಿದ್ದಾರೆ. ಬಹಳ ಸಂತೋಷ. ಮಾನ್ಯ ಸದಸ್ಯರು ಇಷ್ಟೊಂದು ಕಳಕಳಿಯಿಂದ ಉಪಾಧ್ಯಾಯರ ವಿಷಯದಲ್ಲಿ, ಅವರ ಮೇಲ್ಮೆಯ ವಿಷಯದಲ್ಲಿ ಏನು ಚರ್ಚೆ ಮಾಡಿದ್ದಾರೋ ಅದನ್ನು ಯಾರೂ ಅಲ್ಲಗಳೆಯುವ ಹಾಗಿಲ್ಲ. ಈ ಒಂದು ಮಾತನ್ನು ನಮ್ಮ ಪಕ್ಷದ ಸದಸ್ಯರೂ ಕೂಡ ಹೇಳಿದರು. ಈ ರಾಷ್ಟ್ರದಲ್ಲಿ ಅದರ ಜೊತೆಗೆ ನಮ್ಮ ರಾಜ್ಯದಲ್ಲಿ ಬಡತನ ಗೆರೆಯ ಕೆಳಗೆ ಬರತಕ್ಕವರು ಸುಮಾರು 140 ಲಕ್ಷ ಜನರು ಇದ್ದಾರೆ. ಅದನ್ನು ನಾವು ಯಾರೂ ಮರೆಯುವ ಹಾಗಿಲ್ಲ. Goods and services constitute the wealth—wealth goes to those who have the capacity to pay for it, *i.e.*, still we are in price mechanism society though we have accepted socialism as our goal and democracy as our method. ಅಂದಮೇಲೆ ಉಪಾಧ್ಯಾಯರು ಯಾರು ಇದ್ದಾರೆ, ಸರ್ಕಾರದ ಹುದ್ದೆ ಮಾಡತಕ್ಕ ಅಧಿಕಾರಿಗಳು ಯಾರು ಇದ್ದಾರೆ, ಒಂದು ಸ್ಥಳದಲ್ಲಿಯೋ ಅಥವಾ ವಿಧಾನಸೌಧದಲ್ಲಿಯೋ ಅಥವಾ ತಮ್ಮ ಕಚೇರಿಯಲ್ಲಿರತಕ್ಕ 4ನೇ ದರ್ಜೆ ನೌಕರರು ಕೂಡ ಈ ಭರತಖಂಡದಲ್ಲಿ ಇರತಕ್ಕ 100 ಜನಕ್ಕೆ 10 ಜನ ಶ್ರೀಮಂತರು ಯಾರು ಇದ್ದಾರೆ ಅವರ ಅಡಿಯಲ್ಲಿ ಬರುತ್ತಾರೆ. ಈ 10 ಜನ ಯಾರು ಇದ್ದಾರೆ ಅವರು ಉತ್ಪತ್ತಿಯಾಗುವ ಬಳಕೆಯ ಸಾಮಾನುಗಳು ಏನು ಇವೆ ಅದರಲ್ಲಿ 30-40 ಭಾಗವನ್ನು ಉಪಯೋಗಿಸುತ್ತಿದ್ದಾರೆ. ಅಂತಹ ಪರಿಸ್ಥಿತಿಯನ್ನು ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು. ರಾಷ್ಟ್ರದ ಆದಾಯ ಜಾಸ್ತಿ ಆದರೆ ಆಗ ಸಾಮಾನ್ಯವಾಗಿ ಎಲ್ಲರ ಪರಿಸ್ಥಿತಿ ಕೂಡ ಉತ್ತಮವಾಗಿ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಇರುತ್ತದೆ. ನಾವು ನೀವು ಎಲ್ಲರೂ ಕೂಡ ಪ್ರಯತ್ನ ಮಾಡಿ ಇರತಕ್ಕ ನೈಸರ್ಗಿಕ ಮತ್ತು ಪ್ರಕೃತಿ ದತ್ತವಾದ ಸಂಪಾದನೆಯನ್ನು ಉಪಯೋಗಿಸಿಕೊಂಡು ಅವುಗಳಿಗೆ ಪ್ರಯೋಜನವನ್ನು ಸೇರಿಸಿ By adding utility to the natural wealth, ಆದಾಯವನ್ನು ಜಾಸ್ತಿ ಮಾಡಿ ದೊಡ್ಡ ಕೆಲಸವನ್ನು ಮಾಡಬೇಕಾಗಿದೆ. ನಮ್ಮ ರಾಷ್ಟ್ರ ದೊಡ್ಡ ರಾಷ್ಟ್ರ. ನಮ್ಮ ಸಮಸ್ಯೆಗಳೂ ಕೂಡ ದೊಡ್ಡ ಸಮಸ್ಯೆಗಳು. ಇದು ನಮ್ಮ ಮಾನ್ಯ ಸದಸ್ಯರಿಗೂ ಗೊತ್ತಿರತಕ್ಕದ್ದು. ಏನು ಒಂದು ಕೆಲಸವನ್ನು ಮಾಡುವುದಕ್ಕೆ ಸಂತೋಷದಿಂದ ಒಪ್ಪಿಕೊಂಡು ಬಂದಂಥ ಉಪಾಧ್ಯಾಯರು ಅನೇಕ ಅಡ್ಡಿ ಆತಂಕಗಳನ್ನು ಮಾಡಿರುವುದು ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ನೀವು ಮಾಲ್ಯಮಾಪನ ಮಾಡುವುದಾದರೆ ನಿಮ್ಮ ಕಾಲನ್ನು ಮುರಿದು ಹಾಕುತ್ತೇವೆ. ನಿಮ್ಮ ಕೊಲೆಯನ್ನು ಮಾಡುತ್ತೇವೆ ಎಂಬುದಾಗಿ ಹೆದರಿಕೆ ಬೆದರಿಕೆಯನ್ನು ಹಾಕಿ, ಕೆಲಸವನ್ನು ಸುಗಮವಾಗಿ ನಡೆಯುವುದಕ್ಕೆ ಬಿಡದೆ ಇರತಕ್ಕ ಯಾವ ಒಂದು ರಾಜಕೀಯ ಉದ್ದೇಶ ಇದೆ. ಆ ಉದ್ದೇಶವನ್ನು ಯಾರೇ ಆಗಲೀ ಪ್ರಾಜ್ಞಶಾಲಿಗಳು ಒಪ್ಪುವುದಿಲ್ಲ ಎನ್ನುವ ಮಾತನ್ನು ಉಪಾಧ್ಯಾಯ ವರ್ಗಕ್ಕೆ ಈ ಸಭೆಯ ಮುಖಾಂತರ ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾವ ರಾಜಕೀಯ ಪಕ್ಷಗಳು ಎಂಬುದನ್ನು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ರಾಜಕೀಯ ಉದ್ದೇಶ ಎಂದು ಹೇಳಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಯಾರು ಹೇಳಿ ? ಯಾವ ಪಕ್ಷವೆಂದು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದನ್ನು ಯಾರೇ ಮಾಡಲಿ, ಸತ್ಯಾಗ್ರಹದ ಗುರಿ ಒಳ್ಳೆಯ ಗುರಿ ಆಗಿರಬೇಕು. ಇದರ ಜೊತೆಗೆ ಗುರಿಯನ್ನು ಸಾಧಿಸುವುದಕ್ಕೆ ಉಪಯೋಗಿಸತಕ್ಕಂಥ ಸಾಧನೆಗಳು ಏನು ಇವೆ, ಆ ಸಾಧನೆಗಳು ಕೂಡ ಅಪೇಕ್ಷಣೀಯವಾದಂಥ ಸಾದನೆಗಳು ಆಗಿರ ಕೂಡದು. ಆಗಮಾತ್ರ ಆದರ್ಶಗಳು ಹಾಳಾಗುವುದಿಲ್ಲ, ಮತ್ತು ಆ ಗುರಿಯನ್ನು ನೇರವಾಗಿ ತಲುಪುವುದಕ್ಕೆ ಸಾಧ್ಯ. ಗಾಂಧೀಜಿಯವರು ಹೇಳಿದರು.

'undesirable means should not be used to reach good ends'

ಎಂದು. ಆದುದರಿಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಉಪಾಧ್ಯಾಯರು ಇಷ್ಟಂಥ ಬೇಡಿಕೆಗಳು ಏನಿವೆ ಆ ಬೇಡಿಕೆಗಳನ್ನು ಮಾರ್ಚ್ ತಿಂಗಳಲ್ಲಿ ಸೆಕೆಂಡರಿ ಸ್ಕೂಲ್ ಅಸೋಸಿಯೇಷನ್‌ನವರು ಇಟ್ಟರು.

ಆದರೆ ಸರ್ಕಾರದ ಗಮನಕ್ಕೆ ಬಂದಿದ್ದು ಯಾವಾಗ ? ಅಸೆಂಬ್ಲಿ, ಕೌನ್ಸಿಲ್‌ಗಳು ಮುಗಿದ ಮೇಲೆ ಸರ್ಕಾರಕ್ಕೂ, ನನಗೂ ಒಂದು ಕಾಗದವನ್ನು ಬರೆದು ಕೊಟ್ಟರು. ಸಮಸ್ಯೆ ಇಲ್ಲದೇ ಇದ್ದರೆ, ಸರ್ಕಾರವಾಗಲಿ, ವೈಯುಕ್ತಿಕ ಜೀವನರಂಗದಲ್ಲೇ ಆಗಲಿ ನಾವು ಎದುರಿಸ ತಕ್ಕಂಥಾದ್ದು ಏನಿದೆ ? ಆದುದರಿಂದ ಯಾವಾಗಲೂ ಕೂಡ ಸಮಸ್ಯೆಗಳನ್ನು ಎದುರಿಸತಕ್ಕಂಥ ಹೊಣೆ, ರಾಜಕೀಯ, ಸಾಮಾಜಿಕ ಹಾಗೂ ನೈತಿಕ ಹೊಣೆ ಸರ್ಕಾರದ ಮೇಲೆ ಇರತಕ್ಕದ್ದು ಎಂದು ನಾವು ಕೂಡ ಅರಿಕೆ ಮಾಡಿಕೊಂಡಿದ್ದೇವೆ. ಉಪಾಧ್ಯಾಯರ ಸಂಘದವರು ಬಂದು ನಿಮ್ಮನ್ನು ನೋಡಬೇಕು ಎಂದು ಇದ್ದೇವೆ, ಮನವಿ ಕೊಡಬೇಕು ಎಂದು ಕೇಳಿದರು. ಅದಕ್ಕೆ ನಾವು ಒಪ್ಪಿ ಕೊಂಡು ಬನ್ನಿ ಎಂದು ಹೇಳಿದೆವು. ಅದೇ ಪ್ರಕಾರವಾಗಿ ಅವರು ಬಂದರು. ಸುಮಾರು 5 ಗಂಟೆಗಳ ಕಾಲ ಚರ್ಚೆ ನಡೆಯಿತು ನಾನು ಹೆಚ್ಚಿಗೆ ಮಾತನಾಡಲಿಲ್ಲ. ಬೇಕಾದರೆ ಅವರನ್ನೇ ಕೇಳಿ. ಅಂದಮೇಲೆ 5 ಗಂಟೆಗಳ ಕಾಲದಲ್ಲಿ ಅವರು ಈ 11 ಬೇಡಿಕೆಗಳನ್ನು ತಾವು ಪ್ರಮುಖ ವಾಗಿ ಗಮನಕ್ಕೆ ತೆಗೆದುಕೊಂಡು ತೀರ್ಮಾನವನ್ನು ಕೊಡಬೇಕು ಎಂದು ಹೇಳಿದರು. ಪ್ರಮುಖ ವಾಗಿ ನಿವೃತ್ತಿ ವಯಸ್ಸಿಗೆ ಸಂಬಂಧಪಟ್ಟ ಪ್ರಶ್ನೆ ಬಹಳ ಮುಖ್ಯವಾದುದು ಎಂದು ಪೀಠಿಕೆಯಲ್ಲೇ ಪ್ರಾರಂಭಮಾಡಿದರು. ನಾನು ಅವರಿಗೆ ವಿನಂತಿ ಮಾಡಿದೆ. ಈ ಒಂದು ಪ್ರಶ್ನೆ ಈಗಾಗಲೇ ಸರ್ಕಾರದ ನೀತಿಗೆ ಸಂಬಂಧಪಟ್ಟ ಪ್ರಶ್ನೆ, ಇದರ ಬಗ್ಗೆ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ. ಆ ತೀರ್ಮಾನದಲ್ಲಿ ನಾನು ಕೂಡ ಭಾಗಿಯಾಗಿದ್ದೇನೆ. ಇದು ಸರ್ಕಾರಿ ಹುದ್ದೆಯಲ್ಲಿ ಕೆಲಸಮಾಡ ತಕ್ಕಂಥ ಎಲ್ಲಾ ಜನರ ನಿವೃತ್ತಿ ವಯಸ್ಸಿಗೂ ಕೂಡ ಸಂಬಂಧಪಟ್ಟ ಪ್ರಶ್ನೆ ಇದೆ. ಅವರು ಐ. ಎ. ಎಸ್. ಮತ್ತು ಐ. ಪಿ. ಎಸ್. ಆಫೀಸರ್‌ಸ್ ಮತ್ತು ಜಡ್ಜ್‌ಸ್‌ಗೆ ಬೇರೆ ಬೇರೆ ರೀತಿ ನಿವೃತ್ತಿ ವಯಸ್ಸು ಜಾಸ್ತಿ ಇದೆ ಎಂದು ಹೇಳಿದರು. ಆಗ ಅವರಿಗೆ ಉತ್ತರ ಹೇಳಿದೆ. ಇವತ್ತೂ ಕೂಡ ಸನ್ಮಾನ್ಯ ಸದಸ್ಯರೊಬ್ಬರು ಮಾತನಾಡುವಾಗ ಸುಪ್ರೀಂಕೋರ್ಟ್ ಜಡ್ಜ್‌ಸ್‌ಗೆ ನಿವೃತ್ತಿ ವಯಸ್ಸು

65 ವರ್ಷ ಇದೆ, ನಮ್ಮ ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಿಗೆ 62 ವರ್ಷ ಇದೆ, ಜಿಲ್ಲಾ ನ್ಯಾಯಾಧೀಶರಿಗೆ 58 ವರ್ಷ ಇದ್ದದ್ದು 55 ವರ್ಷ ಮಾಡಿದ್ದಾರೆ. ಐ. ಎ. ಎಸ್, ಐ. ಪಿ. ಎಸ್. ಆಫೀಸರ್ಸ್‌ಗೆ ಎಷ್ಟು ವರ್ಷ ಇದೆ ಎಂದು ಅಂಕೆಸಂಖ್ಯೆ ಕೂಡ ಗಮನಕ್ಕೆ ತೆಗೆದುಕೊಂಡು, ನಾವು ಒಂದು ತೀರ್ಮಾನವನ್ನು ತೆಗೆದುಕೊಂಡು ಜಡ್ಜಸ್ ವಗೈರೆ ಸಂಬಂಧಪಟ್ಟದ್ದು ನಮ್ಮ ಕೈಯಲ್ಲಿಲ್ಲ, ಆದರೆ ನಮ್ಮ ಸರ್ಕಾರಿ ನೌಕರರ ಉಪಾಧ್ಯಾಯರ ಒಂದು ನಿವೃತ್ತಿ ವಯಸ್ಸು 1954ರಲ್ಲಿ ಉಪಾಧ್ಯಾಯರಿಗೆ ಸಂಬಂಧಪಟ್ಟದ್ದನ್ನು ದಿವಂಗತ ಎ. ಜಿ. ರಾಮಚಂದ್ರರಾಯರು ಆಗ ಒಂದು ತೀರ್ಮಾನವನ್ನು ತೆಗೆದುಕೊಂಡು, ನಿವೃತ್ತಿ ವಯಸ್ಸು 58 ಎಂದು ಮಾಡಿದರು. ಒಂದು ಸಾರಿ ಕೊಡತಕ್ಕದ್ದಲ್ಲ, ವರ್ಷೇವರ್ಷೇ ಕೊಡತಕ್ಕದ್ದು ಇದರ ಜೊತೆಗೆ ಟ್ರೈನಿಂಗನ್ನು ಕೂಡ ಅವರಿಗೆ ಕೊಡತಕ್ಕ ವ್ಯವಸ್ಥೆ ಮಾಡಬೇಕು ಎನ್ನತಕ್ಕ ದೃಷ್ಟಿಯಿಂದ ತೀರ್ಮಾನವನ್ನು ತೆಗೆದುಕೊಂಡರು. ಮೊದಲು 58 ವರ್ಷ ಇದ್ದದ್ದು ಹಾಗೆ ಉಳಿದುಕೊಂಡು ಬಂದಿತು. ಇವತ್ತು ಸರ್ಕಾರ ಬದಲಾಯಿಸಿರತಕ್ಕ ಪರಿಸ್ಥಿತಿ ಬಿ. ಇ. ಪದವಿಧರರು ಪ್ರಶಸ್ತಿಯನ್ನು ತೆಗೆದುಕೊಂಡು ಹೊರಗೆ ಬರತಕ್ಕ ಉಪಾಧ್ಯಾಯರ ನಿರುದ್ಯೋಗ ಸಮಸ್ಯೆ ಎಷ್ಟರಮಟ್ಟಿಗೆ ಉಲ್ಬಣವಾಗುತ್ತಾ ಇದೆ, ಬೆಳೆಯುತ್ತಾ ಇದೆ, ಬೆಳೆಯುತ್ತಾ ಇದೆ, ಜನರ ಆಯಸ್ಸು ಜಾಸ್ತಿಯಾಗಿದೆ ಎನ್ನುವ ವಾದ ಒಂದು ಕಡೆ ಇದೆ. ಹೆಣ್ಣು ಮಕ್ಕಳು, ಗಂಡುಮಕ್ಕಳು ಬಹಳ ಬೇಗ ಬೆಳೆದು ಮುದುಕರಾಗುತ್ತಿದ್ದಾರೆ ಎನ್ನವ ವಾದ ಒಂದು ಕಡೆ ಇದೆ. ಆದುದರಿಂದ ನಾನು ಹೇಳುತ್ತೇನೆ. ಈ ಸಂದರ್ಭದಲ್ಲಿ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಈಗಾಗಲೇ ನಮ್ಮ ಕರ್ನಾಟಕ ರಾಜ್ಯ ನ್ಯಾಯಾಲಯದ ಮುಂದೆ ರಿಟ್ ಪಿಟಿಷನ್ಸ್ ಕೂಡ ಇವೆ. ಕೆಲವು ವಜಾ ಮಾಡಿದ್ದಾರೆ. ಇನ್ನು ಕೆಲವು ಕೂಡ ಹಾಗೆ ಇವೆ. ಅದು ಫುಲ್ ಬೆಂಚಿಗೆ ಹೋಗುತ್ತದೋ ಏನೋ ಅದು ಇನ್ನು ಅಧಿಕೃತವಾಗಿ ಗೊತ್ತಿಲ್ಲ. ಮಾನ್ಯ ಮಿತ್ರರಾದ ನಯನಕ್‌ರವರು ಆ ಒಂದು ಪ್ರಶ್ನೆಯನ್ನು ಹೇಳಿದ್ದಾರೆ. ಅಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ, ಈ ಒಂದು ಪ್ರಶ್ನೆಯನ್ನು ಮತ್ತೆ ಪುನರ್ಪರಿಶೀಲನೆ ಮಾಡಬೇಕು, ಎಂದು. ಪರಿಶೀಲನೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಅವರಿಗೆ ತಿಳಿಸಿದ್ದೇನೆ. ಅದೇ ಒಂದು ತೀರ್ಮಾನ ಈಗಲೂ ಕೂಡ ಇದೆ. ಅದೇ ಸರ್ಕಾರದ ಒಂದು ಅಂತಿಮವಾದ ನಿಲುವು ಎಂದು ನಾನಾದರೂ ಮತ್ತೆ ಪುನರುಚ್ಚರಿಸುತ್ತೇನೆ.

ಎರಡನೆಯದಾಗಿ; ಅವರಿಗೆ ಬರಬೇಕಾದ ರೆಮ್ಯುನರೇಷನ್ 30 ವರ್ಷಗಳ ಹಿಂದೆ ಪರೀಕ್ಷೆಗಳು ಪ್ರಾರಂಭವಾದಾಗ ಇದ್ದ ಒಂದು ಶುಲ್ಕ ಇದೆ. ಸರ್ಕಾರದವರು ಅದನ್ನು ಗಣನೆಗೆ ತೆಗೆದುಕೊಳ್ಳಬೇಕು ಎನ್ನುವ ಒಂದು ಬೇಡಿಕೆ ಇತ್ತು. ಅದನ್ನು ಮಾನವೀತೆಯ ದೃಷ್ಟಿಯಿಂದ ನಾನು ನನ್ನ ಸಚಿವಾಲಯದ ಅಧಿಕಾರಿಗಳ ಸಿಬ್ಬಂದಿಯನ್ನು ಕರೆದು ಅವರೊಡನೆ ಸುಧೀರ್ಘವಾದಂಥ ಚರ್ಚೆಯನ್ನು ಮಾಡಿದ ಮೇಲೆ ಅವರು ಒಂದು ಸಲಹೆಯನ್ನು ಕೊಟ್ಟರು. ಆ ಸಲಹೆಯನ್ನು ಪರಿಶೀಲನೆ ಮಾಡಿ ನಾನು ವಿದ್ಯಾ ಇಲಾಖೆಯ ಸಚಿವನಾಗಿ ಈ ಒಂದು ತೀರ್ಮಾನವನ್ನು ತೆಗೆದುಕೊಂಡೆನು, 75 ಪೈಸೆ ಇರತಕ್ಕದ್ದನ್ನು 100 ಪೈಸೆ ಅಥವಾ ಒಂದು ರೂಪಾಯಿಗೆ ಏರಿಸಬೇಕು ಎಂದು 2 ರೂಪಾಯಿಯನ್ನು ಪಟ್ಟಣದಲ್ಲಿರತಕ್ಕವರಿಗೆ ಕೊಡುತ್ತಾ ಇದ್ದೀರಿ, ಅದು ಸಾಲುವುದಿಲ್ಲ ಎಂದು ಹೇಳಿದರು. 1973ನೇ ಇಸವಿ ಏಪ್ರಿಲ್ ಮಾಹೆ 1ನೇ ತಾರೀಖಿನವರೆಗೆ ಏನನ್ನೂ ಕೊಡುತ್ತಾ ಇರಲಿಲ್ಲ, ಪಟ್ಟಣದಲ್ಲಿ ಬಂದು ಮೌಲ್ಯಮಾಪನ ಮಾಡುವವರಿಗೆ. ಪ್ರಪ್ರಥಮವಾಗಿ ಬೋರ್ಡಿನವರು ಈ ತೀರ್ಮಾನ ತೆಗೆದುಕೊಂಡು ಅವರಿಗೆ ಕೊಟ್ಟರು. ಆದುದರಿಂದ ಅದನ್ನೂ ಕೂಡ ನಾವು ಹೆಚ್ಚಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆ. ಅನೇಕ ಉಪಾಧ್ಯಾಯರು ಪಟ್ಟದಲ್ಲಿ ಏನೂ ಕೊಡದೇ ಇದ್ದಾಗ, 2 ರೂಪಾಯಿ ಕೊಡುತ್ತಿದ್ದಾರೆ ಎಂದು ಸಂತೋಷ ವ್ಯಕ್ತಪಡಿಸಿರುವಂಥಾದ್ದಕ್ಕೆ ಕೂಡ ಈ ಸಭೆಯಲ್ಲಿ ಬಹಳ ಸಂತೋಷ ಎಂದು ಹೇಳುತ್ತೇನೆ. 10 ರೂಪಾಯಿ ಡಿ. ಎ. ಕೊಡಬೇಕು ಎಂಬ ಒಂದು ಪ್ರಮುಖವಾದ ಪ್ರಶ್ನೆಯನ್ನು ಅವರು ಇಟ್ಟಿದ್ದಾರೆ. ಡಿ. ಎ. ಪ್ರಶ್ನೆ ಹೇಳಿದರೆ, ನಮ್ಮ ಕರ್ನಾಟಕ ಸಿವಿಲ್ ಸರ್ವಿಸ್ ರೂಲ್ಸ್ ಪ್ರಕಾರವಾಗಿ ಅದನ್ನು ತನ್ನದೇ ಆದಂಥ ಸ್ವಾಯತ್ತತೆವುಳ್ಳಂಥ ಪರೀಕ್ಷಾಮಂಡಲಿ ಏನಿದೆ ಅವರು ಅದನ್ನು ತೀರ್ಮಾನ ತೆಗೆದುಕೊಳ್ಳಬೇಕು. ಅವರಿಗೆ ಮನವಿಯನ್ನು ಕೂಡ ಸಂಪುದವರು ಕೊಟ್ಟಿಲ್ಲ. ನೇರವಾಗಿ ಸರ್ಕಾರಕ್ಕೆ ಬಂದರು, ಬರಲ, ಅದೇ ಅವರಿಗೆ ಸರಿ ಎಂದು ಕಂಡಿತೋ ಏನೋ ಗೊತ್ತಿಲ್ಲ. ಸ್ವಾಯತ್ತತೆ ಇರತಕ್ಕ ಮಂಡಲಿ ಇದ್ದ ಮೇಲೆ ಅವರಿಗೆ, ಮೊಟ್ಟಮೊದಲು ಅರ್ಜಿಯನ್ನು ಸಲ್ಲಿಸಬೇಕಾಗಿತ್ತು. ಅರ್ಜಿಯನ್ನು ಇತ್ತೀಚೆಗೆ 3 ದಿವಸಗಳ ಹಿಂದೆ ಸಲ್ಲಿಸಿದ್ದಾಗೆ ಎನ್ನುವುದೂ ಕೂಡ ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಬರೀ ಉಪಾಧ್ಯಾಯರ ಡಿ. ಎ. ಸಂಬಂಧಪಟ್ಟಂಥ ವಿಚಾರದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಬೋರ್ಡಿಗೆ ಸಂಬಂಧಪಟ್ಟದ್ದು, ಅದು ಸರ್ಕಾರದ ಕೆಲಸವಲ್ಲ. ಬೋರ್ಡಿನವರು ತೆಗೆದುಕೊಳ್ಳಬೇಕು ಎನ್ನತಕ್ಕಂಥಾದ್ದು, ಸರ್ಕಾರ ತೆಗೆದುಕೊಂಡಂಥ ಸ್ಟ್ಯಾಂಡ್. ಅದೇ ಪ್ರಕಾರವಾಗಿ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ಬೋರ್ಡಿನವರಿಗೆ ಈ ತೀರ್ಮಾನವನ್ನು 1974—75ನೇ ಸಾಲಿನಲ್ಲಿ ಗಣನೆಗೆ ತೆಗೆದುಕೊಂಡು ಪರಿಶೀಲನೆಮಾಡಿ ಎಂದು ಕೂಡ ಸರ್ಕಾರ ಅವರಿಗೆ ನಿರ್ದೇಶನವನ್ನು ಕೊಟ್ಟಿದೆ. ಇವರೊಬ್ಬರಿಗೇ ಅಲ್ಲ, ಇವರ ಜೊತೆಗೆ 3—3½ ಲಕ್ಷ ಜನ ಸರ್ಕಾರಿ ಹುದ್ದೆಯಲ್ಲಿ ಕೆಲಸಮಾಡತಕ್ಕ ಅಧಿಕಾರಿಗಳು ಇದ್ದಾರೆ...

ಶ್ರೀ ಎಚ್. ಡಿ. ದೇವೇಗೌಡ.—ತಮ್ಮ ಭಾಷಣದಲ್ಲಿ 12 ಆಣೆ ಇದ್ದದ್ದನ್ನು 1 ರೂಪಾಯಿ ತಾವೇ ಮಾಡಿದ್ದೀರಿ. 2 ರೂಪಾಯಿ ಸಿಟಿಯೊಳಗೆ ಕೊಡಬೇಕು ಎಂಬುದಕ್ಕೆ ಅಷ್ಟು ಇಟ್ಟಿದ್ದೇವೆ ಎಂದು ಹೇಳಿದಿರಿ. 10 ರೂಪಾಯಿ ಮಾಡಬೇಕು ಎಂದರೆ it is a statutory Body ಅವರು ಮಾಡಬೇಕು ಎಂದು ಹೇಳಿದಿರಿ. Don't try to misletd.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದರಲ್ಲಿ ಮಿಸ್‌ಲೀಡ್ ಮಾಡುವಂಥದ್ದು ಇಲ್ಲ, ವಿರೋಧಾಭಾಸ ಇಲ್ಲ ಎಂದು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

Sri H. D. DEVE GOWDA.—What do you mean by that?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗ ಏನು ಒಂದು ಶುಲ್ಕವನ್ನು ಕೊಡುತ್ತಿದ್ದಾರೆ ಅದು 30 ವರ್ಷಗಳಿಂದ ಬಂದಂಥದ್ದು ಅದಕ್ಕಾಗಿ ನಮ್ಮ ಸರ್ಕಾರ ಬಂದಮೇಲೆ ಜವಾಬ್ದಾರಿ ತೆಗೆದುಕೊಂಡು ಜಾಸ್ತಿ ಮಾಡಿದ್ದೇವೆ. ನಮ್ಮ ಶಿಕ್ಷಕರು ಏನು ಮೌಲ್ಯಮಾಪನಕ್ಕೆ ಬಹಿಷ್ಕಾರ ಹಾಕಿದ್ದಾರೆ ಅದು ಸರಿಯಲ್ಲ, 30 ವರ್ಷಗಳ ಹಿಂದೆ ನಿಗದಿಯಾಗಿರತಕ್ಕ ಶುಲ್ಕದ ಬಗ್ಗೆಯೂ ಬೋರ್ಡಿಗೆ ರೆಫರ್ ಮಾಡಿದ್ದೇವೆ.

Sri H. D. DEVE GOWDA.—Similarly, you take a decision and refer the matter to the board.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅಂದಮೇಲೆ ನಾನು ಹೇಳುತ್ತೇನೆ. ಸರ್ಕಾರ ಬೋರ್ಡಿಗೆ ಮತ್ತೆ ಕಳುಹಿಸಿಕೊಡಬೇಕಾಗುತ್ತದೆ.

Sri KAGODU THIMMAPPA.—After taking a decision you have referred it to the Board.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನವೀಯತೆಯ ದೃಷ್ಟಿಯಿಂದು ತೀರ್ಮಾನವನ್ನು ತೆಗೆದುಕೊಂಡಿದ್ದೆವು,

ಶ್ರೀ ಕಾಗೋಡು ತಿಮ್ಮಪ್ಪ.—ಮಾನವೀಯತೆಯ ದೃಷ್ಟಿಯಿಂದ ಇದರ ಬಗ್ಗೆ ಏತಕ್ಕೆ ನಿರ್ಣಯವನ್ನು ತೆಗೆದುಕೊಳ್ಳಬಾರದು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಸರ್ಕಾರದ ಹಿಡಿತದಲ್ಲಿರತಕ್ಕ ಎಲ್ಲಾ ಅಧಿಕಾರಿಗಳಿಗೂ ಇದು ಅನ್ವಯಿಸುತ್ತದೆ. ನಾವು ಎಲ್ಲರಿಗೂ ಕೂಡ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಅಂತಿಮವಾಗಿ ಮಂತ್ರಿಮಂಡಲದಲ್ಲಿ ಈ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನತಕ್ಕದ್ದು, ಯಾವ ವ್ಯಕ್ತಿಯಾಗಿದ್ದರೂ ಕೂಡ ಅರಿವು ಆಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಟ್ರಾನ್ಸ್‌ಫರ್ ವಗ್ಯೆರೆ ವಿಷಯಗಳನ್ನು ತೆಗೆದುಕೊಂಡು ಬಂದರೆ, ಈಗಾಗಲೇ ನಿಯಮಾವಳಿಗಳನ್ನು ವರ್ಗಾವಣೆ ವಿಷಯದಲ್ಲಿ ಇಟ್ಟುಕೊಂಡಿದ್ದೇವೆ. ಅದರಲ್ಲಿ ಲೋಪದೋಷಗಳು ಇದ್ದರೆ ನೀವೂ ಕೂಡ ಒಂದು ನಿಯಮಾವಳಿಗಳನ್ನು ತಯಾರು ಮಾಡಿ ನಿಮಗೆ ಉಪಾಧ್ಯಾಯರ ಯೋಗಕ್ಷೇಮದ ಬಗ್ಗೆ ಎಷ್ಟು ಕಳಕಳಿ ಇದೆ ಅಷ್ಟೇ ಕಳಕಳಿ ನಮಗೂ,ಸರ್ಕಾರಕ್ಕೂ ಇದೆ. ಉಪಾಧ್ಯಾಯರ ವರ್ಗಾವಣೆಯಲ್ಲಿ ಯಾರಿಗೂ ಅನ್ಯಾಯವಾಗದಂಥ ರೀತಿಯಲ್ಲಿ, ಸಾಧ್ಯವಾದಷ್ಟು ಹೆಚ್ಚು ಜನ ಒಪ್ಪತಕ್ಕ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿ ಅವರಿಗೆ ಹೇಳಿದೆವು ಆದಾದ ಮೇಲೆ 30—70 ರೂ ಮುಖ್ಯೋಪಾಧ್ಯಾಯರ ಸ್ಕೇಲ್‌ಗಳು ಕೊಡಬೇಕು ಎನ್ನತಕ್ಕಂಥ ಪ್ರಶ್ನೆ ಇದೆ, ಅದರ ಜೊತೆಗೆ ಶಾರೀರಿಕ ಶ್ರಮಕ್ಕೆ ಸಂಬಂಧ ಪಟ್ಟ ಉಪಾಧ್ಯಾಯರು ಯಾರು ಇದ್ದಾರೋ ಅವರು ಸ್ಕೇಲಿನ ವಿಷಯವನ್ನು ಇವತ್ತಿನ ದಿವಸ ಡಿಮ್ಯಾಂಡ್‌ನಲ್ಲಿ ಪ್ರಸ್ತಾಪ ಮಾಡಿದರು. ಅದು ಈಗಾಗಲೇ ಪೇ ಕಮಿಟಿ ಮುಂದೆ ಇದೆ. ಇನ್ನೊಂದು ವಿಷಯ ಫಿಸಿಕಲ್ ಎಜುಕೇಷನ್ ಟೀಚರ್ಸ್ ಬಗ್ಗೆ ಇದು ಸಹ ಹಣಕಾಸಿನ ಇಲಾಖೆಯ ಮುಂದೆ ಇದೆ. ವಿದ್ಯಾ ಇಲಾಖೆಯ ಅಧಿಕಾರಿಗಳು ಮತ್ತು ಸಚಿವಾಲಯದವರು ಬಲವತ್ತರವಾದಂಥ ಒಂದು ತೀರ್ಮಾನವನ್ನು ತೆಗೆದು

ಕೊಂಡು, ಬಹಳ ಸಹಾನುಭೂತಿಯಿಂದ ಈ ಒಂದು ತೀರ್ಮಾನವನ್ನು ತೆಗೆದುಕೊಂಡು ಹಣಕಾಸಿನ ಇಲಾಖೆಯ ಮುಂದೆ ಕಳುಹಿಸಿದೆ. ಹಾಗೂ ಅದು ಪೇ ಕಮಿಟಿ ಮುಂದೆಯೂ ಇದೆ. ಸಾಧ್ಯವಾದಷ್ಟು ಬೇಗ, ಅವರಿಂದ ಒಂದು ತೀರ್ಮಾನ ಬರಬಹುದೆಂದು ಕಾಯುತ್ತಿದ್ದೇವೆ. ನಾನು ಮತ್ತೇ ಈ ವಿಷಯಕ್ಕೆ ಸಂಬಂಧಪಟ್ಟವರಿಗೆ ಈ ವಿಷಯವನ್ನು ಅವರ ಜ್ಞಾಪಕಕ್ಕೆ ತೆಗೆದುಕೊಂಡು ಬಂದೆ. ಆದಷ್ಟು ಬೇಗ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಕೂಡ ಅವರಿಗೆ ನಾವು ಹೇಳಿದೆವು. ಅದಾದಮೇಲೆ ಕಂಟ್ರಾಕ್ಟ್ ಅಪಾಯಿಂಟ್‌ಮೆಂಟ್ಸ್ ಮಾಡಕೂಡದು ಎಂದು ಒಂದು ತೀರ್ಮಾನವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳಕೂಡದು ಎಂದು ಇಂಥ ಒಂದು ಕೆಲಸ ವಿದ್ಯಾಕ್ಷೇತ್ರದಲ್ಲ ನಡೆಯಬೇಕಾದರೆ ಅಥವಾ ಇದ್ದಕ್ಕಿದ್ದ ಹಾಗೆ ಯಾವುದೇ ಒಂದು ಸಂಸ್ಥೆಯಲ್ಲಿ ಅಂದರೆ ಯಾರಾದರೂ ನಿವೃತ್ತಿ ಹೊಂದಿರಬಹುದು, 2– 3 ಜನ ಒಂದೇ ಸಾರಿ ನಿರ್ಗಮನವಾದರೆ ಅಂಥ ಸಂದರ್ಭದಲ್ಲಿ, ಇದರ ಜೊತೆಗೆ ಕೆಲಸ ನಡೆಯತಕ್ಕ ದೃಷ್ಟಿಯಲ್ಲಿ ಈ ಒಂದು ಕಂಟ್ರಾಕ್ಟ್ ಒಪ್ಪಂದದ ಪ್ರಕಾರ ತೆಗೆದುಕೊಳ್ಳತಕ್ಕದ್ದು ತಾತ್ಕಾಲಿಕವಾಗಿ ಸೂಕ್ತವೇ ಹೇಗೆ ಎಂದು ಹೇಳಿ ತೀರ್ಮಾನವನ್ನು ತೆಗೆದುಕೊಂಡೆವು ಅದನ್ನು ಸಾಧ್ಯವಾದಷ್ಟು ಬೇಗ ಕಂಟ್ರಾಕ್ಟ್ ಅಪಾಯಿಂಟ್‌ಮೆಂಟ್ಸನ್ನು ನಿಲ್ಲಿಸುತ್ತೇವೆ ಎಂದು ಹೇಳಿದೆವು. ಇನ್ನೊಂದು ಪ್ರಶ್ನೆ ಕೂಡ ಅವರು ಎತ್ತಿದರು. ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಏನು ಇದೆ ಅವರಲ್ಲಿ ಈಗಾಗಲೇ ಜೂನಿಯರ್ ಕಾಲೇಜಿನಲ್ಲಿರತಕ್ಕವರು, ಕಾಂಪೋಜಿಟ್ ಕಾಲೇಜ್‌ಗಳು ಏನು ಇವೆ, ಲೆಕ್ಚರರ್‌ನ್ನು ಕಾಲೇಜನ್ನಾಗಿ ಪರಿವರ್ತಿಸುವ ಕಡೆ ಇರತಕ್ಕ, 1972ನೇ ಇಸ್ವಿಯಿಂದ ಜೂನಿಯರ್ ಕಾಲೇಜ್‌ಗಳು ನಡೆದುಕೊಂಡು ಬರುತ್ತಿವೆ. ಅವರಿಗೆ ನಾವು ರೆಗ್ಯುಲರೈಜ್ ಮಾಡಿ, ಇನ್ನು ಮುಂದೆ ಬರತಕ್ಕವರಿಗೆ 'ಸಿ ಅಂಡ್ ಆರ್'ನಲ್ಲಿ 50 ಪರ್‌ಸೆಂಟ್ ಕಂಟ್ರಾಕ್ಟ್ ರೆಕ್ರೂಟ್‌ಮೆಂಟ್‌ನವರಿಗೆ ಪ್ರಮೋಷನ್ ಕೊಡಬೇಕು ಎಂದು ಹೇಳಿದರು ನಾನು ಅವರಿಗೆ ಹೇಳಿದೆ, ಇತ್ತೀಚೆಗೆ ಹರಿಜನ ಗಿರಿಜನರ ಪ್ರಶ್ನೆ ಬೇರೆ, ರಾಜ್ಯಾಂಗದಲ್ಲಿ ಅವರಿಗೆ ಮೀಸಲು ಸ್ಥಾನಗಳು ಇವೆ ಅದರಿಂದ ಅವರಿಗೆ ದೊರಕುತ್ತದೆ. ಹಿಂದುಳಿದ ವರ್ಗಕ್ಕೆ ಸೇರಿದವರು ಸ್ವಾತಂತ್ರ್ಯ ಬಂದಮೇಲೆ "ಡೆಮಾಕ್ರಟೈಜೇಷನ್ ಆಫ್ ಎಜುಕೇಷನ್" ಬಂದಮೇಲೆ "ಯೂನಿವರ್ಸಲೈಜೇಷನ್ ಆಫ್ ಎಜುಕೇಷನ್" ಬಂದಮೇಲೆ ಅವರು ಮುಂದಕ್ಕೆ ಬಂದಿದ್ದಾರೆ, ಪದವೀಧರರಾಗಿ ಹೊರಗಡೆ ಬಂದಿದ್ದಾರೆ ಅವರಿಗೂ ಕೂಡ ಸಾಮಾಜಿಕ ನ್ಯಾಯವನ್ನು ದೊರಕಿಸಿತಕ್ಕಂಥ ದೃಷ್ಟಿಯಿಂದ ನಾವು 50 ಪರ್‌ಸೆಂಟ್ ಇರತಕ್ಕದ್ದು ಸೂಕ್ತ ಎನ್ನುವ ತೀರ್ಮಾನಕ್ಕೆ ಬಂದಿದ್ದೇವೆ. ವೈಯಕ್ತಿಕವಾಗಿ ಹೇಳುವುದಾದರೆ ಇನ್ನು ಜಾಸ್ತಿ ಮಾಡಬೇಕು ಎಂದು ಹೇಳತಕ್ಕಂಥದ್ದು. ಆದುದರಿಂದ ಈ ಒಂದು 50-50 ಪರ್‌ಸೆಂಟ್ ಉಳಿಸಲಾಗುತ್ತಿದೆ ಎನ್ನತಕ್ಕಂಥ ಮಾತನ್ನು ಕೂಡ ಅವರಿಗೆ ಹೇಳಿದೆ.

ಇನ್ನೊಂದು ಡಿಮ್ಯಾಂಡನ್ನು ಇಟ್ಟರು, ಏನೆಂದರೆ ಪ್ರೈವೇಟ್ ಮ್ಯಾನೇಜ್‌ಮೆಂಟ್ ನಡೆಯತಕ್ಕ ಹೈಸ್ಕೂಲ್‌ಗಳು, ವಗೈರೇ ವಿದ್ಯಾಸಂಸ್ಥೆಗಳು ಏನು ಇವೆ, ಈ ಸಂಸ್ಥೆಗಳನ್ನು ಕೂಡ ಸರ್ಕಾರದವರೇ ಒಂದನ್ನೂ ಬಿಡದೆ ಎಲ್ಲವನ್ನೂ ತೆಗೆದುಕೊಳ್ಳಬೇಕು ಎಂದು. ಆದರಿಂದ ಬಹಳ ಅನ್ಯಾಯವಾಗುತ್ತಿದೆ ಎಂದು ಹೇಳಿದರು. Government have agreed in principle to take over the private schools and other institutions. ಆದುದರಿಂದ ಈಗಾಗಲೇ ಎಷ್ಟೋ ತೆಗೆದುಕೊಂಡಿದ್ದೇವೆ. ಆದರೆ ಪ್ರಜಾಪ್ರಭುತ್ವದಲ್ಲಿ Consent is necessary. ಲೋಕಲ್ ಬಾಡೀಸ್, ವಿದ್ಯಾ ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದಾರೆ ಅದನ್ನು ಸರ್ಕಾರ ತೆಗೆದುಕೊಳ್ಳತಕ್ಕ ಸಂದರ್ಭದಲ್ಲಿ ಅವರ ಒಂದು ಕನ್‌ಸೆಂಟ್ ಬೇಕು. Dictaforial just like a ben volent depot ಎನ್ನುವಂಥ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಎಂದು ಹೇಳಿದೆವು. ಸರ್ಕಾರ ತತ್ವಶಃ ಒಪ್ಪಿಕೊಂಡಿದ್ದಾರೆ. ಆದರೆ ಕೆಲವು ಕಡೆ ಏನು ಆಯಿತು ಎಂದರೆ, ಬ್ಯಾಡಗಿ ವಗೈರೆ ಕಡೆ ಪ್ರಶ್ನೆ ಎತ್ತಿದರು, ಅಲ್ಲಿ ಕೆಲವು ಸಂದರ್ಭದಲ್ಲಿ ಚುನಾಯಿಸಲ್ಪಟ್ಟ ಪ್ರತಿನಿಧಿಗಳು ಇಲ್ಲದೇ ಇರತಕ್ಕ ಸ್ಥಳೀಯ ಸಂಸ್ಥೆಗಳು, ಪುರಸಭೆಗಳು ಏನು ಇವೆ ಅವುಗಳು ತಮ್ಮ ಅಭಿಪ್ರಾಯವನ್ನು ಕೊಡದೇ, ಅಲ್ಲಿ ಇರತಕ್ಕ ಅಡ್ಮಿನಿಸ್ಟ್ರೇಟರ್ ಅಭಿಪ್ರಾಯವನ್ನು ಸರ್ಕಾರ ತೆಗೆದುಕೊಂಡಿರತಕ್ಕ ಸಂದರ್ಭದಲ್ಲಿ ಮತ್ತೆ ಚುನಾಯಿಸಿ ಬಂದಂಥ ಪುರಸಭೆಗಳು ಅಥವಾ ಸ್ಥಳೀಯ ಸಂಸ್ಥೆಗಳು ಏನು ಇವೆ ಸರ್ಕಾರ ಪ್ರಜಾಸತ್ತಾತ್ಮಕದ ಮೇಲೆ ತೀರ್ಮಾನವನ್ನು ತೆಗೆದುಕೊಂಡಿಲ್ಲ, ನಾವೂ ಚುನಾವಣೆಯಲ್ಲಿ ಗೆದ್ದು ಬಂದಿದ್ದೇವೆ, ನಮ್ಮ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕಾಗಿತ್ತು ಎಂದು ಹೇಳಿದರು. ಒಬ್ಬ ಆಡಳಿತಗಾರರು, ಸರ್ಕಾರದಿಂದ ನೇಮಿಸಲ್ಪಟ್ಟವರ ಅಭಿಪ್ರಾಯದ ಮೇಲೆ ಮಾಡಿರತಕ್ಕದ್ದು ಸರಿಯಲ್ಲ ಎಂದು ಹೇಳಿದಾಗ, ನಾವು ಈ ಒಂದು ತೀರ್ಮಾನವನ್ನು ಕೂಡ ಕೆಲವು ಸಂದರ್ಭದಲ್ಲಿ ಸರ್ಕಾರದವರು ತೆಗೆದುಕೊಂಡಿರಬಹುದು. ಅದು ಏನು ಎತ್ತ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಈ ಮಾತನ್ನು ಅವರಿಗೆ ಹೇಳಿದ್ದೇನೆ, ತತ್ವಶ: ಒಪ್ಪಿಕೊಂಡಿ

(ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ)

ದ್ದರೂ ಕೂಡ ಸ್ವಲ್ಪ ಕಾಲ ಹಿಡಿಯುತ್ತದೆ ಅದನ್ನು ಮಾಡುತ್ತೇವೆ. ಮುಖ್ಯಮಂತ್ರಿಗಳು ಈ ವಿಷಯದಲ್ಲಿ ವೈಯುಕ್ತಿಕವಾಗಿ ಆಶ್ವಾಸನೆ ಕೊಟ್ಟಿದ್ದಾರೆ ಹಾಗೆಂದು ಕೂಡ ಹೇಳಿದರು, ಅವರು ಆಶ್ವಾಸನೆ ಕೊಟ್ಟಿರಬಹುದು, ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿದ್ದರೆ ನಾನು ಹೇಗೆ ಇಲ್ಲ ಎಂದು ಹೇಳುವುದಕೆ ಆಗುತ್ತದೆ. ಆದುದರಿಂದ ತತ್ವಶಃ ನಾವು ಈಗಾಗಲೇ ಒಪ್ಪಿಕೊಂಡಿದ್ದೇವೆ, ಆ ವಿಷಯು ಸರ್ಕಾರದವರ ಪರಿಶೀಲನೆಯಲ್ಲಿದೆ. ಸಾಧ್ಯವಾದಷ್ಟು ಬೇಗ ತೆಗೆದುಕೊಳ್ಳತಕ್ಕಂಥ ಉದ್ದೇಶವಿದೆ. ಅದರೆ ಹಣಕಾಸಿನ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ ಎಂದು ಹೇಳಿದೆವು, ಆದರ ಜೊತೆಗೆ ಅವರು ಇನ್ನೊಂದು ಬೇಡಿಕೆಯನ್ನು ಇಟ್ಟಿದ್ದಾರೆ, ಮಾನ್ಯ ಕೊಠಾರಿ ಕಮಿಷನ್‌ರ್‌ವರ ಏನು ಒಂದು ವರದಿಯನ್ನು ಕೊಟ್ಟಿದ್ದಾರೆ, ಇದರ ಜೊತಗೆ ಜಿಲ್ಲಾ ಮಟ್ಟದಲ್ಲೂ ಕೂಡ ಕೆಲವು ಸಮಿತಿಗಳನ್ನು ಅಡ್ವೈಜರಿ ಕಮಿಟಿಗಳನ್ನು ಮಾಡುವುದಕ್ಕೆ ಅವಕಾಶವಿದೆ ಇದನ್ನು ಮಾಡಬೇಕು ಎಂದು ಹೇಳಿ, ಅವರು ಹೇಳಿದ್ದರು.

5-30 P. M.

ನಾನು ಅವರಿಗೆ ಹೇಳಿದೆ. ಈಗಾಗಲೇ 7 ಸಮಿತಿಗಳು ರಾಷ್ಟ್ರಮಟ್ಟದಲ್ಲಿ ಇವೆ ಎಂದು. ಮತ್ತು ಅದರಲ್ಲಿ ಪ್ರಾಥಮಿಕ, ಮಾಧ್ಯಮಿಕ ಹಾಗೂ ಫ್ರೌಢಶಾಲೆಗಳ ಶಿಕ್ಷಕರ ಪ್ರತಿನಿಧಿಗಳೂ ಕೂಡ ಇದ್ದಾರೆ ಎಂದು ಹೇಳಿದೆ. ಮತ್ತು ಇದನ್ನು ಜಿಲ್ಲಾ ಮಟ್ಟದಲ್ಲಿ ಮಾಡಬೇಕೇ ಬಿಡಬೇಕೇ ಎನ್ನುವುದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳಿದೆ. ನಾನು ಕೊಠಾರಿ ಕಮೀಷನ್ ರಿಪ್ರೋರ್ಟ್‌ನ್ನು ಓದಿದ್ದೇನೆ. ಆದರೆ ಆ ಬಗ್ಗೆ ಅದನ್ನು ಓದಿದ್ದೇನೋ ಇಲ್ಲವೋ ಗೊತ್ತಿಲ್ಲ, ಅಥವಾ ಓದಿದರೂ ಅದನ್ನು ಮರೆತಿರಬಹುದು. ಆದರೂ ಕೂಡ ಅದನ್ನು ಪರಿಶೀಲನೆ ಮಾಡುತ್ತೇನೆ ಎಂದು ಸರ್ಕಾರದ ಪರವಾಗಿ ನಾನು ಅವರಿಗೆ ಒಂದು ಆಶ್ವಾಸನೆಯನ್ನೂ ಕೂಡ ಹೇಳಿದೆ. ಆದರೆ ಅವರು ಪ್ರಮುಖವಾಗಿ ನಿವೃತ್ತಿ ವಯಸ್ಸು ಏನು ಇದೆ ಅದನ್ನೇ ಮುಖ್ಯವಾಗಿ ಇಟ್ಟು ಕೊಂಡ ಹಾಗೆ ಅವರ ಮಾತಿನಲ್ಲಿ ಭಾಸವಾಯಿತು. ಅದೂ ಅಲ್ಲದೆ ಜೊತೆಗೆ ಆ ಮಾತನ್ನೂ ಕೂಡ ಹೇಳಿದರು. ಆದರೆ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಉಪಾಧ್ಯಾಯರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಯೇ, ಇಲ್ಲವೇ, ಮತ್ತು ಒಬ್ಬೊಬ್ಬರೇ ಉಪಾಧ್ಯಾಯರುಗಳು ಇರುವ ಕಡೆ ಹೇಗೆ ಕಲಸ ಮಾಡುತ್ತಿದ್ದಾರೆ ಇವೆಲ್ಲಾ ವಿಷಯಗಳನ್ನೂ ಕಲೆಕ್ಟ್ ಮಾಡಿ ಈ ಬಗ್ಗೆ ಪ್ರಾಕ್ಸಿ ನಡೆದಿದೆ. ಬೇರೆ ಬೇರೆ ಕಸಬಿನಲ್ಲಿರತಕ್ಕಂಥ ಜನರು ಈ ಉಪಾಧ್ಯಾಯ ವೃತ್ತಿಯನ್ನು ಉಪಕಸಬನ್ನಾಗಿ ಇಟ್ಟುಕೊಂಡಿರುವವರು ಇದ್ದಾರೆ. ಧಾರವಾಡದಲ್ಲಿ ನನ್ನ ಮಿತ್ರರೇ ಒಬ್ಬರು ಹೇಳಿದರು ಇದಕ್ಕೆ ಸಾಕ್ಷಿ. ಒಂದು ದಿವಸಕ್ಕೆ ಒಂದು ರೂಪಾಯಿನಂತೆ ದಿನಗೂಲಿಯಂತೆ 30 ರೂಪಾಯಿ ಕೊಟ್ಟು ಬಿಟ್ಟು ಇವರು ಕಮೀಷನ್ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದಾರೆ ಎನ್ನತಕ್ಕಂಥ ವರ್ತಮಾನ ನನಗೆ ಬಂದಿದೆ. ಬರೇ ಉಪಾಧ್ಯಾಯರ ವೃತ್ತಿಯಲ್ಲಿ ಕೆಲಸ ಮಾಡತಕ್ಕಂಥ ಜನರ ವೈಶಿಷ್ಟ್ಯವೇ ಬೇರೆ. ಉಪಾಧ್ಯಾಯರ ವೃತ್ತಿಯಲ್ಲಿಲ್ಲದೇ ಇದನ್ನು ಒಂದು ಉಪಕಸಬನ್ನಾಗಿ ಇಟ್ಟುಕೊಂಡು ಕೆಲವರು ಈ ಕಲಸ ಮಾಡುತ್ತಾ ಇರುವುದರಿಂದಲೇ ಈ ಪ್ರಜಾಪ್ರಭುತ್ವದಲ್ಲಿ ಈ ವಿದ್ಯಾಭ್ಯಾಸದ ಗುಣಮಟ್ಟ ಎಲ್ಲಿಯವರೆಗೆ ಹೋಗಿದೆ ಎನ್ನುವುದನ್ನು ನಾನು ನೋಡುತ್ತಾ ಇದ್ದೇನೆ. ಅಲ್ಲದೆ ನಾನು ಹಿಂದೆ ಉಪಮಂತ್ರಿಗಳಾಗಿದ್ದಾಗಲೂ ಇದನ್ನು ನೋಡಿದ್ದೇನೆ. ಮಕ್ಕಳಿಗೆ ಹೇಗೆ ಪಾಠ ಮಾಡಬೇಕು, ಅವರಿಗೆ ಪಾಠ ಹೇಳಿಕೊಟ್ಟರೆ ಏತಕ್ಕೆ ಹಿಡಿಸಲಿಲ್ಲ, ಮತ್ತೆ ಆ ಮಕ್ಕಳಿಗೆ ಆ ಪಾಠ ಹಿಡಿಸಬೇಕಾದರೆ ಏನು ಮಾಡಬೇಕು, ಮಕ್ಕಳ ಮನಸ್ಸಿನ ಮೇಲೆ ಬೀರತಕ್ಕಂಥ ಪಾಠಪ್ರವಚನಗಳು ಮತ್ತು ಯಾವುದೇ ಒಂದು ಕೈಂಕರ್ಯಗಳು ಇವುಗಳನ್ನು ಹೇಳಿಕೊಡತಕ್ಕಂಥ ಜವಾಬ್ದಾರಿ ಉಪಾಧ್ಯಾಯರ ಮೇಲೆ ಬಿದ್ದಿದೆ. ಇದನ್ನು ಎಷ್ಟರಮಟ್ಟಿಗೆ ನಿರ್ವಹಿಸಬೇಕೋ ಅಷ್ಟರಮಟ್ಟಿಗೆ ಅವರು ನಿರ್ವಹಿಸಬೇಕು ಎಂದು ಹೇಳಬಯಸುತ್ತೇನೆ. ಆದುದರಿಂದ ನಾನು ಈ ಒಂದು ನಿಲುವಳಿ ಸೂಚನೆ ಬಗ್ಗೆ ಇಷ್ಟು ಮಾತ್ರ ಹೇಳುತ್ತೇನೆ. ಈವೊತ್ತಿನ ದಿವಸ ಎದುರು ಪಕ್ಷದ ನಾಯಕರು ಏನು ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಂಡು ಬಂದಿದ್ದಾರೋ ಮತ್ತು ಎದುರು ಪಕ್ಷದ ನಾಯಕರು ಈ ಶಿಕ್ಷಕರ ವಿಷಯದಲ್ಲಿ ಅವರು ನಮ್ಮ ಶಿಕ್ಷಕರು ಎಂದು ಏನೊಂದು ಕಳಕಳಿಯನ್ನು ವ್ಯಕ್ತಪಡಿಸಿದ್ದಾರೋ ಹಾಗೆಯೇ ಅವರೂ ಕೂಡ ನಮ್ಮ ಶಿಕ್ಷಕರು ಅನ್ನುವ ಮನೋಭಾವನೆ ನಿಮಗಿಂತ ಹೆಚ್ಚಿಗೆ ಇಲ್ಲದಿದ್ದರೂ ಕೂಡ ನಿಮ್ಮಷ್ಟೇ ಕಳಕಳಿ ನಮಗೂ ಕೂಡ ಇದೆ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಎಷ್ಟೋ ಜನ ಉಪಾಧ್ಯಾಯರುಗಳು ಈ ಮೌಲ್ಯಮಾಪನ ಕೆಲಸವನ್ನು ಮಾಡುವುದಕ್ಕೆ ತಯಾರಾಗಿದ್ದರೂ ಕೂಡ ಅವರನ್ನು ಹೆದರಿಸಿದ್ದಾರೆ ಮತ್ತು ನೀವು ಮೌಲ್ಯಮಾಪನ ಕೆಲಸವನ್ನು ಮಾಡಲು ಹೊರಟರೆ ನಿಮ್ಮ ಕಾಲು ಮುರಿಯುತ್ತೇವೆ. ನಿಮ್ಮನ್ನು ಕೊಲೆ ಮಾಡುತ್ತೇವೆ ಎಂದು ಬೆದರಿಸಿದ್ದಾರೆ. ಶಿಕ್ಷಕರ ಮುಖಂಡರು ಈ ಒಂದು ಉಪವಾಸ ಮತ್ತು ಸತ್ಯಾಗ್ರಹವನ್ನು ಮಾಡುವುದಕ್ಕೆ ಇಂತಹ ಒಂದು ಅಸ್ತ್ರವನ್ನು ಉಪಯೋಗಿಸುವುದು ಸರಿಯಲ್ಲ ಎಂದು ಹೇಳುತ್ತೇನೆ. ಇಂತಹ ಒಂದು ಸದ್ವಿನಿಯೋಗವಾದ ಕೆಲಸಕ್ಕೆ ಈ ಉಪವಾಸ ಮತ್ತು ಸತ್ಯಾಗ್ರಹವನ್ನು ಮಾಡಬೇಕೇ ಬೇಡವೇ ಎನ್ನುವ ಬಗ್ಗೆ ಬಹಳ ಎಚ್ಚರಿಕೆಯಿಂದ ಪರಿಶೀಲನೆ ಮಾಡುವ ಪ್ರಜ್ಞೆ ಉಪಾಧ್ಯಾಯರಿಗೆ ಇದೆ. ಆದರೆ ಉಪಾಧ್ಯಾಯರ ಮುಖಂಡರು ಇಂತಹ ಒಂದು ಬಹಿಷ್ಕಾರದ ಚಳುವಳಿಯನ್ನು ಪ್ರಾರಂಭಿಸಿರತಕ್ಕದ್ದು ನೋಡಿದರೆ ಇದರಲ್ಲಿ ರಾಜಕೀಯ ಉದ್ದೇಶ ಇದೆಯೋ ಹೊರತು ಮತ್ತೇನೂ ಅಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ಮುಂದೆ ವಿಧಾನಪರಿಷತ್ತಿನ ಚುನಾವಣೆ ಆಗಬೇಕಾದ್ದು ಇದೆ. ಉಪಾಧ್ಯಾಯರ ಹಾಗೂ ಪದವೀಧರರ ಕ್ಷೇತ್ರದಿಂದ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಚುನಾವಣೆ ಆಗಬೇಕಾದ್ದು ಇದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ಶಿಕ್ಷಕರ ಮುಖಂಡರು ಈ ಚಳುವಳಿಗೆ ಕಾರಣರಾಗಿದ್ದಾರೆ. ಆದುದರಿಂದ ಇದರ ಹಿಂದೆ ರಾಜಕೀಯ ಉದ್ದೇಶ ಇದೆ ಎಂದು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಆದುದರಿಂದ ಈ ಶಿಕ್ಷಕರ ಮುಖಂಡರು ಮಾಡುವಂಥ ಕೆಲಸಕ್ಕೆ ಉಪಾಧ್ಯಾಯರು ಬೆಂಬಲವನ್ನೂ ಮತ್ತು ಸಹಕಾರವನ್ನೂ ಕೊಡಕೂಡದು, ಹಾಗೇನಾದರೂ ಸಹಕಾರವನ್ನೂ ಮತ್ತು ಬೆಂಬಲವನ್ನೂ ಕೊಟ್ಟರೆ "ಉಪಾಧ್ಯಾಯರ ಒಂದು ವೃತ್ತಿಗೇ ದೋಷ... ಚರ್ಮ ಹದ ಮಾಡತಕ್ಕವನೇ ಆಗಲಿ, ಕೈಂಕರ್ಯ ಕೆಲಸ ಮಾಡತಕ್ಕಂಥಾವನು ಯಾವನೇ ಆಗಲಿ ತಾನು ಮಾಡುವ ಕೆಲಸ ಭಗವಂತನಿಗೆ ಸಲ್ಲಿಸುವ ನೈವೇದ್ಯ ಎಂದು ತಿಳಿದುಕೊಂಡು ಕೆಲಸ ಮಾಡಬೇಕು. ಮತ್ತು ಇನ್ನೂ ಒಂದು ಉದಾಹರಣೆ ಹೇಳುವುದಾದರೆ ಬಸವೇಶ್ವರರು ಹೇಳಿದ ಹಾಗೆ ಕಾಯಕವೇ ಕೈಲಾಸ ಎಂದು ಅವರು ತಿಳಿದುಕೊಂಡು ಕೆಲಸ ಮಾಡಬೇಕು. ಉಪಾಧ್ಯಾಯರು ಸಂಭಾವನೆ ತೆಗೆದುಕೊಂಡ ಮೇಲೆ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು. ಉಪಾಧ್ಯಾಯರ ಕ್ಷೇತ್ರದಲ್ಲಿಯಾಗಲಿ ಯಾವ ಕ್ಷೇತ್ರದಲ್ಲಿಯಾಗಲಿ ಕೆಲಸ ಮಾಡತಕ್ಕಂಥ ಜನರು ಸಮಾಜದಲ್ಲಿರತಕ್ಕಂಥ ಎಲ್ಲ ವರ್ಗಗಳೂ ಕೂಡ ಅವರು ಏನು ಒಂದು ತತ್ವವನ್ನು ಇಟ್ಟುಕೊಂಡಿದ್ದಾರೋ ಅದನ್ನು ಅಳವಡಿಸಿಕೊಂಡು ಹೋದರೆ ರಾಷ್ಟ್ರವನ್ನು ದೊಡ್ಡದನ್ನಾಗಿ ಮಾಡಬಹುದು ಇಲ್ಲದಿದ್ದರೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ. ಮತ್ತು ಉಪಾಧ್ಯಾಯರ ಬೇಡಿಕೆಗಳು ಏನು ಇವೆ ಅವನ್ನು ಯಾವ ಮಟ್ಟದಲ್ಲಿ ಎಷ್ಟರಮಟ್ಟಿಗೆ ತೀರ್ಮಾನ ತೆಗೆದುಕೊಳ್ಳಬಹುದೋ ಅಷ್ಟರಮಟ್ಟಿಗೆ ಆ ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆ. ಈಗಲೇ ಏನೊಂದು ತೀರ್ಮಾನವನ್ನು ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಅವರಿಗೆ ತಿಳಿಸಿದ್ದೇವೆ. ಈಗಲೂ ಅದೇ ವಿಷಯವನ್ನು ನಾನು ಹೇಳುತ್ತಿದ್ದೇನೆ, ಅದೇ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿದೆ. ಆ ತೀರ್ಮಾನಗಳನ್ನು ಬದಲಾಯಿಸುವ ಹಾಗೆಯೇ ಇಲ್ಲ. ಈ ವಿದ್ಯಾಭ್ಯಾಸಕ್ಕೆ ಇಟ್ಟಿರತಕ್ಕಂಥ 80 ಕೋಟಿ ರೂಪಾಯಿಯ ಒಂದು ಜವಾಬ್ದಾರಿ ಸ್ಥಾನದಲ್ಲಿ ನಾನು ಕುಳಿತುಕೊಂಡು ಈ ಮಾತನ್ನು ಹೇಳುತ್ತಿದ್ದೇನೆ. ಪ್ರತಿಯೊಂದು ಕಾಸಿಗೂ ಸರಿಯಾದ ಲೆಕ್ಕವನ್ನು ಕೊಡಬೇಕು. We are responsible for proper accountability for every money. ಈ ದೃಷ್ಟಿಯಿಂದ ಈ ಸಭೆಯ ಮುಖಾಂತರ ಉಪಾಧ್ಯಾಯರಿಗೆ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. ಯಾವ ಮೌಲ್ಯ ಮಾಪನ ಕೆಲಸವನ್ನು ಮಾಡುತ್ತೇವೆಂದು ಅವರು ಒಪ್ಪಂದ ಮಾಡಿಕೊಂಡು ಬಂದಿದ್ದಾರೋ ಆ ಒಪ್ಪಂದದ ಪ್ರಕಾರ ಮೌಲ್ಯ ಮಾಪನ ಕೆಲಸವನ್ನು ಮತ್ತೆ ಪ್ರಾರಂಭ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದವರಿಗೆ ಅವರ ಬೇಡಿಕೆಗಳ ವಿಷಯದಲ್ಲಿ ಪೂರ್ಣವಾಗಿ ಸಹಾನುಭೂತಿ ಇದೆ. ಮತ್ತು ಮಾನವೀಯತೆ ದೃಷ್ಟಿಯಿಂದ ರಾಷ್ಟ್ರದ ಮತ್ತು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಯಾವ ಮಟ್ಟದಲ್ಲಿ ಎಷ್ಟು ಮಟ್ಟಿಗೆ ಏನು ತೀರ್ಮಾನವನ್ನು ತೆಗೆದುಕೊಳ್ಳಬಹುದೋ ಆ ತೀರ್ಮಾನವನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎಂದು ಹೇಳಿ ಮತ್ತೊಮ್ಮೆ ಉಪಾಧ್ಯಾಯರಲ್ಲಿ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ನನ್ನ ಒಂದು ಕ್ಲಾರಿಫಿಕೇಷನ್ ಏನೆಂದರೆ ಈಗ ನಾನು ಒಂದು ನಿಲುವಳಿ ಸೂಚನೆಯನ್ನು ಮಂಡಿಸಿ ಸಮರ್ಥನೆ ಮಾಡುವಾಗ ಅವರ ಬೇಡಿಕೆಗಳಲ್ಲಿ ಎರಡು ಭಾಗ ಇದೆ ಎಂದು ಹೇಳಿದ್ದೆ. ಕೆಲವು ಬೇಡಿಕೆಗಳನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದೀರಿ. ನೀವು ಈ ನಿಮಿಷದಲ್ಲೇ ಈ ಗಂಟೆಯಲ್ಲೇ ತೀರ್ಮಾನ ಮಾಡಿ ಎಂದು ನಾನು ಹೇಳ ಇಲ್ಲ. ಇವನ್ನು ಜಾಗ್ರತೆಯಿಂದ ಮಾಡುವ ಹಾಗೆ ಇದ್ದರೆ ಇದಕ್ಕೆ ಒಂದು ಕಾಲ ನಿಗದಿ ಮಾಡಿ ಇಲ್ಲದಿದ್ದರೆ ಇಲ್ಲ ಎಂದು ಹೇಳಿಬಿಡಿ.

(ಶ್ರೀ ಎಚ್. ಡಿ. ದೇವೇಗೌಡ)

ಇನ್ನೊಂದು ವಿಷಯ ಏನೆಂದರೆ ದಿನಭತ್ಯ 10 ರೂಪಾಯಿ ಕೊಡಬೇಕು ಎಂದು ಅವರು ಏನು ಕೇಳಿದ್ದರೋ ಆ ಬಗ್ಗೆ ಒಂದು ನಿರ್ಣಯ ಮಾಡಬೇಕು ಎಂದು ಹೇಳಿದ್ದೆ. ಈವೊತ್ತು ಈ ಒಂದು ಬೇಡಿಕೆಯನ್ನು ತೀರ್ಮಾನ ತೆಗೆದುಕೊಳ್ಳತಕ್ಕಂತಥಾದ್ದರ ಬಗ್ಗೆ ಬಹುಶಃ ಸರ್ಕಾರಕ್ಕೆ ಇಕ್ಕಟ್ಟಾಗಲಾರದು ಎಂದು ನನ್ನ ಭಾವನೆ. ಅವರು ಒಂದು ಕಡೆ ರಾಜ್ಯದ ಎಲ್ಲಾ ನೌಕರರಿಗೆ ಸಂಬಂಧಪಟ್ಟ ಹಾಗೆ 2 ಲಕ್ಷ ಸರ್ಕಾರಿ ಅಧಿಕಾರಿಗಳಿಗೂ ಸಂಬಂಧಪಟ್ಟ ಹಾಗೆ ಸಿವಿಲ್ ಸರ್ವೀಸ್ ರೂಲ್ಸ್ ಏನು ಇದೆ ಅದರ ಪರಿಮಿತಿಯೊಳಗೇನೇ ನಿರ್ಣಯ ಮಾಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ ಮತ್ತೊಂದು ಕಡೆ it is a statutory body ಎನ್ನುವ ಮಾತನ್ನು ಹೇಳಿದ್ದಾರೆ. ಹೀಗೆ ಅವರು ಹೇಳಿರತಕ್ಕಂಥಾದ್ದು ಕಾಂಟ್ರಡಿಕ್ಟರಿ ಆಗುತ್ತದೆ ಎಂದು ನನ್ನ ಭಾವನೆ. ಅದನ್ನು ತಾವು ತಿಳಿಸಬೇಕು. ಮಾನ್ಯ ವಿದ್ಯಾಸಚಿವರು ಹೇಳುವಾಗ, ಶಿಕ್ಷಕರ ಮೌಲ್ಯಮಾಪನ ಒಂದು ಪೇಪರ್‌ಗೆ 75 ಪೈಸೆ ಇದ್ದುದನ್ನು ಒಂದು ರೂಪಾಯಿ ಕೊಡಬಹುದು ಎಂದು ಒಪ್ಪಿಕೊಂಡಿದಾರೆ. ಎಂದು ಹೇಳಿದ್ದಾರೆ. ಅದರಂತೆಯೇ ಅವರ ದಿನಭತ್ಯವನ್ನೂ ಸಹ ಆರು ರೂಪಾಯಿಗಳು ಇದ್ದುದನ್ನು 10 ರೂಪಾಯಿಗೆ ಸರ್ಕಾರದವರು ಒಪ್ಪಿಕೊಳ್ಳಬೇಕಾಗುತ್ತದೆ. ಈ ಒಂದು ವಿಷಯದಲ್ಲಿ ತಾವು ನಿರ್ಧಾರ ಮಾಡಿ ಮತ್ತು ಇನ್ನೂ ಅವರ ಕೆಲವು ಬೇಡಿಕೆಗಳ ಬಗ್ಗೆಯೂ ಪರಿಶೀಲನೆ ಮಾಡಬೇಕು ಎಂದು ತಾವು ಹೇಳಿದ್ದೀರಿ. ಅದನ್ನು ಒಪ್ಪಿಕೊಳ್ಳುತ್ತೇನೆ. ದಯಮಾಡಿ ಇದರ ಬಗ್ಗೆ ಯಾವುದೇ ರೀತಿಯ ವಿಳಂಬ ಬೇಡ. ಮುಖ್ಯಮಂತ್ರಿಗಳೂ ಸಭೆಯಲ್ಲಿದ್ದಾರೆ, ಏಕೆಂದರೆ ಇದು ಪಕ್ಷದ ಪ್ರಶ್ನೆಯಲ್ಲ, ಯಾವುದೇ ರಾಜಕೀಯದ ಉದ್ದೇಶದಿಂದ ಎತ್ತಿರತಕ್ಕ ಪ್ರಶ್ನೆಯಲ್ಲ; ಈ ವಿಷಯಕ್ಕೆ ತಾವು ಯಾವು ಒಂದು ಬಣ್ಣವನ್ನು ಹಚ್ಚುವುದೂ ಬೇಡ. ಬೆಂಗಳೂರು ನಗರದಲ್ಲಿ ಮೌಲ್ಯ ಮಾಪನ ಮಾಡತಕ್ಕ ಶಿಕ್ಷಕರಿಗೆ ದಿನಭತ್ಯ ದಿನಕ್ಕೆ 10 ರೂಪಾಯಿಗಳನ್ನು ಕೊಟ್ಟರೂ ಸಾಲದು. ತಾವು ಇದನ್ನು ನಿರ್ಧಾರ ಮಾಡಲಿಕ್ಕೆ ಕಷ್ಟವಾಗುತ್ತದೆ ಎಂದು ನಾನು ತಿಳಿದುಕೊಂಡಿಲ್ಲ. ಇದರ ಬಗ್ಗೆ ತಾವು ಆಶ್ವಾಸನೆಯನ್ನು ಕೊಡಬೇಕಾಗುತ್ತದೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು),—ಮಾನ್ಯ ಅಧ್ಯಕ್ಷರೇ, ಈಗಾಗಲೇ ನಮ್ಮ ಮಂತ್ರಿಗಳು ಈ ವಿಷಯವನ್ನು ಸ್ಪಷ್ಟೀಕರಿಸಿದ್ದಾರೆ. ಮಾನ್ಯ ದೇವೇಗೌಡರು ಕೇಳುವ ವಿಚಾರದಲ್ಲಿ ನನ್ನ ಅಭಿಪ್ರಾಯ ಏನು ಇದೆಯೆಂದರೆ, ಒಂದನೆಯದಾಗಿ, ಪೇಪರ್ ಕರೆಕ್ಷನ್ ಮಾಡುವುದಕ್ಕೆ ಸಂಬಂಧಪಟ್ಟಂಥ ಫೀಸ್ ಎಷ್ಟು ಎನ್ನುವುದು, ಇನ್ನೊಂದು, ಇವರಿಗೆ ದಿನಭತ್ಯ ಎಷ್ಟು ಕೊಡಬೇಕು ಎನ್ನುವುದು. ಪೇಪರ್ ಕರೆಕ್ಷನ್ ಫೀಸನ್ನು 75 ಪೈಸೆಯಿಂದ ಒಂದು ರೂಪಾಯಿಗೆ ಮಾಡಿದ್ದಾರೆಂದು ಹೇಳಿದಾರೆ. ಇದು ನಮ್ಮ ಅಧ್ಯಾಪಕರು ಮಾಡತಕ್ಕ ಕೆಲಸಕ್ಕೆ ಸೀಮಿತವಾಗಿರತಕ್ಕ ವಿಚಾರ. ಬೇರೆ ಅಧಿಕಾರಿಗಳು ಯಾರಿಗೂ ಇದು ಸಂಬಂಧ ಬರುವುದಿಲ್ಲ. ಇನ್ನು ಭತ್ಯದ ವಿಚಾರ, ಇದು ಸರ್ಕಾರದಲ್ಲಿ ಕೆಲಸಮಾಡತಕ್ಕಂಥ ಎಲ್ಲಾ ನೌಕರ ವರ್ಗದವರಿಗೂ ಸಂಬಂಧಪಡುತ್ತದೆ. ಈಗ ಅವರಿಗೆ ದಿನಭತ್ಯ ಕೊಡತಕ್ಕದ್ದು 8 ರೂಪಾಯಿಗಳು, ಆರು ರೂಪಾಯಿಗಳಲ್ಲ. ಹೆಡ್ಮಾಸ್ಟರ್ಸ್ ಯಾರು ಇರುತ್ತಾರೆ, ಅವರಿಗೆ 10 ರೂಪಾಯಿಗಳು ಎಂದು ಏನೋ ಮಾಡಿದ್ದಾರೆ. ತಾವು ಕೇಳುತ್ತಿರುವ ಪ್ರಶ್ನೆ ಇದನ್ನು ಎಲ್ಲರಿಗೂ 10 ರೂಪಾಯಿಗಳಾಗಿ ಮಾಡಬೇಕು ಎಂದು. ಆದರೆ ಈ ಪ್ರಶ್ನೆ ಕೇವಲ ಪ್ರಾಧ್ಯಾಪಕ ವರ್ಗದವರಿಗೆ ಸೀಮಿತವಾಗುವುದಿಲ್ಲ. ಟಿ.ಎ; ಡಿ.ಎ. ರೂಲ್ಸ್ ಎಲ್ಲಾ ಸರ್ಕಾರಿ ನೌಕರರಿಗೂ ಅನ್ವಯವಾಗುತ್ತದೆ. ಈ ಒಂದು ದೃಷ್ಟಿಯಿಂದ ಇದನ್ನು ಈಗಲೇ ಯಾವರೀತಿಯಿಂದಲೂ ಹೇಳುವುದು ಸಾಧ್ಯವಿಲ್ಲ. ಇದು ಇವರ ಮಟ್ಟಿಗೆ ಸೀಮಿತವಾಗುವುದಿದ್ದರೆ ಯೋಚನೆ ಮಾಡಬಹುದಿತ್ತು. ಇಷ್ಟಕ್ಕೆ ಇದು ಉಳಿಯುವುದಿಲ್ಲ, ಎಲ್ಲಾ ನೌಕರವರ್ಗದವರಿಗೂ ನಾವು ಜನರಲ್ ರೂಲ್ಸನ್ನು ಫ್ರೇಮ್ ಮಾಡಬೇಕಾಗುತ್ತದೆ. ಹೀಗೆ ಬಂದಾಗ ಇದರ ಪರಿಣಾಮವಾಗಿ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದನ್ನು ಯೋಚನೆ ಮಾಡದೆ ಇದನ್ನು ಹೌದು, ಅಥವಾ ಇಲ್ಲ, ಎಂದು ಹೇಳುವುದು ಕಷ್ಟಸಾಧ್ಯವಾಗುತ್ತದೆ. ನಮ್ಮ ಮಾನ್ಯ ಲಿಂಗಪ್ಪನವರು 50 ಲಕ್ಷ ಅಥವಾ ಒಂದು ಕೋಟಿ ರೂಪಾಯಿಗಳು ಹೋಗಲಿ ಎಂದು ಸುಲಭವಾಗಿ ಹೇಳಿ ಬಿಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ,—ಕಷ್ಟಪಟ್ಟೇ ಹೇಳಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ,—ಬೇರೆ ವಿಷಯಗಳಲ್ಲಿ ಚೌಕಾಸಿ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಎಲ್ಲಿ ಖರ್ಚು ಮಾಡಬೇಕೋ ಅಲ್ಲಿ ಖರ್ಚು ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳುವುದು, ಈಗ ಇವರಿಗೆ ದಿನಭತ್ಯವನ್ನು 10 ರೂಪಾಯಿಗಳು ಎಂದು ಮಾಡಿದರೆ, ಬೇರೆ ಎಲ್ಲರಿಗೂ ಇದು ಅನ್ವಯವಾಗುತ್ತದೆ ಎನ್ನುವ ಭಾವನೆ ಯಿಂದ ಹೇಳಿದ್ದೀರಿ.

Sri D. DEVARAJ URS.—That is exactly what I am saying. So, it cannot be so easily accepted now. As it is they get Rs. 8 per day.

ಶ್ರೀ ಎಚ್. ಡಿ. ದೇವೇಗೌಡ.—ತಾವು ಈ ವಿಷಯದಲ್ಲಿ ಸಂಬಂಧಪಟ್ಟವರಿಂದ ಪರಿಶೀಲನೆ ಮಾಡಿಸಿ ಸಭೆಗೆ ತಿಳಿಸಬೇಕು. ಏಕೆಂದರೆ, ಸ್ಟ್ಯಾಟುಟರಿ ಬೋರ್ಡಿಗೆ ಹೊರೆಯನ್ನು ಹೊರಿಸ ಬೇಕಾಗುತ್ತದೆ, ಅಂದಾಗ, ಈ ಬೋರ್ಡಿಗೆ ಸೀಮಿತವಾಗಿ ಕೆಲಸ ಮಾಡತಕ್ಕ ಶಿಕ್ಷಕರು ಏನು ಇದ್ದಾರೆ, ಇವರು ಮಾಡತಕ್ಕದ್ದು ವಿಶೇಷವಾದ ಕೆಲಸ. ಇದು ಎಲ್ಲಾ ಶಿಕ್ಷಕರಿಗೂ ಅನ್ವಯ ಆಗು ವುದಿಲ್ಲ. The Board is going to entrust this work to the teachers. ಇವತ್ತು ನೀವು ಹೆಚ್ಚಿಗೆ ಕೊಡತಕ್ಕ ಎರಡು ರೂಪಾಯಿಗಳ ಪ್ರಶ್ನೆ ಇಲ್ಲದೆ. ಈ ಪ್ರಶ್ನೆ ಎಲ್ಲಾ ನೌಕರರಿಗೂ ಅನ್ವಯವಾಗುತ್ತದೆ ಎಂದು ತಾವು ಹೇಳಿದ್ದೀರಿ. ದಯಮಾಡಿ ಇದನ್ನು ತಾವು ಪರಿಶೀಲನೆ ಮಾಡಿಸಿ, ತಿಳಿಸಬೇಕು. ನಾಳೆಯೇ ದಯಮಾಡಿ ತಿಳಿಸಿದರೆ ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್.—ಖಂಡಿತವಾಗಿಯೂ ತಿಳಿಸುತ್ತೇನೆ. I think you will also agree that there is financial commitment to a very huge extdnt. I will let you know tomorrow or the day after tomorrow about the exact financial commitments.

Sri H D. DEVE GOWDA.—I am prepared to extend any co-operation in this regard. ಇದನ್ನು ದೊಡ್ಡದಾಗಿ ಮಾಡಬೇಕು ಎಂದು ಅಲ್ಲ. ಈ ವಿಷಯದ ಬಗ್ಗೆ ತಾವು ನಾಳೆಯೇ ಸಭೆಗೆ ತಿಳಿಸಿದರೆ ಒಳ್ಳೆಯದು.

ಶ್ರೀ ಡಿ. ದೇವರಾಜ ಅರಸ್.—ತಿಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ, ನಾಳೆ ಆಗದಿದ್ದರೆ, ಖಂಡಿತವಾಗಿಯೂ ನಾಡಿದ್ದು ತಿಳಿಸುತ್ತೇನೆ.

ಶ್ರೀ ಎಂ ಎಸ್. ಕೃಷ್ಣನ್.—ಡಿ. ಎ. ವಿಚಾರದಲ್ಲಿ, ಇದನ್ನು ಜಾಸ್ತಿ ಮಾಡಿದರೆ, ಇದು ಎಲ್ಲಾ ನೌಕರ ವರ್ಗದವರಿಗೂ ಅನ್ವಯವಾಗುತ್ತದೆ, ಆದ್ದರಿಂದ ತೊಂದರೆಯಿದೆ ಎಂದು ಹೇಳಿ ದ್ದೀರಿ. ಅದು ನಿಜ ಇದ್ದರೂ ಇರಬಹುದು. ಈ ಪ್ರಶ್ನೆ ಇರುವುದು, ವ್ಯಾಲ್ಯುಯೇಷನ್ ಮಾಡು ವವರಿಗೆ ಮಾತ್ರ ಕೊಡುವುದು ಎಂದು. ಇವತ್ತಿನ ದಿವಸ ಅವರು ಬೆಂಗಳೂರಿಗೆ ಬಂದು ಈ ಕೆಲಸ ವನ್ನು ಮಾಡಬೇಕಾದರೆ ದುಡ್ಡು ಜಾಸ್ತಿ ಖರ್ಚಾಗುತ್ತದೆ. ಆದ್ದರಿಂದ ಈ ವ್ಯಾಲ್ಯೂಯೇಷನ್ ಮಾಡುವವರಿಗೆ ಮಾತ್ರ ಇದನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ತಾವು ಪರಿ ಶೀಲನೆ ಮಾಡಬಹುದು.

Sri D. DEVARAJ URS.—We will bear that suggestion in mind.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ವಿದ್ಯಾಮಂತ್ರಿಗಳು ಉತ್ತರ ಕೊಡುವಾಗ ಬಹಳ ಉದ್ವೇಗದಿಂದ ಹೇಳಿದರು. ನನಗರ್ಥವಾಗದೇ ಇರುವ ಕೆಲವೊಂದು ವಿಷಯಗಳನ್ನು ಕೇಳಬೇಕು ಎಂದು ಇಷ್ಟಪಡುತ್ತೇನೆ. ಈ ಉಪಾಧ್ಯಾಯರುಗಳ ಮೂಲಭೂತವಾದ ಬೇಡಿಕೆ ಳಲ್ಲಿ ಅವರ ಕೆಲಸದ ವಯೋಮಿತಿಯನ್ನು 58 ವರ್ಷದಿಂದ 55 ವರ್ಷಕ್ಕೆ ಇಳಿಸುವುದು ಮೂಲಭೂತವಾದ ಬೇಡಿಕೆಯೇ ಅಥವಾ ಮೌಲ್ಯಮಾಪನ ಮತ್ತು ಟಿ.ಎ.ಡಿ.ಎ., ಜಾಸ್ತಿ ಮಾಡುವುದೇ ? ಯಾವುದು ಮುಖ್ಯ ? ಯಾವುದನ್ನು ಮಾಡಿದರೆ ಇವರ ಪ್ರಶ್ನೆ ಇತ್ಯರ್ಥವಾಗಬಹುದು ?

ಶ್ರೀ ಡಿ. ದೇವರಾಜ ಅರಸ್.—ಪ್ರಶ್ನೆ ಇತ್ಯರ್ಥ ಮಾಡಿ ಎಂದು ಕೇಳುತ್ತೀರಾ ಅಥವಾ ಅವರು ಯಾವ ಉದ್ದೇಶದಿಂದ ಚಳುವಳಿ ಮಾಡಿದ್ದಾರೆಂದು ಕೇಳುತ್ತೀರಾ ?

ಶ್ರೀ ಎಂ. ಎಸ್. ಕೃಷ್ಣನ್.—ಈ ವಿಚಾರಗಳ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದೇವೆ.

ಶ್ರೀ ಡಿ. ದೇವರಾಜ ಅರಸ್.—ಹಾಗಿದ್ದಮೇಲೆ ಅವರು ಮಾಡಿರುವುದು ಸ್ಪಷ್ಟವಾಗಿ ಗೊತ್ತಾ ಗುತ್ತದೆ. ರಾಜಕೀಯ ಉದ್ದೇಶದಿಂದ ಚಳುವಳಿಯನ್ನು ನಡೆಸುವುದಕ್ಕೆ ಹೊರಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾವು ಕೆಲವು ಉಪಾಧ್ಯಾಯರನ್ನು ಕೇಳಿದಾಗ ಅವರು ವಯಸ್ಸಿನ ಬಗ್ಗೆ ದೊಡ್ಡ ಸಮಸ್ಯೆಯಾಗಿ ಇಟ್ಟುಕೊಂಡಿಲ್ಲ, ನಾವು ಚಳುವಳಿ ಮಾಡಿರುವುದು ವ್ಯಾಲ್ಯು ವ್ಯಾಪನಕ್ಕೆ ಮಾತ್ರ ಎಂದು ಹೇಳಿದರು.

ಶ್ರೀ ಎಚ್. ಡಿ. ದೇವೇಗೌಡ.—58 ವರ್ಷಕ್ಕೆ ಸಂಬಂಧಪಟ್ಟ ಪ್ರಶ್ನೆ ರಾಜ್ಯದ ಉಚ್ಚ ನ್ಯಾಯಾಲಯದ ಮುಂದೆ ಇದೆ. ಇದನ್ನು ಯಾವ ಬೆಂಚಿಗೆ ರೆಫರ್ ಮಾಡಿದ್ದಾರೋ ಗೊತ್ತಿಲ್ಲ. ಇದರ ಬಗ್ಗೆ ನಾವು ಹೆಚ್ಚು ತಲೆ ಕೆಡಿಸಿಕೊಳ್ಳಬೇಕಾದ ಅಗತ್ಯವಿಲ್ಲ. Again that point has to be considered at a later stage. ರಿಟೈರ್‌ಮೆಂಟ್ ವಿಷಯ ಎಂಫಸೈಸ್ ಮಾಡು ವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದ ರಿಂದ ಈ ವಿಷಯದಲ್ಲಿ ನಾನು ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸುವುದು ಅನಾವಶ್ಯಕ ಎಂದು ತಿಳಿದುಕೊಂಡಿದ್ದೇನೆ.

Sri D. DEVARAJ URS.—It is one of their demands.

ಶ್ರೀ ಎಚ್. ಡಿ. ದೇವೇಗೌಡ.—ನಾನೂ ಓದಿದ್ದೇನೆ, ಅವರ ಪ್ರಮುಖವಾಗಿರತಕ್ಕ ಬೇಡಿಕೆ, 10 ರೂಪಾಯಿನದು ಏನು ಇದೆ ಅದೇ.

ಶ್ರೀ ಡಿ. ದೇವರಾಜ ಅರಸ್.—ಅಧ್ಯಕ್ಷರೇ, ಶ್ರೀಮಾನ್ ದೇವೇಗೌಡರಿಗೆ ಹಾಗೆ ಹೇಳತಕ್ಕ ಉದ್ದೇಶ ಇದ್ದರೆ, ನಮ್ಮದು ಏನೂ ಅಭ್ಯಂತರವಿಲ್ಲ. ಆದರೆ ನನಗೆ ಈ ಬಗ್ಗೆ ಒಂದು ಟೆಲಿಗ್ರಾಂ ಬಂತು, ಅದರಲ್ಲಿ they have emphasised more on retirement age. Therefore, what I suggest is that it need not be harped upon again and again by anybody. So far another questions are concerned, I have already answered that they would certainly be looked into as suggested by Mr. Krishnan. I shall see that if they are legally possible we are prepared to reconsider those questions. Please allow us to examine those cases. Without examining I cannot give off-hand answer at this stage. I do appreciate your sympathy ; we are all sympathetic so far as that particular question is concerned. Let not other questions like age of retirement and other demands cloud the issue. With these answers, I think the hon. members of the Opposition are satisfied. I appeal to those who have resorted to Satyagraha to call it off.

ಶ್ರೀ ಎಚ್. ಡಿ. ದೇವೇಗೌಡ.—ಮತ್ತೆ ಕೆಲವು ಬೇಡಿಕೆಗಳು ಏನಿವೆ 133—290 ರೂಪಾಯಿ ಗಳವರೆಗೆ ಸ್ಕೇಲರಿ ಡ್ರಾ ಮಾಡುವ ಫಿಜಿಕಲ್ ಎಜುಕೇಷನ್ ಟೀಚರ್ಸ್‌ಗೆ ತುಕೋಳ್ ಕಮಿಷನ್ ರಿಪೋರ್ಟ್ ಪ್ರಕಾರ ಅವರ ಮೂಲವೇತನ 100 ರೂಪಾಯಿಗಳು ಕಡಿಮೆ ಆಗಿದೆ. ಅದನ್ನು ನಿರ್ಣಯ ಮಾಡುವುದಕ್ಕೆ ಒಂದು ಕಾಲಮಿತಿ ಹೇಳುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅವರಿಗೆ ಇಂಟರ್ ಮೀಡಿಯಂ ಸ್ಕೇಲ್ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಈ ಸದನದಲ್ಲಿ ಹೇಳಲಿಲ್ಲ. ನನಗೆ ಹೇಗೆ ಅರ್ಥವಾಗ ಬೇಕು ? ಹೆಡ್‌ಮಾಸ್ಟರ್ಸ್ ಸಂಬಳದ ಬಗ್ಗೆ ಎರಡು ವರ್ಷಗಳ ಹಿಂದೆ ನಿರ್ಣಯ ಆಗಿದೆ. ಪೇ ಕಮಿಷನ್ ಮುಂದಿದೆ ಎಂದು ಹೇಳಿದರು. ಹಿಂದೆ ಸರ್ಕಾರದವರೇ ನಿರ್ಣಯ ಮಾಡಿದ್ದಾರೆ, ಇವತ್ತು ಅದನ್ನು ಜಾರಿಗೆ ಕೊಡಲಿಕ್ಕೆ ಏನು ತೊಂದರೆ ಇದೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹೆಡ್ ಮಾಸ್ಟರ್ಸ್‌ನ ಸಂಬಂಧಪಟ್ಟದ್ದು ಆಗಲೇ ಹೇಳಿದೆ. ಅದನ್ನು ಸಾಧ್ಯವಾದಷ್ಟು ಬೇಗ ತೀವ್ರಗತಿಯಿಂದ ಪರಿಶೀಲನೆ ಮಾಡಿ ಒಂದು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ವಿದ್ಯಾ ಇಲಾಖೆಗೆ ಈಗಾಗಲೇ ಬರೆದಿದ್ದೇನೆ. ಲ್ಯಾಂಗ್ವೇಜ್ ಟೀಚರ್ಸ್ ಮಟ್ಟಿಗೆ ತುಕೋಳ್ ಕಮಿಷನ್ ವರದಿಯಲ್ಲಿ ಲೋಪದೋಷಗಳು ಆಗಿದೆ ಎಂದು ಹೇಳಿದ್ದಾರೆ. ಅದು ಬಂದಂಥ ಕಾಲದಲ್ಲಿ ಸರ್ಕಾರ ಯೋಚನೆ ಮಾಡಿ ಒಂದು ಇಂಟರ್‌ಮೀಡಿಯಂ ಸ್ಕೇಲ್ ಅವರಿಗೆ ಕೊಟ್ಟು ಅದರ ಜೊತೆಗೆ ಟ್ರೈನಿಂಗ್ ಫೆಸಿಲಿಟೀಸ್ ಕೂಡ ಕೊಟ್ಟು ಅವರಿಗೂ ಒಂದು ಹೆಚ್ಚುವರಿ ಸ್ಕೇಲ್ ತೆಗೆದುಕೊಳ್ಳಲು ಅನುಕೂಲವಾಗುವಂತೆ ತೀರ್ಮಾನ ತೆಗೆದುಕೊಂಡಿದ್ದೇವೆ. ಅದರ ಪ್ರಕಾರ ಅದು ಮೈಸೂರು ಯೂನಿವರ್ಸಿಟಿ ಸಿಂಡಿಕೇಟ್ ಕಮಿಟಿ ಮುಂದೆ ಹೋಗಿ, ನಂತರ ಅಕಾಡಮಿಕ್ ಕೌನ್ಸಿಲ್ ಮುಂದೆ ಹೋಗಿ, ಒಂದು ಷಾರ್ಟ್ ಟರ್ಮ್ ಟ್ರೈನಿಂಗ್ ಕೋರ್ಸ್ ಪ್ರಾರಂಭಿಸಿ ಅದರ ಮುಖೇನ ಹೆಚ್ಚುವರಿ ಸ್ಕೇಲು ಪಡೆಯುವುದಕ್ಕೆ ಅರ್ಹತೆ ಸಂಪಾದನೆ ಮಾಡಿ

ಕೊಳ್ಳಲು ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಇನ್‌ಚಾರ್ಜ್‌ಅರೇಂಜ್ ಮೆಂಟ್ಸ್ ಬಗ್ಗೆ ಹೇಳಿದರು. ಅದು ಕೂಡ ಸುಪ್ರೀಂ ಕೋರ್ಟಿನಲ್ಲಿ ಇದೆ. ಇಲಾಖೆ ಬೇಡಿಕೆಗಳು ಬಂದಾಗ ಅದನ್ನೂ ಹೇಳಿದ್ದೇನೆ. ಸೀನಿಯಾರಿಟಿ ಲಿಸ್ಟ್ ಕೂಡ ಸುಪ್ರೀಂ ಕೋರ್ಟಿನಲ್ಲಿ ಇರುವುದರಿಂದ ಆ ವಿಷಯದಲ್ಲಿ ಅಂತಿಮವಾಗಿ ಇಷ್ಟು ದಿವಸದಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಸಂಘದ ಸದಸ್ಯರಿಗೂ, ಮುಖಂಡರುಗಳಿಗೂ ಈ ಮಾತನ್ನು ಈಗಾಗಲೇ ಹೇಳಿದ್ದೇನೆ.

ಅಧ್ಯಕ್ಷರು. –ನಿಲುವಳಿ ಸೂಚನೆ ಬಗ್ಗೆ ಮಾನ್ಯ ಸದಸ್ಯರು ಏನು ಮಾಡುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—10 ರೂಪಾಯಿ ಭತ್ಯದ ಬಗ್ಗೆ ಚೀಫ್ ಮಿನಿಸ್ಟರ್ ಪೂರ್ತಿ ವಿವರಣೆ ಕೊಡದ ಹೊರತು ನಾನು ಈ ನಿಲುವಳಿ ಸೂಚನೆ ಬಗ್ಗೆ ಅಂತಿಮವಾಗಿ ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ನಾನು ಹೇಳುವುದಕ್ಕೆ ಆಗುವುದಿಲ್ಲ. ಕಂಡೀಷನಲ್ ಕ್ಲಾಸ್ ಹಾಕಬೇಡಿ. These are all financial matter's which will have to be gone into carefully. I cannot say off-hand.

ಶ್ರೀ ಕಾಗೋಡು ತಿಮ್ಮಪ್ಪ.—ಕಾನೂನು ಅಡಚಣೆ ಬಂದರೆ ಕೃಷ್ಣನ್‌ರವರು ಹೇಳಿದ ಪ್ರಕಾರ 8 ರೂಪಾಯಿ ಇದ್ದುದನ್ನು 10 ರೂಪಾಯಿ ಮಾಡಿದರೆ ತೊಂದರೆಯಾಗುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ನಿಮ್ಮ ದೃಷ್ಟಿಯಿಂದ ತೊಂದರೆಯಾಗದೆ ಇರಬಹುದು, ತಮಗೆ ಎಲ್ಲಾ ಮುಖಗಳ ಪರಿಚಯ ಇಲ್ಲದೇ ಇರುವುದರಿಂದ ತೊಂದರೆಯಾಗದೆ ಇರಬಹುದು. ಹಿಂದಿನ ಕಾಲಕ್ಕೆ ಎಲ್ಲರನ್ನೂ ಬೆಂಗಳೂರಿಗೆ ಕರೆಸಿ ಪೇಪರ್ ಕರೆಕ್ಷನ್ ನಡೆಯುತ್ತಾ ಇರಲಿಲ್ಲ. ಈಗ ವಿಷಯ ಎಲ್ಲಾ ಗೊತ್ತಾದ ಮೇಲೆ ಡೀಸೆಂಟ್ರಲೈಸೇಸನ್ ಏಕೆ ಮಾಡಬಾರದು ಎಂದು ಯೋಚನೆ ಮಾಡುತ್ತಿದ್ದೇವೆ. ಈ ಎಲ್ಲಾ ಪ್ರಶ್ನೆಗಳು ಒಂದೊಂದಕ್ಕೆ ಲಿಂಕ್ ಇದೆ. ಎಲ್ಲಾ ಹಣ ಕೊಟ್ಟುಬಿಡೋಣ ಎಂದರೆ, ಅದು ಸರ್ಕಾರದ ದುಡ್ಡು, ಅದರ ಬಗ್ಗೆ ನಿಮಗೂ ಅಷ್ಟೇ ಜವಾಬ್ದಾರಿ ಇದೆ. ಎಲ್ಲರೂ ಸೇರಿ ಇದನ್ನು ವಿಚಾರಮಾಡಿ ನೋಡಬೇಕು.

All these matters will be examined and they will be legally examined. I will deal with it suitably.

Madam SPEAKER.—I will put the motion to the vote of the House. The question is :

" That this Assembly do now adjourn."

The motion was negatived.

Madam SPEAKER : There is still some time left we shall take up the Bills.

MEMBERS :—" No " " No ".

Madam SPEAKER : Now the House stands adjourned and will meet tomorrow at 1 P.M.

The House adjourned at Fiftysix Minutes past Five of the Clock to meet again at One of the Clock on Tuesday, the 23rd April 1974.